ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 12
ರೂ. 5/-
ಮಾರ್ಚ್ 22, 2009
ಕನ್ನಡ ವಾರಪತ್ರಿಕೆ



ಜನರ ಸಂಕಟಗಳ ಪರಿಹಾರಕ್ಕೊಂದು ಪರ್ಯಾಯ

ಮೂರನೇ ರಂಗ

ಆಂಧ್ರ: 'ಮಹಾಕೂಟಮಿ'ಗೆ ವಿಜಯದ ವಿಶ್ವಾಸ

ಒರಿಸ್ಸಾ: ಬಿಜೆಪಿ ಬಿಜೆಡಿ ಮುಸುಗುಡಿಗೆ ಗುದ್ದು

ದೈವಸೃಷ್ಟಿವಾದದ ಬುಡ ಅಲುಗಾಡಿಸಿದ

ವಿಕಾಸವಾದ

ಸ್ವಾಮಿ ವಿವೇಕಾನಂದರ ಪ್ರಖರ ವಿಚಾರಧಾರೆ

ವಿವೇಕಾನಂದರ ನೈಜ ವಿಚಾರಧಾರೆಯನ್ನು ಸಂಪೂರ್ಣ ಮರೆಮಾಚಿ ಸಂಘ ಪರಿವಾರ ಅವರ ಹೆಸರನ್ನು ದುರ್ಬಳಕೆ ಮಾಡುತ್ತಿದೆ. ಇಲ್ಲಿ ಧಾರ್ಮಿಕ ಸಹಿಷ್ಣುತೆ, ಮತಾಂತರ ಇತ್ಯಾದಿಗಳ ಕುರಿತು ವಿವೇಕಾನಂದ ವಿಚಾರವನ್ನು ನೀಡಲಾಗಿದೆ. ಈ ವಿವೇಕವಾಣಿಯ ಕುರಿತು ಸಂಘ ಪರಿವಾರ ಜನರಿಗೆ ಎಂದಾದರೂ ಹೇಳಿದೆಯಾ?

ಬಹುಧರ್ಮಗಳ ತೊಟ್ಟಿಲು ಭಾರತ



ವಿವೇಕಾನಂದರ ವಿಚಾರಗಳ ಆಯ್ಕೆ
ನವಕರ್ನಾಟಕ ಪಬ್ಲಿಕೇಷನ್ ಪ್ರೈ ಲಿ.
ಪ್ರಕಾಶನದ
ಕೋ. ಚನ್ನಬಸಪ್ಪ ಅವರ
'ಶ್ರೀ ಸ್ವಾಮಿ ವಿವೇಕಾನಂದ ಹಿಂದು ಸನಾತನವಾದಿಯೇ?'
ಕೃತಿಯಿಂದ

ಬುದ್ಧ ದೀರ್ಘಕಾಲ ಬದುಕಿ ಹಣ್ಣಾದ ವಯಸ್ಸಿನಲ್ಲಿ ತೀರಿದ. ಅಮೇರಿಕೆಯ ಓರ್ವ ಘನ ವಿಜ್ಞಾನಿ ಸ್ನೇಹಿತರು ನೆನಪಾಗುತ್ತಾರೆ. ಅವರು ಬುದ್ಧನ ಜೀವನ ಮತ್ತು ಉಪದೇಶಗಳಲ್ಲಿ ತುಂಬ ಆಸಕ್ತರಾಗಿದ್ದರು. ಅವರು ಬುದ್ಧನ ಮರಣವನ್ನು ಒಪ್ಪುತ್ತಲೇ ಇರಲಿಲ್ಲ. ಯಾಕೆಂದರೆ ಜನ ಅವನನ್ನು ಶಿಲುಬಿಗೆ ಏರಿಸಲಿಲ್ಲ! ಎಂಥ ಮಿಥ್ಯಾ ನಂಬುಗೆ! ಒಬ್ಬಾತ ಮಹಾತ್ಮನಾಗಬೇಕಾದರೆ ಅವನ ಹತ್ಯೆಯಾಗಬೇಕು....! ಮಹಾತ್ಮಬುದ್ಧ ಭಾರತೀಯರ ದೇವರುಗಳನ್ನೆಲ್ಲ ತುಚ್ಛೀಕರಿಸಿ, ಅಷ್ಟೇಕೆ ಈ ವಿಶ್ವದೊಡೆಯ ದೈವವನ್ನು ತಿರಸ್ಕರಿಸಿ, ಈ ದೇಶದ ಉದ್ದಗಲ ಅಡ್ಡಾಡಿ ಪ್ರಚಾರ ಮಾಡಿದ. ಆದರೂ ಬುದ್ಧ ತುಂಬ ದೀರ್ಘಕಾಲ ಬದುಕಿದ. ಎಂಬತ್ತು ವರ್ಷ ಬಾಳಿದ. ಈ ದೇಶದ ಅರ್ಧದಷ್ಟು ಜನರನ್ನು ತನ್ನ ಮತಕ್ಕೆ ಮತಾಂತರ ಮಾಡಿದ.

ಜನರೆಲ್ಲ ಒಂದೇ ಧರ್ಮಾನುಯಾಯಿಗಳಾಗಬೇಕೆಂದು ಭಗವಂತನ ಇಚ್ಛೆಯಾಗಿದ್ದರೆ ಇಷ್ಟೆಲ್ಲ ಧರ್ಮಗಳೇಕೆ ಹುಟ್ಟುತ್ತಿದ್ದವು? ಒಂದೇ ಧರ್ಮವನ್ನು ಎಲ್ಲರ ಮೇಲೂ ಹೇರಲು ಏನೇನೋ ವ್ಯರ್ಥ ಉಪಾಯ ಮಾಡಲಾಗಿದೆ. ಒಂದೇ ರ್ಧವನ್ನವಲಂಬಿಸಿ ಅನುಸರಿಸುವಂತೆ ಖಡ್ಗ ಪ್ರಯೋಗ ಮಾಡಿದಾಗಲೂ ಒಂದು ಧರ್ಮವಿದ್ದೆಡೆ ಹತ್ತು ಧರ್ಮಗಳು ತಲೆ ಎತ್ತಿದವೆಂಬುದಾಗಿ ಇತಿಹಾಸ ಸಾರುತ್ತಿದೆ. ಒಂದೇ ಧರ್ಮ ಎಲ್ಲರಿಗೂ ಹಿಡಿಸಲಾರದು. ಕ್ರಿಯೆ, ಪ್ರತಿಕ್ರಿಯೆಗಳೆಂದು ಎರಡು ಶಕ್ತಿ ಪ್ರವಾಹಗಳ ಫಲ ಮನುಷ್ಯ. ಆ ಕ್ರಿಯೆ, ಪ್ರತಿಕ್ರಿಯೆಗಳೇ ಅವನನ್ನು ಯೋಚನೆಗೆ ಹಚ್ಚುತ್ತವೆ... ಮನುಷ್ಯ ಯೋಚನಾಶಕ್ತಿಯುಳ್ಳ ಪ್ರಾಣಿ. ಮನಸ್ಸಿದ್ದವನು ಮನುಷ್ಯ. ಯೋಚನಾಶಕ್ತಿ ಹೋಯಿತೆಂದರೆ ಅವನು ಮನುಷ್ಯನಾಗಿ ಉಳಿಯಲಾರ. ಕೇವಲ ಪಶುವಿಗಿಂತ ಉತ್ತಮನಲ್ಲ... ಅಂಥ ಪರಿಸ್ಥಿತಿ ಭಾರತಕ್ಕೆ ಬಾರದಿರದಂತೆ ಭಗವಂತ ಕರುಣಿಸಲಿ. ವೈವಿಧ್ಯದಲ್ಲಿ ಐಕ್ಯತೆಯು ಮನುಷ್ಯನು ಮನುಷ್ಯನನ್ನಾಗಿಸಲು ಉಳಿಸಿಕೊಳ್ಳಬೇಕು.... ಪ್ರತಿಯೊಂದು ಧರ್ಮದಲ್ಲೂ ಸಹಿತ ಸಂ.) ವೈವಿಧ್ಯತೆಯನ್ನು ಉಳಿಸಿಕೊಳ್ಳಬೇಕು. ಪ್ರತಿಯೊಂದು ಧರ್ಮದಲ್ಲೂ ಒಳ್ಳೆಯ ಮತ್ತು ಸಮರ್ಥ ಜನರಿದ್ದಾರೆ. ಅವರಿಂದ ಆಯಾ ಧರ್ಮಗಳು ಪೂಜನೀಯವೆನಿಸಿವೆ. ಅಂಥ ಉತ್ತಮ ಜನ ಎಲ್ಲ ಧರ್ಮಗಳಲ್ಲೂ (ಭಾರತದಲ್ಲಿ) ಇರುವುದರಿಂದ ಯಾವ ಮತಗಳ ಬಗೆಗೆ ದ್ವೇಷ ಸುತರಾಂ ಇರಬೇಕಾಗಿಲ್ಲ."

ಮಾನವತೆಯ ಹಿರಿಮೆ ಗರಿಮೆಯ ಉನ್ನತ ಭಾವನೆಯನ್ನು ಹಿಂದುತ್ವವು ಬೋಧಿಸುವಷ್ಟು ಉತ್ತಮವಾಗಿ ಪ್ರಪಂಚದ (ಇತರ) ಇನ್ನಾವ ಧರ್ಮವೂ ಬೋಧಿಸುವುದಿಲ್ಲ. ಆದರೆ ದರಿದ್ರರ ಮತ್ತು ದೀನರ ಕುತ್ತಿಗೆಯನ್ನು ಹಿಂದುತ್ವವು ಹತ್ತಿ ತುಳಿಯುವಷ್ಟು ರೀತಿಯಲ್ಲಿ ಜಗತ್ತಿನ ಇನ್ನಾವ ಧರ್ಮದಲ್ಲೂ ಇಲ್ಲ. (c.w.V p.15)

ಇಂದು ನಮಗೆ ಬೇಕಾದ ಧರ್ಮ

"ಲೋಕದಲ್ಲಿ ಧರ್ಮಗಳು ನಿರ್ಜೀವ ಅಣಕಗಳಾಗಿ ಹೋಗಿವೆ. ಜಗತ್ತಿಗೆ ಬೇಕಾದದ್ದು ಸದ್ಗುಣ. ಯಾರು ಪ್ರಜ್ವಲಿಸುವ ಪ್ರೇಮ, ನಿಸ್ವಾರ್ಥ ಜೀವನ್ನು ಜೀವಿಸುವರೊ ಅಂಥವರು ಜಗತ್ತಿಗೆ ಬೇಕಾಗಿದೆ. ಆ ಪ್ರೇಮದಿಂದ ಅವನಾಡುವ ಪ್ರತಿಯೊಂದು ಶಬ್ದವೂ ಸಿಡಿಲಿನಂತೆ ಮೊಳಗುತ್ತದೆ. ನಮ್ಮ ಆದರ್ಶವನ್ನು ಕೆಲವೇ ಶಬ್ದಗಳಲ್ಲಿ ರೂಪಿಸಬಹುದು. ಆ ಆದರ್ಶ ಇದು: ಮಾನವರಿಗೆ ಅವರ ದಿವ್ಯ ಸ್ವರೂಪವನ್ನು ಬೋಧಿಸುವುದು. ಹಾಗೂ ತನ್ನ ಬಾಳಿನ ಪ್ರತಿಯೊಂದು ಪ್ರವೃತ್ತಿಯಲ್ಲೂ ಅದನ್ನು ಹೇಗೆ ವ್ಯಕ್ತಪಡಿಸಬೇಕೆಂದು ತಿಳಿಸುವುದು."

[c.w.vol VII, p.489 Ed:1958]

"ಹಿಂದು ಕ್ರಿಶ್ಚಿಯನ್ ಇತ್ಯಾದಿ ಹೆಸರುಗಳೆಲ್ಲ ಮನುಷ್ಯ ಮನುಷ್ಯರ ಮಧ್ಯೆ ಅವರ ಸಹೋದರತ್ವ ಭಾವನೆಗಳಿಗೆ ಬಹುದೊಡ್ಡ ಅಡೆತಡೆಗಳು ಎಂಬುದಾಗಿ ನನ್ನ ಗುರುಗಳು ಹೇಳುತ್ತಿದ್ದರು. ಅವುಗಳನ್ನೆಲ್ಲ ಮೊಟ್ಟಮೊದಲು ಕೆಡಹಿ ಮುರಿದಿಕ್ಕಬೇಕು. ಅವುಗಳಲ್ಲಿ (ಧರ್ಮಗಳಲ್ಲಿ) ಇರುವ ಸತ್‌ಶಕ್ತಿಗಳೆಲ್ಲ ಕಳೆದುಹೋಗಿವೆ. ಈಗ ಕೇವಲ ಅವುಗಳ ಘೋರ ಘಾತರ ಪ್ರಭಾವಗಳು ಮಾತ್ರ ಉಳಿದಿವೆ. ಅವುಗಳ ಕರಾಳವಾದ ಪೈಶಾಚಿಕ ಇಂದ್ರಜಾಲದಿಂದ ನಮ್ಮಲ್ಲಿ ಅತ್ಯಂತ ಪುರುಷೋತ್ತಮರೂ ರಾಕ್ಷಸರಂತೆ ವರ್ತಿಸುತ್ತೇವೆ....."

[c.w.vol VI, p.303 6th Ed.]

"ವಿಧವೆಯ ಕಣ್ಣೀರನ್ನು ಒರೆಸದ, ಹಸಿದ ಅನಾಥರಿಗೆ ಒಂದು ತುತ್ತು ಅನ್ನವನ್ನು ಕೊಡದ ಯಾವ ದೇವರಲ್ಲೂ ಧರ್ಮದಲ್ಲೂ ನನಗೆ ಒಂದಿಷ್ಟೂ ನಂಬಿಗೆಯಿಲ್ಲ. ನನ್ನ ಮಕ್ಕಳೇ ಧರ್ಮದ ರಹಸ್ಯ ಇರುವುದು ಕೇವಲ ತತ್ವಗಳಲ್ಲಿ ಅಲ್ಲ; ಆಚರಣೆಯಲ್ಲಿದೆ. ಒಳ್ಳೆಯವರಾಗಿರುವುದು ಒಳ್ಳೆಯದನ್ನು ಮಾಡುವುದೇ ಧರ್ಮದ ಸಾರಸರ್ವಸ್ವ".

[c.w.vol VI, p.245]

"..........ಪಾವಿತ್ರ್ಯ, ಪರಿಶುದ್ಧತೆ, ಔದಾರ್ಯ ಎಂಬಿವು ಜಗತ್ತಿನಲ್ಲಿ ಯಾವುದಾದರೂ ಒಂದು ಧರ್ಮಪೀಠದ ಏಕಮಾತ್ರ ಸ್ವಾಮ್ಯವಲ್ಲ ಹಾಗೂ ಪ್ರತಿಯೊಂದು ಧರ್ಮದಲ್ಲೂ ಅತ್ಯಂತ ಶ್ರೇಷ್ಠ ಸದ್ಗುಣಿಗಳಾದ ಸ್ತ್ರೀ ಪುರುಷರು ಮೂಡಿಬಂದಿದ್ದಾರೆಂಬುದು ದಿಟವಾಗಿದೆ. ಈ ಸಾಕ್ಷವು ಕಣ್ಣು ಮುಂದಿರುವಾಗ ತನ್ನ ಧರ್ಮವೆ ಎಲ್ಲಕ್ಕಿಂತ ಮಿಗಿಲಾಗಿ ತಾನೆ ಬದುಕಿ ಬಾಳಬೇಕೆಂದೂ ಇತರ ಧರ್ಮಗಳ ನಾಶವಾಗಬೇಕೆಂದೂ ಯಾರಾದರೂ ಕನಸು ಕಟ್ಟಿದರೆ ಅವರ ಬಗ್ಗೆ ನನ್ನ ಹೃದಯಾಂತರಾಳದಿಂದ ಕನಿಕರವುಂಟಾಗುತ್ತದೆ. ಅಂಥವರಿಗೆ ನಾನು ಎತ್ತಿ ತೋರಿಸಬಯಸುತ್ತೇನೆ. ಎಷ್ಟೇ ಪ್ರತಿರೋಧವಾದರೂ ಶೀಘ್ರದಲ್ಲಿಯೇ, ಎಲ್ಲ ಧರ್ಮ ಧ್ವಜಗಳ ಮೇಲೆಯೂ 'ಸಹಾಯ ಮಾಡಿ; ಹೊಡೆದಾಡಬೇಡಿ', 'ಜೀರ್ಣಿಸಿಕೊಳ್ಳಿ, ಧ್ವಂಸ ಮಾಡಬೇಡಿ' 'ಸಾಮರಸ್ಯ, ಶಾಂತಿ; ವಿಧ್ವಂಸವೆಲ್ಲ' ಎಂದು ಬರೆಯಲಾಗುವುದು."

[c.w.vol.I, p.22 6th Ed : 1940]

" ಒಂದು ಮತದಲ್ಲಿ ಹುಟ್ಟುವುದು ಬಹು ಉತ್ತಮ ಆದರೆ ಹುಟ್ಟಿದ ಮತದಲ್ಲೇ ಸಾಯುವುದು ಬಹು ಕೆಟ್ಟದ್ದು. ಆಧ್ಯಾತ್ಮಿಕ ಚಿಕ್ಕ ಸಸಿ ಬೆಳೆಯಲು ಸಹಾಯಕವಾಗುವ ಒಂದು ನಿರ್ದಿಷ್ಟ ಸ್ವರೂಪದ ಪರಿಮಿತ ಚೌಕಟ್ಟಿನಲ್ಲಿ ಹುಟ್ಟುವುದು ಬಹು ಒಳ್ಳೆಯದು. ಆದರೆ ಅಲ್ಲಿ ಹುಟ್ಟಿದವನು ಅದೇ ರೂಪದಲ್ಲಿ ಅದರಲ್ಲೇ ಸಾಯುವುದು ಆತ ಆ ಎಲ್ಲೆಯನ್ನು ಮೀರಿ ಅಭಿವೃದ್ಧಿಯಾಗಿಲ್ಲವೆಂದೂ ಅವನ ಆತ್ಮಾಭಿವೃದ್ಧಿಯಾಗಿಲ್ಲವೆಂದೂ ತೋರಿಸುತ್ತದೆ".

[c.w.vol.II, p.39]

"ನಾವು ಪೂಜಿಸಬೇಕಾದ ಏಕಮಾತ್ರ ದೇವರೆಂದರೆ ಮಾನವ ದೇವನಲ್ಲಿರುವ ಮಾನವ (ಜೀವ) ಆತ್ಮ. ಸಕಲ ಪ್ರಾಣಿಗಳೂ ದೇವಾಲಯ ಎಂಬುದೇನೋ ನಿಜ. ಆದರೆ ಮಾನವ ಸರ್ವಶ್ರೇಷ್ಠ ದೇವಾಲಯ. ಸಮಸ್ತ ದೇವಾಲಯಗಳ ತಾಜಮಹಲ್. ಆ ದೇವಾಲಯದಲ್ಲಿ ನಾನು ಪೂಜೆ ಮಾಡದಿದ್ದರೆ, ಇನ್ನಾವ ದೇವರಿಂದಲೂ ಅನುಕೂಲವಾಗದು"

[c.w.vol.II, p.321]

"ನಮಗೆ ಬೇಕಾಗಿರುವುದು ಕಬ್ಬಿಣದ ಸ್ನಾಯುಗಳು, ಉಕ್ಕಿನ ನರಗಳು. ಸಾಕಷ್ಟು ಕಾಲ ನಾವು ಅತ್ತಿದ್ದೇವೆ. ಇನ್ನು ಅಳುವುದು ಸಾಕು. ಆದರೆ ನಿಮ್ಮ ಕಾಲುಗಳ ಮೇಲೆ ಎದ್ದುನಿಲ್ಲಿ. ಮನುಷ್ಯರಾಗಿ, ನಮಗೀಗ ಬೇಕಾಗಿರುವುದು ಮಾನವ ನಿರ್ಮಾಣ ಸಿದ್ಧಾಂತಗಳು. ನಮಗೆ ಬೇಕಾಗಿರುವುದು ಮಾನವ ನಿರ್ಮಾಣ ಸಮಗ್ರ ಶಿಕ್ಷಣ. ಸತ್ಯದ ಒರೆಗಲ್ಲು ಇಲ್ಲಿದೆ. ದೈಹಿಕವಾಗಿ ಬೌದ್ಧಿಕವಾಗಿ ಆಧ್ಯಾತ್ಮಿಕವಾಗಿ ನಿಮ್ಮನ್ನು ದುರ್ಬಲ ಮಾಡುವುದೇನಿದ್ದರೂ ಅದನ್ನು ವಿಷವೆಂದು ತಿರಸ್ಕರಿಸಿಬಿಡಿ, ಅದರಲ್ಲಿ ಜೀವವಿಲ್ಲ. ಅದು ಸತ್ಯವಾಗಿರಲಾರದು. ಸಬಲರನ್ನಾಗಿ ಮಾಡುವುದೇ ಸತ್ಯ. ಸತ್ಯ ಶುದ್ಧವಾದದ್ದು. ಸತ್ಯ ಸಮಸ್ತಜ್ಞಾನ."

[c.w.vol.III, p.224-25]

ಚಾತುರ್ವರ್ಣ, ಪುರೋಹಿತ್ಯಶಾಹಿ

"ಭಾರತ ದೇಶ ಔನ್ನತ್ಯಕ್ಕೆ ಏರಬೇಕಾದರೆ ಬಡವರಿಗೆ ಅನ್ನವನ್ನು ಉಣಿಸಬೇಕು; ಶಿಕ್ಷಣವನ್ನು ಹರಡಬೇಕು; ಪೂಜಾರಿ ಪೌರೋಹಿತ್ಯವನ್ನು ನಿರ್ಮೂಲನೆ ಮಾಡಬೇಕು. ಪೌರೋಹಿತ್ಯಶಾಹಿ ಕೂಡದು, ಬೇಕಾಗಿಲ್ಲ. ದೌರ್ಜನ್ಯ ಕೂಡದು............ಆಂಗ್ಲರಿಂದ ಹೆಚ್ಚು ಅಧಿಕಾರ ಪಡೆಯಲು ನಮ್ಮ ಯುವ ಹುಚ್ಚರು ಸಭೆ ಏರ್ಪಡಿಸುತ್ತಾರೆ. ಇವರನ್ನು ನೋಡಿ ಅವರು ಗಹಗಹಿಸಿ ನಗುತ್ತಾರೆ. ಯಾರು ಇತರರಿಗೆ ಸ್ವಾತಂತ್ರ್ಯ ಕೊಡಲಾರರೊ ಅವರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ. ಒಂದು ವೇಳೆ ಆಂಗ್ಲರು ಎಲ್ಲ ಅಧಿಕಾರವನ್ನು ಕೊಟ್ಟರೆಂದು ಇಟ್ಟುಕೊಳ್ಳಿ. ಆಗ ಅಧಿಕಾರಕ್ಕೆ ಬಂದವರು ಜನರನ್ನು ಅದುಮಿಟ್ಟುಕೊಳ್ಳುವರು. ಅಂಥವರಿಗೆ ಅಧಿಕಾರ ಇರಬೇಕಾಗಿಲ್ಲ. ದಾಸರು ಇತರರನ್ನು ದಾಸರನ್ನಾಗಿ ಮಾಡಿಕೊಳ್ಳಲು ಬಯಸುತ್ತಾರೆ...."

[c.w.vol. IV, p.368-]

"ನೀವು ಭಾರತ ಇತಿಹಾಸವನ್ನು ಓದುತ್ತಿದ್ದೀರಾ? ರಾಮಾನುಜರು ಯಾರು? ಶಂಕರರು ಯಾರು? ನಾನಕ್ ಯಾರು?.............ರಾಮಾನುಜರು ಕೆಳವರ್ಗದ ಜನರನ್ನು ಪ್ರೀತಿಸಲಿಲ್ಲವೇ? ಮ್ಲೇಚ್ಛನನ್ನೂ ತಮ್ಮ ಕೋಮಿನಲ್ಲಿ ಸೇರಿಸಿಕೊಳ್ಳಲು ಅವರು ತಮ್ಮ ಜೀವಮಾನವೆಲ್ಲ ಶ್ರಮಿಸಲಿಲ್ಲವೇ? ಮಹಮ್ಮದೀಯರನ್ನೂ ತಮ್ಮ ಸೆರಗಿನಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಲಿಲ್ಲವೇ? ನಾನಕ್, ಹಿಂದು ಮತ್ತು ಮಹಮ್ಮದೀಯರೊಡನೆ ಕೂಡಿ ಒಂದು ನೂತನ ಪರಿಸ್ಥಿತಿಯನ್ನು ಸೃಷ್ಟಿಸಲು ಪ್ರಯತ್ನಿಸಲಿಲ್ಲವೇ? ಅವರೆಲ್ಲರೂ ಪ್ರಯತ್ನಿಸಿದರು. ಅವರ ಆ ಕೆಲಸ ಇನ್ನೂ ಮುಂದುವರಿದಿದೆ....."

[c.w.vol. III, p.219-]

"ಸಮಾಜ ಸುಧಾರಕರ ಒಂದು ಮುಖವಾಣೀ (ಪತ್ರಿಕೆ)ಯಲ್ಲಿ ನನ್ನನ್ನು ಶೂದ್ರ ಎಂದು ಕರೆದಿರುವುದಾಗಿ ಓದಿದೆ. ಶೂದ್ರನಿಗೆ ಸನ್ಯಾಸದ ಅಧಿಕಾರ ಎಲ್ಲಿದೆ ಎಂದು ನನಗೆ ಸವಾಲು ಹಾಕಿದ್ದಾರ....... ನನ್ನನ್ನು

ಪುಟ 14 ಕ್ಕೆ

ಸಂಪಾದಕೀಯ

ಬಿಜೆಪಿಯಲ್ಲಿ ಕಚ್ಚಾಟ ಅಧ:ಪತನದ ರಾಜಕಾರಣ

ಭಾರತೀಯ ಜನತಾ ಪಕ್ಷದೊಳಗಿನ ಜಗಳ ಬೀದಿಗೆ ಬಿದ್ದಿದೆ. ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ಜಗಳ ತಾರಕಕ್ಕೇರಿದೆ. ಬಿಜೆಪಿಯ ಹಿರಿಯ ನಾಯಕ ಬಿ.ಬಿ.ಶಿವಪ್ಪ, ಮಾಜಿ ಕೇಂದ್ರ ಸಚಿವ, ಸಂಸದ ಬಸವನಗೌಡ ಪಾಟೀಲ್ ಯತ್ನಾಳ್, ಇನ್ನೊಂದೆಡೆ ದಲಿತ ನಾಯಕನೆಂದು ಪ್ರತಿನಿಧಿಸುವ ರಾಜ್ಯಸಭಾ ಸದಸ್ಯರಾದ ಕೆ.ಬಿ.ಶಾಣಪ್ಪ ಮುಂತಾದವರು ಮುಖ್ಯಮಂತ್ರಿ ಯಡಿಯೂರಪ್ಪ, ಪಕ್ಷದ ಅಧ್ಯಕ್ಷ ಸದಾನಂದಗೌಡರ ಮೇಲೆ ಸಿಡಿದೆದ್ದು ಸಮರ ಸಾರಿದ್ದಾರೆ.

ಬಿಜೆಪಿ ಪಕ್ಷ ಅತ್ಯಂತ ಶಿಸ್ತುಬದ್ಧ, ತತ್ವನಿಷ್ಠ ಪಕ್ಷವೆಂದು ಹೇಳಿಕೊಳ್ಳುವುದು ಹಾಸ್ಯಾಸ್ಪದವೂ, ಬೊಗಳೆಯದ್ದೂ ಆಗಿದೆ. ರಾಜ್ಯದಲ್ಲಿ ಮಾಜಿಕೇಂದ್ರ ಸಚಿವ ಅನಂತಕುಮಾರ್ ಮತ್ತು ಯಡಿಯೂರಪ್ಪನವರ ಬಣಗಳಿಂದು ವಿಭಜನೆಗೊಂಡು ಕಾದಾಡುವುದು ತಿಳಿದದ್ದೇ. ಹಾಗೆಯೇ ಅಖಿಲ ಭಾರತ ಮಟ್ಟದಲ್ಲಿ ಅದ್ವಾನಿ ಮತ್ತು ರಾಜನಾಥ್‌ಸಿಂಗ್‌ರ ನಡುವಿನ ಗುಂಪುಗಾರಿಕೆಯೂ ಅರುಣ್ ಜೆಟ್ಲಿಯ ಇತ್ತೀಚಿನ ಬಂಡಾಯದಲ್ಲಿ ಸ್ಫೋಟಿಸಿದೆ. ಹೀಗಾಗಿ ಬಿಜೆಪಿ ಬಂಡವಾಳಶಾಹಿ ಭೂಮಾಲಿಕ ವರ್ಗಗಳ ಪಕ್ಷವಾಗಿ ಅತ್ಯಂತ ಉಗ್ರ ಬಲಪಂಥೀಯ ವಾದವನ್ನು, ಫ್ಯಾಸಿಸ್ಟ್ ಮನೋಭಾವವನ್ನು ಮೈಗೂಡಿಸಿಕೊಡಿರುವ ಪಕ್ಷವಾಗಿರುವುದರಿಂದ ಈ ಕದನ, ಕಲಹ ಬಡಿದಾಟಗಳು ಅಷ್ಟೇ ಸಹಜ ವರ್ಗಗುಣಗಳಿಂದಲೇ ಕೂಡಿರುತ್ತವೆ.

ಕರ್ನಾಟಕದಲ್ಲಿ ಈಗ ಭುಗಿಲೆದ್ದಿರುವ ಜಗಳ ಪಕ್ಷದೊಳಗೆ ಎಲ್ಲರನ್ನೂ ಮೂಲೆಗುಂಪು ಮಾಡಿ ತನ್ನದೇ ಮೇಲುಗೈ ಸಾಧಿಸುವ, ಮುಖ್ಯಮಂತ್ರಿ ಯಡಿಯೂರಪ್ಪನವರ ಕ್ರಮಗಳ ವಿರುದ್ಧ ಎಂಬುದು ಬಂಡಾಯಗಾರರು ಬಹಿರಂಗಪಡಿಸಿದ್ದಾರೆ.

ತನ್ನ ವಲಯವನ್ನು ಬಲಗೊಳಿಸಲೆಂದೇ 'ಆಪರೇಷನ್ ಕಮಲ' ದಂತಹ ಅಕ್ರಮಗಳ ಮೂಲಕ ಸೆಳೆದು ಕೋಟೆ ಕಟ್ಟಿಕೊಳ್ಳುತ್ತಿದ್ದು, ವಲಸಿಗರಿಗೇ ಮನ್ನಣೆಯನ್ನು ಲೋಕಸಭೆ, ನಿಗಮ, ಮಂಡಳಿ ಇತ್ಯಾದಿಗಳನ್ನು ನೀಡಲಾಗುತ್ತಿದೆ ಎಂಬುದು ದೂರು. ಮೂಲ ನಿವಾಸಿಗಳು. ವಲಸಿಗರು ಎಂಬ ನೆಲೆಯಲ್ಲಿಯೂ ಈ ಕದನ ನಡೆದಿದೆ.

ಯಡಿಯೂರಪ್ಪ ಸರ್ಕಾರ ಹಾಗೂ ಪಕ್ಷದ ಮೇಲೆ ಹಿಡಿತ ಸಾಧಿಸಲು ನಿರಂತರವಾಗಿ ಹಲವು ಪ್ರಯತ್ನ ಮಾಡುತ್ತಲೇ ಬಂದಿರುವುದನ್ನು ಗಮನಿಸಬಹುದು. ತನ್ನ ಸುತ್ತಲೇ ಒಂದು ಬಲವಾದ ಕೋಟೆ ಕಟ್ಟುವುದು ಗೋಚರದ ಸಂಗತಿಗಳೇ. ತಮ್ಮ ಬಹುತೇಕ ವ್ಯವಹಾರಗಳನ್ನು ಅವರ ಮಕ್ಕಳೇ ನೋಡಿಕೊಳ್ಳುತ್ತಿದ್ದು, ಈಗ ಮಗನನ್ನೇ ಸಂಸತ್‌ಗೆ ಅಭ್ಯರ್ಥಿಯನ್ನಾಗಿಸುವ ಮೂಲಕ ಕುಟುಂಬದ ರಾಜಕಾರಣದಲ್ಲಿ ತಾನೇನು ಹಿಂದೆಬಿದ್ದಿಲ್ಲ ಎಂದೂ ಆಡಿದ ಮಾತಿಗೆ ವಿರುದ್ಧವಾಗಿ ಸಮರ್ಥಿಸಿಕೊಳ್ಳುತ್ತಿರುವುದನ್ನು ಕಾಣಬಹುದು. ಹೀಗಾಗಿ ತನ್ನ ಕುಟುಂಬಕ್ಕೆ, ತಮಗೆ ವಿಧೇಯರಾಗಿರುವವರದ್ದೇ ಆಡಳಿತ ಎಂಬುದನ್ನು ಹೆಜ್ಜೆಗಳಲ್ಲಿ ತೋರಿಸುತ್ತಾ ಬಂದಿರುವುದು, ಇದರೊಂದಿಗೆ ಅಕ್ರಮ ಗಣಿ ದಂಧೆಗಾರರಾದ ರೆಡ್ಡಿ ಸಹೋದರರಿಗೆ ಪ್ರಾಶಸ್ತ್ಯವೆಂಬುದು ಸಚಿವ ಸಂಪುಟದಲ್ಲಿಯೂ, ಹೊರಗೂ ತೀವ್ರ ಟೀಕೆಗೆ ಗುರಿಯಾಗಿದೆ.

ಇದು ಒಂದು ಬಗೆಯ ಆಡಳಿತ ವೈಖರಿಯಾಗಿದ್ದರೆ. ಇನ್ನೊಂದು ಬದಿಯಲ್ಲಿ ಜಾತಿ ರಾಜಕಾರಣವೂ ಹಲವು ವಿಪರ್ಯಾಸಗಳನ್ನು, ವಿರೋಧ, ಅಸಹನೆಯನ್ನೂ ತಂದೊಡ್ಡಿದೆ. ಯಡಿಯೂರಪ್ಪನವರು ವೀರಶೈವರಿಗೆ, ವೀರಶೈವ ಕೆಲವು ಮಠಾಧೀಶರಿಗೆ ವಿಪರೀತ ಓಲೈಸುವುದರ ಮೂಲಕ ಜಾತಿ ರಾಜಕಾರಣದ ಕ್ರೋಢೀಕರಣಕ್ಕೆ ಇಳಿದಿದ್ದಾರೆ. ಇದು ಪಂಚ ಪೀಠಾಧೀಶರಾದ ವೀರಶೈವ ಮಠಾಧಿಪತಿಗಳಲ್ಲಿಯೂ, ಒಕ್ಕಲಿಗ, ಹಿಂದುಳಿದ ಮಠಾಧೀಶರಲ್ಲಿಯೂ ತೀವ್ರವಾದ ಅಸಹನೆಯನ್ನು ಹುಟ್ಟಿಸಿದೆ. ಬೇರೊಬ್ಬ ವೀರಶೈವ ಲಿಂಗಾಯತ ನಾಯಕರ ಬೆಳವಣಿಗೆಯನ್ನು ಯಡಿಯೂರಪ್ಪ ಸಹಿಸಲಾರರು ಎಂಬುದಕ್ಕೆ ಜಗದೀಶ್ ಶೆಟ್ಟರ್, ಯತ್ನಾಳ್‌ರಂತಹ ಹಲವು ನಿದರ್ಶನಗಳನ್ನು ಅವರ ಪಕ್ಷದವರೇ ನೀಡುತ್ತಿದ್ದಾರೆ.

ಒಟ್ಟಾರೆ ವೀರಶೈವ, ಲಿಂಗಾಯತ ಜಾತಿ ಓಲೈಕೆ, ಮತ ಕ್ರೋಡೀಕರಣದ ಯತ್ನವು ರಾಜ್ಯದಲ್ಲಿನ ಇತರೆ ಒಕ್ಕಲಿಗ, ಕುರುಬ, ಇತ್ಯಾದಿ ಹಿಂದುಳಿದ ಜಾತಿಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರಲ್ಲಿ ಅಂತರವನ್ನು ಹೆಚ್ಚಿಸುತ್ತಿದೆ. ಸ್ವತ: ಬಿಜೆಪಿ ಎಸ್.ಸಿ, ಎಸ್.ಟಿ, ಮೋರ್ಚಾದವರೇ ಸಂಘಟಿಸಿದ ಸಮಾವೇಶಕ್ಕೇ ಯಾವೊಬ್ಬ ಬಿಜೆಪಿ ಹಿರಿಯ ನಾಯಕರು, ಮುಖ್ಯಮಂತ್ರಿಗಳೂ ಹಾಜರಿರದೇ ಹೋದದ್ದು, ಸಂಘಟಕರಲ್ಲಿ ಆಕ್ರೋಶ ತಂದು, ಬಿಜೆಪಿಗೆ ಇನ್ನೂ ಬೆಂಬಲಿಸಲಾರೆವು ಎಂದು ಬಹಿರಂಗವಾಗಿ ಘೋಷಿಸಿದ್ದು ಸಹ ಗಮನಿಸಬೇಕು. ಕೆ.ಬಿ.ಶಾಣಪ್ಪನಂತಹವರು ಬಹಿರಂಗ ವಾಗಿ ಮಾತನಾಡುತ್ತಿದ್ದಾರೆ. ಒಕ್ಕಲಿಗರ ಗುರುಗಳಾದ ಆದಿಚುಂಚನಗಿರಿ ಸ್ವಾಮೀಜಿ, ನಂಜಾಮರಿ ಮಠದ ಸ್ವಾಮಿ, ವೀರಶೈವ ರಂಭಾಪುರಿ ಮಠದ ಶ್ರೀ ರೇಣುಕಾಚಾರ್ಯ ಪೀಠಾಧ್ಯಕ್ಷರು ಬಹಿರಂಗ ಟೀಕೆ ಉಲ್ಲೇಖನೀಯ.

ಇಂತಹ ಸ್ಥಿತಿಯಲ್ಲಿ ಬಿಜೆಪಿ ನಾಯಕರ ಒಳಜಗಳ ಬಗೆಹರಿಸಲು ಆರ್.ಎಸ್.ಎಸ್ ಮುತುವರ್ಜಿ ವಹಿಸಿರುವುದು ಒಟ್ಟು ಆಡಳಿತ ಸೂತ್ರ ಈ ಸಂವಿಧಾನೇತರ ಪ್ರಜಾಪ್ರಭುತ್ವ ವಿರೋಧಿ ಶಕ್ತಿಯ ಕೈಯಲ್ಲಿರುವುದನ್ನು ತೋರಿಸುತ್ತದೆ. ಇನ್ನೊಂದು ರಾಜೀಸೂತ್ರ ರೂಪಿಸಲಾಗಿದೆಯೆಂಬುದು 'ಒಳಬಂಡಾಯಗಾರರಿಗೆ' ಮತ್ತದೇ ಹಣ ಆಮಿಷ, ಅಧಿಕಾರದ ಆಶೆಯಂತಹ ಅಧ:ಪತನದ ರಾಜಕಾರಣವನ್ನೇ ಅವಲಂಬಿಸಿ, ಜಾರಿಗೊಳಿಸಲಾಗುತ್ತಿದೆ. ಅಂದರೆ ಇಂತಹ ಅಧಿಕಾರದಾಹಿ, ಜನವಂಚಕರಿಗಾಗಿ ರಾಜ್ಯದ ಅದೆಷ್ಟು ಸಂಪತ್ತು ಹಾಳಾಗುತ್ತಿದೆ ಎಂಬುದು ಅತ್ಯಂತ ಆತಂಕದ ವಿಷಯವಾಗಿದೆ.

ಅಧಿಕಾರಕ್ಕೇರಿದ ಕೇವಲ ಹತ್ತು ತಿಂಗಳಲ್ಲಿಯೇ ಬಿಜೆಪಿ ತನ್ನ ನಿಜ ಬಣ್ಣ ಏನೆಂದು ತೋರಿಸಿದೆ. ಇಂತಹವರಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಿ, ಮಣ್ಣು ಮುಕ್ಕಿಸಬೇಕಿರುವುದು, ರಾಜ್ಯವನ್ನು, ದೇಶವನ್ನೂ ಕಾಯಲು ಜನತೆಗಿರುವ ಒಂದು ಸುವರ್ಣ ಅವಕಾಶ.

ಜನೋತ್ಸಾಹದ ಮೂರನೆಯ ರಂಗ ಮತ್ತು ಮಾಧ್ಯಮಗಳು



ಕರ್ನಾಟಕದ ನೆಲದಿಂದ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೆಯ ರಂಗದ ಅಧಿಕೃತ ಅಸ್ತಿತ್ವಕ್ಕೆ ಚಾಲನೆ ದೊರೆತಿದ್ದು ಈ ವಾರದಲ್ಲಿನ ಅತ್ಯಂತ ಐತಿಹಾಸಿಕ ಘಟನೆ. ಈ ಅಭೂತಪೂರ್ವ ಪ್ರಕ್ರಿಯೆಗೆ ಹೃದಯವಾಗಿ ನಿಂತವರು ನೆರೆದಿದ್ದ ಲಕ್ಷಾಂತರ ಜನ. ನಾಯಕರು ಆಡಿದ ಪ್ರತಿ ಮಾತಿಗೂ ಅರ್ಥಪೂರ್ಣವಾಗಿ ಸ್ಪಂಧಿಸಿ 'ಜನೋತ್ಸಾಹ ಸಮಾವೇಶ' ಎಂಬುದನ್ನು ಅಕ್ಷರಶ: ನಿಜಗೊಳಿಸಿದರು. ಪರ್ಯಾಯ ಕಟ್ಟುವ ಜನರ ಈ ಉತ್ಸಾಹವೂ ಅಲ್ಲಿದ್ದ ವಿವಿಧ ಪಕ್ಷಗಳ ನಾಯಕರಿಗೂ ಹುಮ್ಮಸ್ಸು ಇಮ್ಮಡಿಗೊಳಿಸಿತು. ಅದರ ಒಟ್ಟು ವರದಿ ವಿಶ್ಲೇಷಣೆಗಳು ಒಳಪುಟಗಳಲ್ಲಿ ಹರವಿಕೊಂಡಿವೆ.

ವಿಶೇಷವಾಗಿ ಪ್ರಸ್ತಾಪಿಸಬೇಕಿರುವುದು ಮಾಧ್ಯಮಗಳ ಪ್ರತಿಕ್ರಿಯೆ. ಸಮಾವೇಶದ ಮೊದಲು ಸ್ವಲ್ಪ ಮೇಲುದನಿಯಲ್ಲಿ ಮಾತನಾಡುತ್ತಿದ್ದ ಟಿ.ವಿ, ಪತ್ರಿಕೆಯ ಮಾಧ್ಯಮಗಳು ಸಮಾವೇಶದ ಸುತ್ತ ಅಂದು ಅದರ ಮಹತ್ವವನ್ನು ನಿರ್ಲಕ್ಷಿಸಲಾಗಲಿಲ್ಲ. ಕನ್ನಡದ ಬಹುತೇಕ ಪತ್ರಿಕೆಗಳು ಮುಖಪುಟದಲ್ಲಿ ವಿವರ ಸುದ್ದಿ ಪ್ರಕಟಿಸಿದವು. ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್, ದಿ ಹಿಂದೂ, ಡೆಕ್ಕನ್ ಹೆರಾಲ್ಡ್‌ಗಳಲ್ಲಿ ತಲೆಬರಹ, ಸುದ್ದಿ ಪ್ರಾಧಾನ್ಯತೆ ಮಿತಿ ಇದ್ದರೂ ಮುಖಪುಟ ಸುದ್ದಿಗಳೇ ಇದರಲ್ಲಿಯೂ ವ್ಯಾಖ್ಯಾನ ವೈವಿಧ್ಯ ಇರುವಂತಹದೆ. ಇನ್ನೂ ವಿಜಯ ಕರ್ನಾಟಕ, ಟೈಮ್ಸ್ ನಂತಹ ಪತ್ರಿಕೆಗಳು ಭಾರತೀಯ ರಾಜಕಾರಣ ಎರಡು ಪಕ್ಷಗಳು ನಡುವೆಯೇ ಕ್ರೋಡೀಕರಣಗೊಳಿಸಬೇಕೆಂಬ ನಿಲುವಿಗೆ ಅಂಟಿಕೊಂಡೇ ಸುದ್ದಿ ಬರೆದವು. ಇದೇ ದಾಟಿ ಅನುಸರಿಸುವ ಇತರರು 'ಪ್ರಧಾನಿ ಅಭ್ಯರ್ಥಿ' ಎಂಬ ಕೂಸು ಹುಟ್ಟುವ ಮುನ್ನವೇ ಹೋಲಿಸಿಟ್ಟುಕೊಂಡ ಕುಲಾವಿಗೆ ತಡವರಿಸಿ ಮೂರನೇ ರಂಗದ ಮಹತ್ವದ ಪಾತ್ರ ಹಾಗೂ ಮತದಾರರ ಪ್ರಜಾಸತ್ತಾತ್ಮಕ ತೀರ್ಪು ಗೌಣಗೊಳಿಸಲು ನೋಡಿದ್ದು ಇದೆ. ಇಂತಹವರಿಗೆ ಕಾಲವೇ ಉತ್ತರ ಹೇಳಲಿದೆ.

ಪ್ರಜಾವಾಣಿ.... ಪುನರಾವ ಲೋಕನದಲ್ಲಿ....

ಅಂದ ಹಾಗೆ ಕನ್ನಡದ ಅತ್ಯಂತ ಪ್ರಮುಖ ಪತ್ರಿಕೆ ಪ್ರಜಾವಾಣಿಯಲ್ಲಿ ಇತ್ತೀಚೆಗೆ ಮತ್ತೆ ಹಲವು ಬದಲಾವಣೆಗಳು ಕಾಣತೊಡಗಿವೆ. ಈಗೀಗಲಂತೂ ಪತ್ರಿಕೆ 'ಕೇಶವಶಿಲ್ಪ' ಮತ್ತು ಮುಖ್ಯಮಂತ್ರಿಗಳ ಸುತ್ತಲೇ ಗಿರಿಕೆ ಹೊಡೆಯುತ್ತಾ ಬೇತಾಳನಂತಾಗಿ 'ವಿಶ್ವಾಸಾರ್ಹ'ತೆಯನ್ನೇ ಕಳೆದುಕೊಳ್ಳ ತೊಡಗಿತ್ತು. ಇದು ಇನ್ನೊಂದು ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಹೊಸ ದಿಗಂತವೇ ಆಗುತ್ತಿದೆಯೇ ಎಂದು ಅನುಮಾನ ಹುಟ್ಟಿಸಿ ಇದರ ಅಸ್ತಿತ್ವದ ಅಗತ್ಯವೇನು ಎಂದೆಲ್ಲಾ ಅನ್ನಿಸತೊಡಗಿತ್ತು. ಇದನ್ನು ನಾಡಿನ ಪ್ರಜ್ಞಾವಂತರು ಗಮನಿಸಿ ಸಾಕಷ್ಟು ಟೀಕೆ ವಿಮರ್ಶೆಗಳ ದನಿ ಎತ್ತಿದರು. ಪತ್ರಿಕೆ ಪಕ್ಷಪಾತಿಯಲ್ಲದ ಕನಿಷ್ಟ ಸೌಜನ್ಯದ ವಸ್ತುನಿಷ್ಟತೆ ಉಳಿಸಿಕೊಂಡು ಜನರ ದನಿಗೆ ಇಂಬು ನೀಡದೇ ಅಪಾರ ಪ್ರಜ್ಞಾವಂತ ಓದುಗರಿಂದಲೂ ದೂರ ಹೋಗತೊಡಗಿತ್ತು. ಇದನ್ನು ಅರಿತು ಕೊನೆಗೂ ಆಡಳಿತ ಮಂಡಳಿ ಸರಿಯಾದ, ನಿಷ್ಠುರ ಕ್ರಮ ಕೈಗೊಂಡು ಪುನ: ಪತ್ರಿಕೆ ಟ್ರಾಕ್‌ಗೆ ಬರುವಂತೆ ಯತ್ನ ನಡೆಸತೊಡಗಿದೆ. ಪರಿಣಾಮ ಕೆ.ಎನ್.ಶಾಂತಕುಮಾರ್ ಪ್ರಧಾನ ಸಂಪಾದಕರಾಗಿ ಬಂದಿದ್ದಾರೆ. ಆಧರೆ ಕೆಲವು ದಿನಗಳಲ್ಲೇ ದುಡಿದುಡಿದೂ ಹಣ್ಣಾದ, ಬದುಕಿಗೆ ಆಸರೆಯೇ ಇಲ್ಲದ ಶ್ರಮಜೀವಿಗಳು, ನೊಂದ ಮಹಿಳೆಯರ ನೋವಿನ ಕೂಗು ಮುಖಪಟ್ಟದಲ್ಲಿ ಕಾಣಿಸಿಕೊಂಡಿವೆ. ಒಳವಿಶ್ಲೇಷಣೆ ಬರಹಗಳಲ್ಲೂ, ವಾಚಕರವಾಣಿಯಲ್ಲಿಯೂ ವಿಮರ್ಶೆಯ ಚೈತನ್ಯ ಕಂಡಿದೆ. ಈಗಂತೂ 'ಎದ್ದವು ನವಶಕ್ತಿಗಳು ಒಂದಾಗಿ' ಎಂಬ ತಲೆಬರಹದಿಂದ ಮೂರನೇ ರಂಗದ ಅಸ್ತಿತ್ವ ಪಾತ್ರ ಗುರುತಿಸಿದ್ದೂ ಗಮನಿಸದೇ ಇರಲಾಗದು. ಆದ್ದರಿಂದ ಈ ಪ್ರಕ್ರಿಯೆ ದೃಢಗೊಳ್ಳಲಿ, ಜನದನಿಗೆ ಪ್ರಾಮುಖ್ಯ ಸಿಗಲಿ, ಕನಿಷ್ಟ ಪ್ರಜಾಸತ್ತಾತ್ಮಕ ಜಾತ್ಯಾತೀತ ಮೌಲ್ಯಗಳಿಗೆ ಸ್ಥಾನ ದೊರೆತು ಕರ್ನಾಟಕವನ್ನು ಉಳಿಸಲು ತೊಡಗಲಿ ಎಂಬುದು ಪ್ರಗತಿಪರರ ಆಶಯ. ಕರ್ನಾಟಕ ರಾಜಕಾರಣವನ್ನು ಹಾಳು ಮಾಡುವಲ್ಲಿ, ಕೋಮುವಾದಿ ಶಕ್ತಿಗಳನ್ನು ವಿಜೃಂಬಿಸಿ ಅಧಿಕಾರಕ್ಕೆ ತರುವಲ್ಲಿ ಪತ್ರಿಕೆ, ಟಿ.ವಿ. ಮಾಧ್ಯಮಗಳು ತುತ್ತೂರಿಯಾಗಿ ತನ್ನದೇ ರೀತಿ ಪಾತ್ರ ವಹಿಸಿ ಅನಾಹುತ ಮಾಡಿರುವ ದೃಷ್ಟಾಂತ ಕಣ್ಣೆದುರೇ ಇರುವುದರಿಂದ ಇಷ್ಟು ಹೇಳಬೇಕಾಗಿದೆ. ಪುಟ್ಟ ಹಣತೆಯೂ ಹೋರಾಡುವ ಶಕ್ತಿಯೇ.

ಬಾಬಾಬುಡನ್‌ಗಿರಿ : ಉರುಸ್

ಪ್ರತಿ ವರುಷದಂತೆ ಈ ವರ್ಷವೂ ಮಾರ್ಚ್ 11 ರಿಂದ 13ರವರೆಗೆ ಬಾಬಾಬುಡನ್‌ಗಿರಿಯಲ್ಲಿ ಸಂದಿಲು ಉರುಸ್ ನಡೆದಿದೆ. ಇತ್ತೀಚಿನ ವರುಷಗಳಲ್ಲಿ ವಿಶೇಷವಾಗಿ ಜೆಡಿ(ಎಸ್) ನೊಂದಿಗೆ ಬಿಜೆಪಿಯು ಭಾಗೀದಾರನಾಗಿ ಅಧಿಕಾರ ನಡೆಸತೊಡಗಿದ ವರುಷವೇ 'ಉರುಸ್'ನ ಆಚರಣೆಯನ್ನು ಗೌಣಗೊಳಿಸಲು ಮತ್ತು

ಪುಟ 14 ಕ್ಕೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ :

ಅನ್ಯಾಯ, ಅಸಮಾನತೆ ವಿರುದ್ಧ ಹೋರಾಡಲು ಕರೆ



ಅಧ್ಯಕ್ಷತೆ ವಹಿಸಿದ್ದ ಮಮತಾ ಮಾತನಾಡುತ್ತಿರುವುದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ, ಜನವಾದಿ ಮಹಿಳಾ ಸಂಘಟನೆಯ ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಕುಂದಾಪುರ ತಾಲ್ಲೂಕು ಮಟ್ಟದ ಸಮಾವೇಶವು ಮಾರ್ಚ್ 8 ರಂದು ಕುಂದಾಪುರ ಹಂಚು ಕಾರ್ಮಿಕರ ಭವನದಲ್ಲಿ ಯಶಸ್ವಿಯಾಗಿ ಜರುಗಿತು. ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಮುಖಂಡರಾದ ಸಿ.ಕುಮಾರಿಯವರು ತಾಲ್ಲೂಕು ಮಟ್ಟದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ, ಮಾತನಾಡಿ, ಮಹಿಳೆಯರು ಸಮಾಜದಲ್ಲಿರುವ ಪುರುಷ ಪ್ರಧಾನ ಮೌಲ್ಯಗಳಾದ, ವರದಕ್ಷಿಣೆ ಪದ್ಧತಿ, ಲೈಂಗಿಕ ಕಿರುಕುಳ, ಹೆಣ್ಣಿನ ಭ್ರೂಣ ಹತ್ಯೆ, ಮಹಿಳೆ ಮೇಲೆ ನಡೆಯುವ ದೌರ್ಜನ್ಯದ ವಿರುದ್ಧ ಬದುಕಿನ ಹಕ್ಕಿಗಾಗಿ ಬೀದಿಗಿಳಿದು ಹೋರಾಟ ಮಾಡಬೇಕೆಂದು ಕರೆ ನೀಡಿದರು.

ನಾಲ್ಕು ಗೋಡೆ ಮಧ್ಯೆ ಇದ್ದು, ಕೇವಲ ಮಕ್ಕಳ ಹೆರುವುದು, ಲಾಲನೆ ಪಾಲನೆ ಮಾಡುವುದು ಮಾತ್ರ ಮಹಿಳೆಯರ ಜವಾಬ್ದಾರಿಯಲ್ಲ. ಬದಲಾಗಿ ಸಾಮಾಜಿಕ, ರಾಜಕೀಯವ ಕ್ಷೇತ್ರದಲ್ಲಿ ಮಹಿಳೆ ಮಧ್ಯೆ ಪ್ರವೇಶ ಮಾಡುವ ಅಗತ್ಯ ಹೆಚ್ಚಿದೆ. ಮಹಿಳೆ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬೇಕಾಗಿದೆ. ಎಂದು ವಿವರಿಸಿದರು.

ವಿಶ್ವ ಮಹಿಳಾ ದಿನಾಚರಣೆಯಾದ ಈ ದಿನ ಮಹಿಳೆ ಎಚ್ಚೆತ್ತುಕೊಂಡು ಜನವಾದಿ ಮಹಿಳಾ ಸಂಘಟನೆಯನ್ನು ಬಲಿಷ್ಠವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಟ್ಟುವುದಕ್ಕೆ ಮುಂದಾಗಬೇಕೆಂದರು.

ಸಮಾವೇಶವನ್ನು ಉದ್ದೇಶಿಸಿ, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕರ ಸಂಘದ ಕುಂದಾಪುರ ತಾಲ್ಲೂಕು ಅಧ್ಯಕ್ಷೆ ಸಬಿತಾ ಶೆಟ್ಟಿ, ಕಾರ್ಯದರ್ಶಿಯವರಾದ ಫಿಲೋಮಿನಾರವರು ಮಾತನಾಡಿದರು. ಬೀಡಿ ಕಾರ್ಮಿಕ ಮುಖಂಡರಾದ ಪ್ರೇಮ, ಸ್ತ್ರೀಶಕ್ತಿ ಸ್ವ ಸಹಾಯ ಗುಂಪಿನ ಒಕ್ಕೂಟದ ಅಧ್ಯಕ್ಷೆ ಸಾಕು ಬಾರಂದಾಡಿ ಮತ್ತು ಪೂರ್ಣಿಮಾರವರು ಸಂಘಟನೆಯನ್ನು ಬಲಪಡಿಸಲು ಸಲಹೆ ಸೂಚನೆ ನೀಡಿದರು.

ಅಧ್ಯಕ್ಷತೆ ವಹಿಸಿದ ಮಮತಾರವರು ಮಹಿಳಾ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಮುಖಂಡರಾದ ಉತ್ಪಲ ಕೆ. ಚಟುವಟಿಕೆಯ ವರದಿ ನೀಡುತ್ತಾ ಎಲ್ಲರನ್ನೂ ಸ್ವಾಗತಿಸಿದರು. ಸಾವಿತ್ರಿಯವರು ಕಾರ್ಯಕ್ರಮ ನಿರ್ವಹಿಸಿದರು. 30 ಮಂದಿಯ ನೂತನ ಸಮಿತಿಯನ್ನು ರಚಿಸಲಾಯಿತು.

ಮಮತಾರನ್ನು ಅಧ್ಯಕ್ಷರಾಗಿ, ಸಬಿತಾ ಶೆಟ್ಟಿ, ಸುಶೀಲರನ್ನು ಉಪಾಧ್ಯಕ್ಷರಾಗಿ, ಫಿಲೋಮಿನಾರನ್ನು ಕಾರ್ಯದರ್ಶಿಯಾಗಿ ಶಶಿಕಲಾ, ಪ್ರೇಮ, ಮೀನಾಕ್ಷಿ ಪವಾರ್, ಬಲ್ಕೀಸ್‌ರನ್ನು ಜೊತೆ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಯನ್ನು ಸೋಲಿಸಲು ಜಾತ್ಯತೀತ ಶಕ್ತಿಗಳನ್ನು ಬೆಂಬಲಿಸುವ ನಿರ್ಣಯವನ್ನು ಹಾಗೂ ಎಲ್ಲಾ ಬಡವರಿಗೆ ಬಿ.ಪಿ.ಎಲ್. ಕಾರ್ಡ್ ವಿಳಂಬ ಮಾಡದೇ ವಿತರಣೆ ಮಾಡಲು ಮತ್ತು ವಾರ್ಷಿಕ ಆದಾಯದ ಮಿತಿ ರೂ.36,000 ಕ್ಕೆ ಹೆಚ್ಚಿಸಲು ಸರ್ಕಾರವನ್ನು ಒತ್ತಾಯಿಸಿ ನಿರ್ಣಯವ[ನ್ನು] ಅಂಗೀಕರಿಸಲಾಯಿತು.

ಹೋರಾಟ : ಜಡ್ಕಲ್‌ನಲ್ಲಿ 08.03.2[009] ರಂದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿ[ನ] ಜಡ್ಕಲ್‌ನಲ್ಲಿ 500 ಜನರ ಬೃಹತ್ ರ್‍ಯಾಲಿಯೊಂ[ದಿಗೆ] ಹೋರಾಟ ನಡೆಯಿತು. ಹೋರಾಟ ನ್ಯಾಯಕ[್ಕಾಗಿ] ಹೋರಾಟ ಹೋರಾಟ, ಹೋರಾಟ ಹಕ್ಕಿ[ಗಾಗಿ] ಹೋರಾಟ ತಾರತಮ್ಯತೆಯ ಅಳಿಸೋಣ ಅನ್ಯಾ[ಯ] ಅಳಿಸಿ, ತೊಲಗಿಸಿ, ತೊಲಗಿಸಿ, ಮಹಿಳೆಯ[ರ ಮೇಲೆ] ನಡೆಯುತ್ತಿರುವ ದೌರ್ಜನ್ಯ ತೊಲಗಿಸಿ, ವರದಕ್ಷಿ[ಣೆ] ಹೆಣ್ಣು ಭ್ರೂಣಹತ್ಯೆ, ಕೌಟುಂಬಿಕ ದೌರ್ಜನ್ಯ ಸಾಕಿ[ನ್ನು] ಸಾಕಿನ್ನೂ ಮಹಿಳೆಯರೇ ಹೆಚ್ಚು [...] ಸಂಘಟಿತರಾಗಬೇಕನ್ನು ಎಂಬ ಗಗನ ಮುಟ್ಟ[ುವ] ಘೋಷಣೆಗಳೊಂದಿಗೆ ಸಾಗಿದ ಮೆರವಣಿಗೆಯ[ು] ಶಾಲಾ ಆವರಣದಲ್ಲಿ ಸಮಾವೇಶಗೊಂಡ[ಿತು]. ಮಾರ್ಚ್ 8 ರ ಚಾರಿತ್ರಿಕ ಮಹತ್ವದ ಬಗ್ಗೆ ಸ್ತ್ರೀ ಶ[ಕ್ತಿ] ಸ್ವಸಹಾಯ ಗುಂಪಿನ ಮಹಿಳೆಯರಿಗೆ ಮ[...] ಎಳೆಯಾಗಿ ಬಿಚ್ಚಿಟ್ಟು ಮಹಿಳೆಯರು ಈ ವ್ಯವಸ್ಥೆ[ಯ] ಬದಲಾವಣೆಗಾಗಿ ಹೆಚ್ಚು ಹೆಚ್ಚು ಸಂಘಟಿ[ತ] ಹೋರಾಟಕ್ಕೆ ಸಜ್ಜಾಗಬೇಕೆಂದು ಸಭೆಯ ಅಧ್ಯಕ್ಷ[ತೆ] ವಹಿಸಿದ್ದ ಸಿ.ಕುಮಾರಿಯವರು ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾ[ದ] ರಾಜೂಪೂಜಾರಿಯವರು, ಮುಖ್ಯ ಅತಿಥಿಗಳಾ[ಗಿ] ಚರ್ಚ್‌ನ ಫಾದರ್‌ಗಳು ಭಾಗವಹಿಸಿದ್ದರು. ಅಂಗನವಾಡಿ ನೌಕರರ ಸಂಘಟನೆಯ ಮುಖಂಡರಾದ ಫಿಲೋಮಿನರವರ[ು] ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿದ್ದರು.

ವರದಿ: ಉತ್[ಪಲ]

ಗಂಗೊಳ್ಳಿಯಲ್ಲಿ ಚರ್ಚ್‌ನ ಬಳಿ ಇರುವ ವಿಗ್ರಹ ಧ್ವಂಸ

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ 01.03.2009ರಂದು ಚರ್ಚ್‌ಗೆ ಪ್ರಾರ್ಥನೆಗೆಂದು ಕ್ರೈಸ್ತ ಬಾಂಧವರು ಆಗಮಿಸಿದಾಗ ಈ ಕೃತ್ಯ ಬೆಳಕಿಗೆ ಬಂದಿದ್ದು, ಆತಂಕಿತಗೊಂಡ ಅವರು ಕೂಡಲೇ ಪೋಲೀಸರಿಗೆ ದೂರು ನೀಡಿದರು. ಫೆಬ್ರವರಿ 28ರ ರಾತ್ರಿ ದುಷ್ಕರ್ಮಿಗಳಿಂದ ಈ ಕೃತ್ಯ ನಡೆದಿದೆ. ಸ್ಥಳಕ್ಕಾಗಮಿಸಿದ ಪೋಲೀಸರು ಚರ್ಚ್ ಧರ್ಮಗುರು ಆಲ್ಫೋನ್ಸ್ ಡಿಲೀಮಾ ಅವರಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದ್ದು ಭಗ್ನಗೊಂಡ ಮೂರ್ತಿಯ ಅವಶೇಷಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಮೂರ್ತಿ ಭಗ್ನ ಸಂಗತಿ ಗಂಗೊಳ್ಳಿಯಲ್ಲಿ ಪ್ರಕಟ ಗೊಳ್ಳುತ್ತಿದ್ದಂತೆ ಜನ ತಂಡೋಪತಂಡವಾಗಿ ವೀಕ್ಷಿಸಲು ಬಂದಿದ್ದು, ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಈ ವೇಳೆ ಕ್ರೈಸ್ತರು ಚರ್ಚ್ ಆವರಣದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿದರು. ಪೋಲೀಸರು ಹೆಚ್ಚಿನ ಸಂಖ್ಯೆಯಲ್ಲಿದ್ದು ನಿಯಂತ್ರಣ ಮಾಡಿದರು. ಸರ್ವಧರ್ಮದವರೂ ಆರಾಧಿಸುವ ವಿಗ್ರಹ ಧ್ವಂಸಕ್ಕೆ ಸಂಬಂಧಿಸಿ ಗಾಳಿ ಸುದ್ದಿಗೆ ಕಿವಿಗೊಡದಂತೆ ಪೋಲಿಸರು ವಿನಂತಿಸಿದ್ದು ದುಷ್ಕರ್ಮಿಗಳನ್ನು ಶೀಘ್ರ ಬಂಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿ ಹಲವರನ್ನು ವಿಚಾರಣೆಗೊಳಪಡಿಸಿದ ಪೋಲೀಸರು ಶಂಕಿತರನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಚಿಕ್ಕಪುಟ್ಟ ಘಟನೆಗಳಿಗೂ ಉದ್ವಿಗ್ನಗೊಳ್ಳುವ ಗಂಗೊಳ್ಳಿ ಪರಿಸರದಲ್ಲಿ ಚರ್ಚ್ ವಿಗ್ರಹ ಧ್ವಂಸಕ್ಕೆ ಸಂಬಂಧಿಸಿ ಪೋಲೀಸರು ಸೂಕ್ತ ಬಂದೋಬಸ್ತ್ ನಡೆಸಿದ್ದಾರೆ.

ಕೋಮು ವೈಷಮ್ಯದಿಂದಲೇ ಈ ಕೃತ್ಯವೆಸಗಿದ್ದಾರೆ ಎಂಬುದು ಸ್ಪಷ್ಟವಾಗಿದ್ದು, ಈವರೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನೈಜ ಆರೋಪಿಗಳನ್ನು ಬಂಧಿಸಲಿಲ್ಲ.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯಿಂದ ಕಾರ್ಯದರ್ಶಿಯವರಾದ ಕೆ.ಶಂಕರ್ ಮತ್ತು ಸಮಿತಿ ಸದಸ್ಯರಾದ ಕೆ.ವೆಂಕಟೇಶ್ ಕೋಣಿಯವರು 02.03.2009ರಂದು ಗಂಗೊಳ್ಳಿಗೆ ಭೇಟಿ ನೀಡಿ ಚರ್ಚಿನ ಬಳಿ ಘಟನೆ ನಡೆದ ಸ್ಥಳವನ್ನು ವೀಕ್ಷಿಸಿ, ಘಟನೆಯನ್ನು ತೀವ್ರವಾಗಿ ಖಂಡಿಸಿರುತ್ತಾರೆ. ಪಕ್ಷದ ಕುಂದಾಪುರ ತಾಲ್ಲೂಕು ಸಮಿತಿ ಹಾಗೂ ಜಿಲ್ಲಾ ಸಮಿತಿಯು ತೀವ್ರ ಖಂಡಿಸಿ ಪತ್ರಿಕಾ ಹೇಳಿಕೆ ನೀಡಿದೆ. ಪ್ರಕರಣದ ನಿಜವಾದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿತು.

ದುಷ್ಕರ್ಮಿಗಳು ಚರ್ಚ್‌ನ ಮೂರ್ತಿಯನ್ನು ಪುಡಿಗೈದ ಹಿನ್ನೆಲೆಯಲ್ಲಿ ಗಂಗೊಳ್ಳಿ ಪ್ರದೇಶದಲ್ಲಿ ಬಿಗುವಿನ ವಾತಾವರಣ ಇದೀಗ ತಿಳಿಯಾಗಿದ್ದು, ಪೋಲೀಸ್ ಬಂದೋಬಸ್ತನ್ನು ಮುಂದುವರಿಸ[ಲಾ]ಗಿದೆ.

ಕೋಮುವಾದಿಗಳು ಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶದಿಂದ, ಇನ್ನೊಂದು ಧರ್ಮದ ಪ್ರಾರ್ಥನಾಲಯಗಳಿಗೆ ದಾಳಿ ಮಾಡುವ ಮೂಲಕ ತಮ್ಮ ಧರ್ಮ, ಆಚರಣೆಗಳನ್ನು ಸಂಕ[...] ಗೊಳಿಸುತ್ತಿದ್ದಾರೆ ಎಂಬುದನ್ನು ಜನತೆ ಎಚ್ಚರದಿಂದ ಗಮನಿಸಬೇಕಿದೆ.

-ಕೆ.ಶಂಕರ್

ಲೋಕಸಭಾ ಚುನಾವಣೆ 2009

ತೃತೀಯರಂಗದ ಉದ್ಘಾಟನೆ-ಚಾಲನೆ ಮತ್ತು ಕರ್ನಾಟಕಕ್ಕೆ ಅದರ ಪ್ರಾಮುಖ್ಯತೆ



ಜಿ.ಎನ್.ನಾಗರಾಜ್

ಮೂರನೇ ರಂಗ ಗರಿಗಟ್ಟಿಕೊಳ್ಳುತ್ತಿರುವುದು ರಾಷ್ಟ್ರೀಯ ರಾಜಕಾರಣಕ್ಕೆ, ಭಾರತದ ಭವಿಷ್ಯಕ್ಕೆ ಒಂದು ಐತಿಹಾಸಿಕ ಕೊಡುಗೆಯಾದರೆ ಕರ್ನಾಟಕಕ್ಕೆ ಕೂಡ ಬಹಳ ಪ್ರಮುಖವಾದದು.

ಕುಮಾರಸ್ವಾಮಿಯವರು ಸೋನಿಯಾ ಗಾಂಧಿಯವರನ್ನು ರಹಸ್ಯವಾಗಿ ಭೇಟಿಯಾಗಿದ್ದಾರೆ. ಜೆಡಿ(ಎಸ್) ಕಾಂಗ್ರೆಸ್ ನಡುವೆ ರಾಜ್ಯದಲ್ಲಿ ಲೋಕಸಭಾ ಚುನಾವಣೆಗೆ ಸಂಬಂಧಿಸಿ ಮೈತ್ರಿ ಮುರಿದೆ ಎಂಬ ಸುದ್ದಿಗಳು ಪತ್ರಿಕೆ ಮಾಧ್ಯಮಗಳಲ್ಲಿ ಓದಾಡಿದವು. ಕಾಂಗ್ರೆಸ್‌ನ ರಾಜ್ಯನಾಯಕರು ಹಲವು ಬಾರಿ ಬಹಿರಂಗ ಅಂತರಂಗ ಆಹ್ವಾನಗಳನ್ನು ನೀಡಿದರು. ಇಂತಹದೊಂದು ಹಂಚಿಕೆಯಿಂದ ಜೆಡಿ(ಎಸ್) ತುಸುಲಾಭವನ್ನು ಪಡೆಯಬಹು ದೆಂಬುದು ಜೆಡಿ(ಎಸ್)ನಲ್ಲಿ ಕೆಲವರ ಲೆಕ್ಕಾಚಾರವೂ ಇತ್ತು.

ಆದರೆ ಇಂತಹ ಉಹಾಪೋಹಗಳನ್ನು ಮೀರಿ ಲೆಕ್ಕಾಚಾರಗಳನ್ನು ಕೈಬಿಟ್ಟು ಜೆಡಿ(ಎಸ್) ಮೂರನೇ ರಂಗದ ಭಾಗವಾಗಿದೆ, ಮಾತ್ರವಲ್ಲ ಕರ್ನಾಟಕದ ನೆಲದಿಂದಲೇ ಮೂರನೇರಂಗದ ಚಾಲನೆಯೂ ಆಗಿದೆ. ಇದು ಒಂದು ಕಡೆ ಬಿಜೆಪಿ ಮತ್ತೊಂದು ಕಡೆ ಕಾಂಗ್ರೆಸ್ ಎರಡಕ್ಕೂ ನುಂಗಲಾರದ ತುತ್ತಾಗಿದೆ. ಜೆಡಿ(ಎಸ್), ಸಿಪಿಐ(ಎಂ), ಸಿಪಿಐನ ನಾಯಕರ ನಡುವೆ ಮಾತುಕತೆಗಳು ಆರಂಭವಾದ ಕೂಡಲೇ, ಮೊದಲ ಪತ್ರಿಕಾಗೋಷ್ಠಿಯನ್ನು ನಡೆಸಿದ ಕೂಡಲೇ ಬಿಜೆಪಿಯ ರಾಷ್ಟ್ರೀಯ ನಾಯಕ ವೆಂಕಯ್ಯನಾಯ್ಡು ಅದು ಮೂರನೇ ರಂಗವಲ್ಲ ಮೂರನೇ ದರ್ಜೆಯ ರಂಗ ಎಂದು ಕೀಳುದರ್ಜೆಯ ಆರೋಪ ಮಾಡಿ ಚೆನ್ನಾಗಿಮೂತಿಗೆ ಇಕ್ಕಿಸಿಕೊಂಡಿದ್ದಾರೆ. ಹಾಗೆ ಕಾಂಗ್ರೆಸ್‌ನವರೂ, ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ನವರೂ ಕೂಡ ಮೂರನೇ ರಂಗದ ಬಗ್ಗೆ ಅಪದ್ದಗಳ ನ್ನಾಡಿದ್ದಾರೆ.

ತೃತೀಯರಂಗದ ಚಾಲನೆ ಸಭೆ ನಡೆದ ಮೇಲಂತೂ ಯಡಿಯೂರಪ್ಪ, ಸದಾನಂದಗೌಡ ಮೊದಲಾದವರೆಲ್ಲಾ ಹರಿಹಾಯ್ದಿದ್ದಾರೆ. ಇದು ಬಿಜೆಪಿಯಲ್ಲಿ ಅದರಲ್ಲೂ ಬಿಜೆಪಿಯಲ್ಲಿರುವ ಆಳುವ ಗುಂಪಿನ ಎದೆಬಡಿತವನ್ನು ಎಷ್ಟು ಹೆಚ್ಚಿಸಿದೆ ಎಂಬುದನ್ನು ತೋರಿಸುತ್ತದೆ.

ಮೂರನೇ ರಂಗ ಗರಿಗಟ್ಟಿಕೊಳ್ಳುತ್ತಿರುವುದು ರಾಷ್ಟ್ರೀಯ ರಾಜಕಾರಣಕ್ಕೆ, ಭಾರತದ ಭವಿಷ್ಯಕ್ಕೆ ಒಂದು ಐತಿಹಾಸಿಕ ಕೊಡುಗೆಯಾದರೆ ಕರ್ನಾಟಕಕ್ಕೆ ಕೂಡ ಬಹಳ ಪ್ರಮುಖವಾದದು. ಬಿಜೆಪಿ ಆಡಳಿತ ಪ್ರಥಮಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕದಲ್ಲಿ ಜನತಾ ಪಕ್ಷ/ಜನತಾದಳವೆಂಬ ಮೂರನೇ ಶಕ್ತಿಯ ಅಸ್ತಿತ್ವವೇ 25 ವರ್ಷಕ್ಕಿಂತ ಹೆಚ್ಚುಕಾಲ ಬಿಜೆಪಿಯ ಬೆಳವಣಿಗೆಯನ್ನು ತಡೆಹಿಡಿದಿತ್ತು.

ಆದರೆ ಮೊದಲು ಬಿಜೆಪಿ, ನಂತರ ಕಾಂಗ್ರೆಸ್ ಎರಡೂ ಸೇರಿಕೊಂಡು ಈ ಮೂರನೇ ಶಕ್ತಿಯನ್ನು ಮುರಿಯಲು ನೂರಾರು ಕುತಂತ್ರಗಳನ್ನು ಹೂಡಿದವು. ಜನತಾದಳದ ಶಕ್ತಿಯನ್ನು ಕುಂದಿಸಿ ಅದರ ಮೇಲೆ ಬಿಜೆಪಿ ಬೆಳೆಯಿತು.

ಈಗ ಮೂರನೇರಂಗದ ಆಕರ್ಷಣೆ ಜನತೆಯನ್ನು ಮತ್ತೆ ಜನತಾದಳದತ್ತ ಸೆಳೆದು ತಮ್ಮ ಶಕ್ತಿಯನ್ನು ಕುಂದಿಸುವುದೇ ಎಂದು ಎರಡೂ ಪಕ್ಷಗಳಿಗೂ ಎದೆಗುದಿಯಾಗಿದೆ. 18 ಸ್ಥಾನಗಳನ್ನು ಪಡೆದು ಅದನ್ನು 25ಕ್ಕೆ ಹೆಚ್ಚಿಸಿಕೊಳ್ಳಲು ಕನಸು ಕಾಣುತ್ತಿರುವ ಬಿಜೆಪಿಗೆ ರಾಷ್ಟದ ಹಲವೆಡೆ ಬಲಗುಂದುತ್ತಿರುವ ಬಿಜೆಪಿಗೆ ಇದು ದೊಡ್ಡ ಪ್ರಶ್ನೆಯಾಗಿದೆ.

ಅಧಿಕಾರಕ್ಕೆ ಬಂದ ಕೇವಲ ಒಂಬತ್ತೇ ತಿಂಗಳಲ್ಲಿ ಜನರಿಂದ ಹೀಗಳಿಕೆಗೆ ಒಳಗಾಗಿರುವ ಬಿಜೆಪಿ ಕೇಂದ್ರದಲ್ಲಿ ಮತ್ತು ಹಿಂದೆ ಕೃಷ್ಣರ ಆಡಳಿತದಲ್ಲಿ ಜನರನ್ನು ದೂರಮಾಡಿಕೊಂಡ ಕಾಂಗ್ರೆಸ್ಎರಡಕ್ಕೂ ಜನತಾದಳ ಮತ್ತೆ ಮೇಲೇಳುವುದು ಮರಣ ಮೃದಂಗ ದಂತೆ ಕೇಳಿಸಲಾರಂಭಿಸಿದೆ.

ಮಾಧ್ಯಮಗಳಲ್ಲಿ ರ್‍ಯಾಲಿ 'ಚಿತ್ರ'

ಮಾರ್ಚ್ 12 ರ ತೃತೀಯ ರಂಗದ ರ್‍ಯಾಲಿ ಅದ್ಭುತ ಯಶಸ್ಸು ಕಂಡಿತು ಎಂಬುದನ್ನು ಹಲವಾರು ಪತ್ರಿಕೆ ಟಿ.ವಿ.ಚಾನಲ್ ಸರಿಯಾಗಿಯೇ ಗುರುತಿಸಿವೆ. ಗುರುತಿಸಲೇಬೇಕಾದ ಪರಿಸ್ಥಿತಿಯೂ ಇದೆ. ಸಂಯುಕ್ತ ಕರ್ನಾಟಕದಂತಹ ಪತ್ರಿಕೆಯು ರ್‍ಯಾಲಿಯ ಯಶಸ್ಸಿಗೆ ಕಣ್ಣುಮುಚ್ಚಿಕೊಂಡು ಮೂರನೇ ರಂಗವೇ ನಿರರ್ಥಕ, ಅವಕಾಶವಾದಿ ದೇಶದಲ್ಲಿ ದ್ವಿಪಕ್ಷ ಪದ್ಧತಿ ಅಸ್ತಿತ್ವಕ್ಕೆ ಬರಬೇಕು ಎಂದೆಲ್ಲಾ ಪ್ರಾಲಾಪಿಸುವ ಸಂಪಾದಕೀಯದ ಮಾದರಿಯ ಬರಹವೊಂದನ್ನು ಮುಖಪುಟದಲ್ಲೇ ಪ್ರಕಟಿಸಿದೆ. ತೃತೀಯ ರಂಗದ ರ್‍ಯಾಲಿಯ ಯಶಸ್ಸು ನೋಡಿ

ವಿಜಯ ಕರ್ನಾಟಕ

...ಕ್ರಿ ಕೆ ಗೆ ಗಾಬರಿಯಾಗಿದೆಯೋ ಏನೂ ಪಾಪ.

ಇನ್ನೂ ಕೆಲವು ಪತ್ರಿಕೆಗಳು, ಚಾನೆಲ್‌ಗಳು ಮಾಯಾವತಿ ರ್‍ಯಾಲಿಗೆ ಬರಲಿಲ್ಲ, ಜಯಲಲಿತ ರ್‍ಯಾಲಿಗೆ ಬರಲಿಲ್ಲ ಎಂಬ ರೀತಿಯಲ್ಲಿ ಅದನ್ನೇ ದೊಡ್ಡದು ಮಾಡಿ ಬಿಂಬಿಸಲು ಯತ್ನಿಸಿವೆ.

ಶ್ರೀಲಂಕಾದ

ಸಂಯುಕ್ತ ಕರ್ನಾಟಕ

epaper www.samyukthakarnataka.com


18TH CROSS, SAMPANGIRAMANAGAR BANGALORE - 560 027

ತಮಿಳರ ಸಮಸ್ಯೆ ಕುರಿತ ಚೆನ್ನೈನ ಪ್ರಮುಖ ಕಾರ್ಯಕ್ರಮವೊಂದರ ಸಂಬಂಧ ತಮಗೆ ಸ್ವತಃ ಬರಲಾಗುತ್ತಿಲ್ಲವೆಂದು ತೃತೀಯ ರಂಗದ ರ್‍ಯಾಲಿಗೆ ತಮ್ಮ ಪೂರ್ಣ ಬೆಂಬಲವಿದೆಯೆಂದು ಅವರು ಲಿಖಿತ ಪತ್ರ ಸಂದೇಶವನ್ನು ನೀಡಿವುದಲ್ಲದೇ ತಮ್ಮ ಪರವಾಗಿ, ಎಐಎಡಿಎಂಕೆಯ ಪ್ರಮುಖ ಮುಖಂಡ ರಾದ ಡಾ. ಮೈತ್ರೇಯನ್ ಅವರನ್ನು ಕಳಿಸಿದ್ದಾರೆ. ರ್‍ಯಾಲಿಯಲ್ಲಿ ಈ ಕುರಿತು ವಿವರ ನೀಡಲಾಯಿತು. ಅದನ್ನು ಕೆಲವು ಮಾಧ್ಯಮಗಳು ಗಮನಿಸಲಿಲ್ಲ ವೇಕೋ?

ಇನ್ನೂ ಮಾಯಾವತಿಯವರ ಪ್ರಶ್ನೆ ಬಿಎಸ್‌ಪಿ ಪಕ್ಷವು ಯಾವುದೇ ಪಕ್ಷದೊಂದಿಗೆ ಚುನಾವಣಾಪೂರ್ವ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ನಿಲುವು ತೆಗೆದುಕೊಂಡಿದೆ. ಮಾತ್ರವಲ್ಲ ಮೂರನೇ ರಂಗದ ರ್‍ಯಾಲಿ ಯೋಜಿಸುವಾಗ ಬಿಎಸ್‌ಪಿ ಅದರಲ್ಲಿ ಪಾಲ್ಗೊಳ್ಳುತ್ತದೆ ಎಂದೇನು ಘೋಷಿಸಿರಲಿಲ್ಲ.

ಆ ನಂತರದ ಬೆಳವಣಿಗೆಯಲ್ಲಿ ಬಿಎಸ್‌ಪಿಯೂ ರ್‍ಯಾಲಿಯಲ್ಲಿ ಪಾಲ್ಗೊಳ್ಳುವಂತಾಗಿ ಮಾಯಾವತಿ ಯವರ ಆಪ್ತರೂ ಬಿಎಸ್‌ಪಿ ಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳೂ ಆದ ಸತೀಷ್‌ಚಂದ್ರ ಮಿಶ್ರರು ಮಾಯಾವತಿ ಯವರ ಪರವಾಗಿ ರ್‍ಯಾಲಿಯಲ್ಲಿ ಪಾಲ್ಗೊಂಡು ತೃತೀಯ ರಂಗದಲ್ಲಿ ಬಿಎಸ್‌ಪಿ ಇದೆ ಎಂದು ಘೋಷಿಸಿದ್ದಾರೆ.

ಬಿಎಸ್‌ಪಿಯು ತೃತೀಯ ರಂಗದ ರ್‍ಯಾಲಿಯಲ್ಲಿ ಪಾಲ್ಗೊಂಡಿತು ಎಂಬುದಕ್ಕಿಂತ ಮಾಯಾವತಿಯವರು ರ್‍ಯಾಲಿಗೆ ಬರಲಿಲ್ಲ ಎಂಬುದನ್ನು ದೊಡ್ಡದು ಮಾಡುವವರ ಉದ್ದೇಶವೇನು? ಓದುಗರು ಅರ್ಥ ಮಾಡಿಕೊಳ್ಳಬೇಕಷ್ಟೆ. ದೇಶಕ್ಕೆ ದೊಡ್ಡ ಬಂಡವಾಳಿಗರು, ವಿದೇಶಿ ಬಂಡವಾಳಿಗರ ಹಿತ ಕಾಯುವ ಬಿಜೆಪಿ, ಕಾಂಗ್ರೆಸ್‌ಗಳೆರಡೇ ಸಾಕು, ಜನ ವಿರೋಧಿ ಜಾಗತೀಕರಣ - ಅದು ಬಿಟ್ಟರೆ ಜಾಗತೀ ಕರಣ ಮತ್ತು ಕೋಮುವಾದಗಳ ಮಿಶ್ರಣ-ಇವೆರಡೇ ಸಾಕು ಅಂತಲ್ಲವೇ ಇದರ ಅರ್ಥ!?



ಕನಿಷ್ಠ ಕೂಲಿ ಹೆಚ್ಚಿಗೆ ನಿಗದಿಗೊಳಿಸಲು ಒತ್ತಾಯಿಸಿ... ಕುಂದಾಪುರದಲ್ಲಿ ಹಂಚು ಕಾರ್ಮಿಕರ ಬೃಹತ್ ಪ್ರದರ್ಶ

03.03.2009ರಂದು ಕುಂದಾಪುರದಲ್ಲಿ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ನೇತೃತ್ವದಲ್ಲಿ ಹಂಚು ಕಾರ್ಮಿಕರ ಬೃಹತ್ ಪ್ರತಿಭಟನಾ ಮತ ಪ್ರದರ್ಶನದ ಅಂಗವಾಗಿ ಶಾಸ್ತ್ರೀ ಸರ್ಕಲ್‌ನಿಂದ ಮಧ್ಯಾಹ್ನ 4.00 ಗಂಟೆಗೆ ಮೆರವಣಿಗೆ ಹೊರಟು ಪೇಟೆಗೆ ಒಂದು ಸುತ್ತ ಬಂದು ಲೇಬರ್ ಇನ್ಸ್‌ಪೆಕ್ಟರ್‌ರವರ ಕಛೇರಿ ಬಳಿ ಒಟ್ಟು ಸೇರಿ ಬೇಡಿಕೆಗಳ ಬಗ್ಗೆ ಘೋಷಣೆ ಹಾಕಿದರು. ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿ ಹಂಚು ಕಾರ್ಮಿಕರು ಭಾಗವಹಿಸಿದ್ದರು.



ಮನವಿ ಪತ್ರವನ್ನು ಸಂಘದ ಕೋಶಾಧಿಕಾರಿ ಯವರಾದ ಹೆಚ್.ನರಸಿಂಹನವರು ಓದಿ ಹೇಳಿ, ಕಾರ್ಮಿಕ ನಿರೀಕ್ಷಕರ ಮೂಲಕ ಕಾರ್ಮಿಕ ಮಂತ್ರಿಗೆ ಕಳುಹಿಸಲಾಯಿತು. ಕಾರ್ಮಿಕ ನಿರೀಕ್ಷಕರು ಮನವಿ ಸ್ವೀಕರಿಸಿ, ಕಾರ್ಮಿಕ ಮಂತ್ರಿಯವರಿಗೆ ಕಳುಹಿಸುವುದಾಗಿ ಹೇಳಿದರು.

ಮತ ಪ್ರದರ್ಶನಕಾರರನ್ನು ಉದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕೆ.ಶಂಕರ್‌ರವರು ಮಾತನಾಡಿ, ಕನಿಷ್ಠ ಕೂಲಿಯ ಕರಡು ಪ್ರಕಟಣೆಗಾಗಿ ಒಂದೂವರೆ ವರ್ಷವಾದರೂ ಅಂತಿಮ ಪ್ರಕಟಣೆ ಹೊರಡಿಸಲಿಲ್ಲ. ಇದು ಕಾರ್ಮಿಕರಿಗೆ ಮಾಡಿದ ವಂಚನೆಯಾಗಿದೆ. ಅಸಂಘಟಿತ ಕಾರ್ಮಿಕರಿಗೆ ಮಾಸಿಕ ರೂ. 6000 ಬದುಕಲಿಕ್ಕಾಗಿ ನಿಗದಿಗೊಳಿಸುವುದು ತೀರಾ ಅವಶ್ಯವಿದೆ. ಎಲ್ಲಾ ಕಾರ್ಮಿಕರಿಗೆ ಬಿ.ಪಿ.ಎಲ್. ಕಾರ್ಡ್ ಕೊಡಬೇಕು. ಪಡಿತರ ವ್ಯವಸ್ಥೆ ಸಾರ್ವತ್ರೀಕರಣ ಆಗಬೇಕು. ವಾರ್ಷಿಕ ಆದಾಯದ ಮಿತಿ 36,000 ಕ್ಕೆ ಹೆಚ್ಚಿಸಬೇಕೆಂದು ಹೇಳಿದರು.

ಅಂತರರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟಿನ ಭಾರವನ್ನು ಶ್ರಮಿಕ ವರ್ಗದ ಮೇಲೆ ಬಂಡವಾಳಶಾಹಿ ಪಕ್ಷ ಆಡಳಿತ ಹೊರಿಸುವ ಪರಿಸ್ಥಿತಿ ಬಂದಾಗ ಕಾರ್ಮಿ ವರ್ಗದ ಐಕ್ಯತೆ ಈ ಹಿಂದಿಗಿಂತಲೂ ಹೆಚ್ಚಾಗಿ, ಐ ಹೋರಾಟದ ಪ್ರಭಾವದಿಂದಲೇ ಸಮಸ್ಯೆಗೆ ಪರಿಹಾ ಕಂಡುಕೊಳ್ಳಬೇಕಾಗಿದೆ ಎಂದು ಹೇಳಿದರ ಬಂಡವಾಳಶಾಹಿ ಪದ್ಧತಿ ಶಾಶ್ವತವಲ್ಲವೆಂದ ತಿಳಿಸಿದರು.

ಪ್ರತಿಭಟನಾ ಮೆರವಣಿಗೆಯ ನೇತೃತ್ವವ ಸಂಘದ ಮುಖಂಡರಾದ ಹೆಚ್.ನರಸಿಂಹ ಎಲ್.ಶೀನ, ಕುಂಭಾಶಿ ಗಣೇಶ್, ರಾಜೀವ ಶೆಟ್ಟ ಕೋಣಿ ರಾಮ, ಮಂಜುನಾಥ, ಶಂಕರ ದೇವಾಡಿಗ ಲಕ್ಷ್ಮಣ ನೆಲ್ಲಿಕಟ್ಟೆ, ದೇವಲ್ಕುಂದ ಶಂಕರ ಮತ ಎಸ್.ಬಾಬು ವಹಿಸಿದ್ದರು.

ಕೆ.ಶಂಕರ

ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರತಿಭಟನೆ

ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸಂಘ (ಸಿಐಟಿಯು) ಕುಂದಾಪುರ ಇವರ ನೇತೃತ್ವದಲ್ಲಿ 02.03.2009ರಂದು ಬೆಳಿಗ್ಗೆ 11 ಗಂಟೆಗೆ ಕುಂದಾಪುರ ಶಾಸ್ತ್ರೀ ಸರ್ಕಲ್‌ನಿಂದ ಮೆರವಣಿಗೆ ಹೊರಟು ಕಾರ್ಮಿಕ ನಿರೀಕ್ಷಕರ ಕಛೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ಕಟ್ಟಡ ಕಾರ್ಮಿಕರಿಗೆ ಪಿಂಚಣಿ ಮತ್ತು ಅಪಘಾತ ಪರಿಹಾರ ಹಾಗೂ ಇತರೆ ಬೇಡಿಕೆಗಳಿಗೆ ಒತ್ತಾಯಿಸಿ ಕಾರ್ಮಿಕ ಮಂತ್ರಿಯವರಿಗೆ ಮನವಿಯೊಂದನ್ನು ಕಾರ್ಮಿಕ ನಿರೀಕ್ಷಕರ ಮೂಲಕ ಕಳುಹಿಸಲಾಯಿತು.

ಸಂಘದ ಕಾರ್ಯದರ್ಶಿಯವರಾದ ಕಾಂ:ಚಂದ್ರಶೇಖರ ವಿ. ಇವರು ಬೇಡಿಕೆಗಳ ಬಗ್ಗೆ ವಿವರಿಸಿದರು. ಪ್ರತಿಭಟನೆಯ ಮೆರವಣಿಗೆಯ ನೇತೃತ್ವದಲ್ಲಿ ಕಾಂ: ಯು.ದಾಸಭಂಡಾರಿ, ಸುರೇಶ್.ವಿ, ಮಹಾಬಲ ವಡೇರ ಹೋಬಳಿ, ವೆಂಕಟೇಶ್ ಹೋಣೆಯವರು ವಹಿಸಿದರು.

ಉಡುಪಿ: ಕಾರ್ಮಿಕ ಅಧಿಕಾರಿಯವರ ಕಛೇರಿಯ ಎದುರು ಕನಿಷ್ಠ ಕೂಲಿ ಒತ್ತಾಯ: ಬೃಹತ್ ಪ್ರತಿಭಟನೆ

05.03.2009ರಂದು ಉಡುಪಿಯಲ್ಲಿ ಕಾರ್ಮಿಕ ಅಧಿಕಾರಿಯವರ ಕಛೇರಿಯ ಎದುರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಠ ಕೂಲಿ ಮಾಸಿಕ ರೂ.6000 ನಿಗದಿಮಾಡಬೇಕೆಂದು ಒತ್ತಾಯಿಸಿ, ಸಿಐಟಿಯುವಿನ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಕನಿಷ್ಠ ಕೂಲಿ ಮತ್ತು ಇತರೆ ಬೇಡಿಕೆಗಳನ್ನು ಒತ್ತಾಯಿಸುವ ಮನವಿಯೊಂದನ್ನು ಕಾರ್ಮಿಕ ಅಧಿಕಾರಿಯವರಿಗೆ ನೀಡಲಾಯಿತು. ಪ್ರತಿಭಟನೆಯಲ್ಲಿ ಸುಮಾರು 400 ಮಂದಿ ಭಾಗವಹಿಸಿರುತ್ತಾರೆ.

ಪ್ರತಿಭಟನೆಯಲ್ಲಿ ಹಂಚು, ಬೀಡಿ, ಗೇರು, ಸಾಣೆಕಲ್ಲು ಕಾರ್ಮಿಕರು, ಕಟ್ಟಡ ನಿರ್ಮಾಣ ಕೆಲಸಗಾರರ, ಅಂಗನವಾಡಿ, ಅಕ್ಷರದಾಸೋಹ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರುತ್ತಾರೆ.

ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯುವಿನ ಉಡುಪಿ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ.ಶಂಕರ್, ಕಾರ್ಯದರ್ಶಿ ಪಿ.ವಿಶ್ವನಾಥರೈ, ಮಹಾಬಲ ವಡೇರ ಹೋಬಳಿ, ರಮೇಶ್ ಮೆಂಡನ್, ದೋಗು ಸುವರ್ಣ, ಎಚ್.ವಿಠಲ್ ಯು.ದಾಸಭಂಡಾರಿ ಎಚ್.ನರಸಿಂಹನವರು ವಹಿಸಿದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ.... ಕಟ್ಟಡಕಾರ್ಮಿಕರ ಪ್ರತಿಭಟನೆ

ಕನಿಷ್ಠ ಕೂಲಿ ಮತ್ತು ಇತರೆ ಮುಖ್ಯ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 02.03.2009ರಂದು ಸೋಮವಾರ ಅಖಿಲ ಭಾರತ ಮಟ್ಟದ ಕಾರ್ಮಿಕ ಸಂಘಗಳ ಫೆಡರೇಶನ್ ನಿರ್ಧಾರದಂತೆ ಕುಂದಾಪುರದ ಕಾರ್ಮಿಕ ನಿರೀಕ್ಷಕರ ಕಛೇರಿ ಎದುರು ತಾಲ್ಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ವಲಯದಲ್ಲಿರುವ 2 ಕೋಟಿಗೂ ಮಿಕ್ಕಿ ಕಾರ್ಮಿಕರಿದ್ದು, ಬದುಕು ಅತಂತ್ರವಾಗಿದೆ. ರಾಜ್ಯ ಸರ್ಕಾರ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಿದ್ದರೂ, ಸಾಮಾಜಿಕ ಭದ್ರತೆಯ ನಿಯಮಾವಳಿ ಜಾರಿಗೊಳಿಸದೆ ಕಾರ್ಮಿಕರು ಸಂಕಷ್ಟ ಎದುರಿಸು ವಂತಾಗಿದೆ. ತಕ್ಷಣ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಸರ್ಕಾರ ಮುಂದಾಗಬೇಕು ಎಂದು ಪ್ರತಿಭಟನಾ ಕಾರರು ಆಗ್ರಹಿಸಿದರು. ಸಂಘದ ಅಧ್ಯಕ್ಷರಾದ ಯು. ದಾಸಭಂಡಾರಿಯವರು ಮತ್ತು ಕಾರ್ಯದರ್ಶಿಯವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಬೇಡಿಕೆಗಳ ಬಗ್ಗೆ ವಿವರಣೆ ನೀಡಿದರು.

ಪ್ರತಿಭಟನಾ ಕಾರ್ಯಕ್ರಮದ ನೇತೃತ್ವದಲ್ಲಿ ಶಂಕರ ಚೋಕೋಡಿ, ವೆಂಕಟೇಶ್ ಕೋಣಿ, ಗಣೇಶ್ ತೊಂಡೆಮಕ್ಕಿ ಮೊದಲಾದವರು ವಹಿಸಿದರು. ನಂತರ ಕುಂದಾಪುರ ಕಾರ್ಮಿಕ ನಿರೀಕ್ಷಕರ ಮುಖಾಂತರ ಕಾರ್ಮಿಕ ಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಪುಟ 2 ರಿಂದ ಬಾಬಾಬುಡನ್‌ಗಿರಿ ಉರುಸ್.....

ಉರುಸ್‌ನ ನಿಜವಾದ ಅಂತ: ಶಕ್ತಿಯಾಗಿರುವ ಆಚರಣೆಯನ್ನು 'ಯಥಾಸ್ಥಿತಿ' ಕಾಪಾಡುವ ನ್ಯಾಯಾಲಯದ ನಿರ್ದೇಶನದ ನೆಪ ತೋರಿಸಿ ಕಡೆಗಣಿಸಲಾರಂಭವಾಯ್ತು. ಈ ಹಿಂದೆ ಪರಂಪರಾಗತವಾಗಿ ಆಚರಣೆಯಲ್ಲಿದ್ದದ್ದು 'ಉರುಸ್' ಮಾತ್ರವೇ. ಇದು ದಾಖಲೆಗಳಿಂದಲೂ ಸ್ಪಷ್ಟವಾಗುತ್ತದೆ. ಆದರೆ ದತ್ತಜಯಂತಿ ಎಂಬುದು ಇತ್ತೀಚಿನ ಆಚರಣೆ. ಹೀಗಿರುವಾಗ ಉರುಸ್' ಆಚರಣೆಯನ್ನು ಎಂದಿನಂತೆ ನಡೆಯಲು ಅವಕಾಶ ನೀಡದೇ ನಿರ್ಧರಿಸಿದ್ದು ಕೋ-ಜಾ ಸರ್ಕಾರದ ಅವಧಿಯಲ್ಲಿಯೇ. ಅಂದರೆ ಈ ಉರುಸ್‌ನ್ನು ದರ್ಗಾ ಪೀಠದ ಮುಖ್ಯಸ್ಥರಾಗಿರುವ ಶಾಖಾದ್ರಿ ಯವರ ನೇತೃತ್ವದಲ್ಲಿ ನಡೆಯಬೇಕು. ಗಂಧ, ಹೂ ಮತ್ತು ದರ್ಗಾದ ಮೇಲೆ ಹೊದಿಸುವ ಹಸಿರು ಶಾಲು ಮೆರವಣಿಗೆಯಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ತರಬೇಕು. ಗಂಧ ಲೇಪನ ಇತ್ಯಾದಿ ಮುಗಿದ ಬಳಿಕ 'ಹಸಿರು ಹಚ್ಚಡ' ಹೊದಿಸಬೇಕು. ಇದು ಪದ್ಧತಿ. ಆದರೆ ಅಂದು (ಕೋ-ಜಾ ಸರ್ಕಾರ) ಸಂಘ ಪರಿವಾರದ ಆಣತಿಯಂತೆ ಅಲ್ಲಿನ ಧಾರ್ಮಿಕ ಪರಂಪರೆ, ಆಚರಣೆಗಳನ್ನು ವಿಕೃತಗೊಳಿಸುವ ಕಾರ್ಯತಂತ್ರದ ಭಾಗವಾಗಿ ಧಾರ್ಮಿಕ ದತ್ತಿ ಆಯುಕ್ತರು ಹಸಿರು ಹೊದಿಕೆಯೂ ನ್ಯಾಯಾಲಯದ ಆದೇಶದಲ್ಲಿ ಇಲ್ಲವೆಂದು ಕ್ಯಾತೆ ತೆಗೆದಿದ್ದರು. 'ಉರುಸ್' ಎಂಬುದೇ ಹಸಿರುಶಾಲು, (ಧ್ವಜ ಹಿಡಿದು) ಹೊದಿಸುವ ಕ್ರಿಯೆ ಎಂದು ಸರ್ಕಾರದ ಗೆಜೆಟ್‌ಗಳನ್ನು ತೋರಿಸಿದರೂ ಒಪ್ಪಿರಲಿಲ್ಲ. ಇಂತಹ ಧಾರ್ಮಿಕ ಕ್ರಿಯೆಯಲ್ಲಿ ಶಾಖಾದ್ರಿಯವರನ್ನು ನಿರ್ಲಕ್ಷಿಸಿ, ಮೂಲೆಗುಂಪು ಮಾಡುತ್ತಿರುವುದನ್ನು ಪ್ರತಿಭಟಿಸಿ ಶಾಖಾದ್ರಿಯವರು ಉರುಸ್‌ನ್ನು ರದ್ದುಪಡಿಸಿದ್ದರು. ಆದರೆ ಇವುಗಳನ್ನು ಗಂಭೀರವಾಗಿ ತೆಗೆದುಕೊಳ್ಳದೇ ತನ್ನ ತೀರ್ಮಾನದಂತೆಯೇ 'ಸರ್ಕಾರಿ ಪ್ರಾಯೋಜಿತ' ಉರುಸ್ ಆಚರಣೆ ಶಾಸ್ತ್ರವನ್ನು ಮುಗಿಸಲಾಗಿತ್ತು. ಅದನ್ನೇ ಈಗಲೂ ನಡೆಸಲಾಗಿದೆ.

ಅಲ್ಲಿದ್ದ ಶಾಖಾದ್ರಿ ಕುಳಿತುಕೊಳ್ಳುವ ಮನೆ, ದರ್ಬಾರ್ ಹಾಲ್, ಸಂತರ ಸ್ಥಳ, ಲೋಬಾನ, ಪ್ರಸಾದ ಕೊಂಡೊಯ್ಯುವ ಮನೆ, ಇತ್ಯಾದಿಗಳನ್ನು ನೆಲಸಮ ಮಾಡಿದ್ದ ಸರ್ಕಾರ ಇಂದಿಗೂ ಪುನರ್ ನಿರ್ಮಾಣ ಮಾಡಲಿಲ್ಲ. ಕಳೆದ ಮಳೆಗೆ ಕುಸಿದಿದೆ ಎನ್ನಲಾದ ಗುಹೆಯನ್ನು ಪುನರ್ ನಿರ್ಮಾಣ ಮಾಡಲೂ ಆಗಿಲ್ಲ. ಅಂದರೆ ಬಿಜೆಪಿಯ ಈ ಸರ್ಕಾರ ಏನನ್ನೂ ಮಾಡಲಿದೆ ಎಂಬುದರ ಅಪಾಯದ ಸೂಚನೆಯಾಗಿದೆ. ಅಂತ: ಸತ್ವ ಕಳೆದುಕೊಂಡ ಈ ಉರುಸ್ ನಿಂದ ಅಲ್ಲಿಗೆ ಬರುವ ಭಕ್ತರು ನೊಂದಿದ್ದಾರೆ. ವ್ಯವಸ್ಥೆಗಳೂ ಅಷ್ಟಕ್ಕಷ್ಟೇ. ಈ ಉರುಸ್ ಕೇವಲ ಮುಸ್ಲೀಮರು ಮ ಆಚರಿಸುವವರು ಎಂಬಂತೆ ಪ್ರಚಾರವನ್ನು ಮಾಡಲಾಗುತ್ತಿದೆ. ಆದರೆ ಇದು ಹಿಂದೂ, ಮು ರಲ್ಲದೇ ಹಲವಾರು ಜಾತಿ, ಮತ, ಧರ್ಮಗಳ ಭೇದವಿಲ್ಲದೇ ಎಲ್ಲರೂ ಪಾಲ್ಗೊಳ್ಳುವ ವಿಶಿಷ್ಟ ಆಚರಣೆ ಈ ಸೂಫಿ ಪರಂಪರೆಯಾಗಿದೆ.

ಉರುಸ್‌ನ್ನು ಇಷ್ಟೊಂದು ದುರ್ಬಲಗೊಳಿಸಿ, ವಿಕೃತಗೊಳಿಸುತ್ತಿರುವ ಅದಕ್ಕೆ ಅವಕಾಶ ನೀಡಬಾರದು ಎಂಬ ವಿಶ್ವ ಹಿಂದೂ ಪರಿಷತ್ ಶ್ರೀರಾಮಸೇನೆಗಳ ಒತ್ತಾಯ ದುರಾಕ್ರಮಣವೇ ಆಗಿದೆ. ಇಷ್ಟರ ನಡುವೆಯೂ ಸರ್ಕಾರದ ಧಾರ್ಮಿಕ ದತ್ತಿ ಆಯುಕ್ತರು ಪುನ: ಅಲ್ಲಿನ ಪರಂಪರಾಗತ ಆಚರಣೆ ವಿಧಿ ವಿಧಾನಗಳ ಬಗ್ಗೆ ವಿಚಾರಣೆ ಆರಂಭಿಸಿರುವುದು (ನ್ಯಾಯಾಲಯದ ನಿರ್ದೇಶನವಿದ್ದರೂ ಕಡೆಗಣಿಸಿ) ಇಡೀ ಸರ್ಕಾರವೇ ಸೂಫಿ ಆಚರಣೆಯ, ಭಾವೈಕ್ಯತೆಯ ಕೇಂದ್ರದ ನಾಶಕ್ಕೆ ಸಿದ್ಧವಾಗಿರುವುದನ್ನು ತೋರಿಸುತ್ತದೆ. ಇಂತಹ ಪುನರ್ ವಿಚಾರಣೆಯನ್ನು ಸಂಘ ಪರಿವಾರ ತನ್ನ ದುರುದ್ದೇಶಕ್ಕೆ ಬಳಸದೇ ಇರುವುದು ಅಸಾಧ್ಯ.

ಈಗ ಬಾಬಾಬುಡನ್‌ಗಿರಿಯಲ್ಲಿನ ಸೂಫಿ ಪರಂಪರೆಗೆ ಹೆಚ್ಚಿನ ಅಪಾಯ ಒದಗಿಬಂದಿದೆ.

ಒಂದು ನಿರ್ಣಾಯಕ ರಾಜಕೀಯ ಪಲ್ಲಟದತ್ತ

ಭಾರತದ ರಾಜಕಾರಣದಲ್ಲಿ ಈಗ ನಡೆಯುತ್ತಿರುವ ಮಂಥನ ಮುಂದಿನ ಚುನಾವಣೆಗಳಲ್ಲಿ ಒಂದು ಜನತೆಯ ಪರ್ಯಾಯದತ್ತ ಸಾಗುತ್ತಿರುವ ಪ್ರಕ್ರಿಯೆ ಕಾಣಬರುತ್ತಿದೆ. ಇದು ದೇಶದ ಧೋರಣೆಗಳ ದಿಕ್ಕಿನಲ್ಲಿ ಒಂದು ನಿರ್ಣಾಯಕ ಪಲ್ಲಟವನ್ನು ತರಬೇಕು, ದೇಶದ ಜನಗಳಿಗಾಗಿಯೂ, ಜಗತ್ತಿಗಾಗಿಯೂ ಒಂದು ಉತ್ತಮ ಭಾರತದ ನಿರ್ಮಾಣದತ್ತ ಸಾಗಬೇಕು ಎಂಬುದು ಎಲ್ಲ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ.

ಭಾರತದ ರಾಜಕಾರಣದಲ್ಲಿ ಕೇವಲ ಎರಡು ಧ್ರುವಗಳಿರಲು ಸಾಧ್ಯ- ಕಾಂಗ್ರೆಸ್ ಮತ್ತು ಬಿಜೆಪಿ, ಉಳಿದೆಲ್ಲ ಪಕ್ಷಗಳು ಇವುಗಳ ಸುತ್ತ ನೆರೆಯಬೇಕಾಗುತ್ತದೆ, ಅಂದರೆ ಮೂರನೇ ಶಕ್ತಿಗೆ ಇಲ್ಲಿ ಅವಕಾಶವಿಲ್ಲ ಎಂದು ಎಲ್.ಕೆ.ಅಡ್ವಾಣಿ ಇತ್ತೀಚೆಗೆ ಗುಡುಗಿದರು. ಅದಾದ ಕೆಲವೇ ಗಂಟೆಗಳಲ್ಲಿ ಹನ್ನೊಂದು ವರ್ಷ ಅದರೊಂದಿಗೆ ಇದ್ದು ಎನ್‌ಡಿಎ ಭಾಗವಾಗಿದ್ದ ಬಿಜು ಜನತಾ ದಳ(ಬಿಜೆಡಿ) ಎನ್‌ಡಿಎ ತೊರೆಯಿತು. ಅದೀಗ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಎಡಪಕ್ಷಗಳೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವುದಾಗಿ ಪ್ರಕಟಿಸಿದೆ. ಪ್ರಧಾನಿ ಪಟ್ಟದ ಆಕಾಂಕ್ಷಿ ಶ್ರೀಯುತ ಅಡ್ವಾಣಿ ಮತ್ತು ಅವರ ಬಿಜೆಪಿ ಬುಡಮಟ್ಟದ ವಾಸ್ತವತೆಗಳಿಂದ ಎಷ್ಟು ದೂರ ಇದ್ದಾರೆ ಎನ್ನುವುದಕ್ಕೆ ಇದೇ ಸಾಕ್ಷಿ.

ಮಾರ್ಚ್ 12 ರಂದು ಕರ್ನಾಟಕದ ದಾಬಸಪೇಟೆಯಲ್ಲಿ ಜನತಾದಳ (ಜಾತ್ಯಾತೀತ)ದ ಆಹ್ವಾನದ ಮೇರೆಗೆ ಎಡಪಕ್ಷಗಳು, ತೆಲುಗು ದೇಶಂ ಪಕ್ಷ, ಬಹುಜನಸಮಾಜ ಪಕ್ಷ, ಟಿಆರ್‌ಎಸ್ ಮತ್ತು ಎಐಎಡಿಎಂಕೆ ಪಕ್ಷಗಳ ಮುಖಂಡರು ಭಾಗವಹಿಸಿದ್ದ ಜಂಟಿ ರ್‍ಯಾಲಿ ಮೂಲಕ ಕರ್ನಾಟಕದಲ್ಲಿ ಚುನಾವಣಾ ಪ್ರಚಾರವನ್ನು ಆರಂಭಿಸಲಾಗಿದೆ. ಕಾಂಗ್ರೆಸ್ಸೇತರ ಜಾತ್ಯಾತೀತ ಪಕ್ಷಗಳು ಒಂದುಗೂಡುತ್ತಿರುವುದು ಎನ್‌ಡಿಎ ಮಿತ್ರರನ್ನು ಕ್ರೋಡೀಕರಿಸುವ ಬಿಜೆಪಿ ಪ್ರಯತ್ನಗಳಿಗೆ ಇನ್ನಷ್ಟು ಏಟು ಕೊಟ್ಟಿದೆ. ಪೂರ್ವ ಕರಾವಳಿಗುಂಟ ಅವರೊಂದಿಗಿದ್ದವರೆಲ್ಲಾ ಅವರಿಂದ ದೂರವಾಗಲು ನಿರ್ಧರಿಸಿದ್ದಾರೆ. ಒರಿಸ್ಸಾ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಅವರ ಜೊತೆಗಿದ್ದವರು ಈಗೊಂದು ಪರ್ಯಾಯ ಜಾತ್ಯಾತೀತ ಮೈತ್ರಿಯನ್ನು ಬೆಸೆಯುವ ಎಡರಂಗದ ಪ್ರಯತ್ನಗಳಲ್ಲಿ ಕೈಜೋಡಿಸುತ್ತಿದ್ದಾರೆ.

ಮಂಥನ ಶುರುವಾಗಿದೆ:

ಅಂದರೆ ಭಾರತದ ರಾಜಕಾರಣದಲ್ಲಿ ಒಂದು ಮಂಥನ ಪ್ರಕ್ರಿಯೆ ಆರಂಭವಾಗಿದೆ ಎಂಬುದೀಗ ಸ್ಪಷ್ಟ. ಪ್ರತಿದಿನ ಜನಗಳ ಬದುಕನ್ನು ಸಂಕಟಮಯಗೊಳಿಸುತ್ತಿರುವ ಸ್ಥಿತಿಗತಿಗಳು, ಅವನ್ನು ಮತ್ತಷ್ಟು ತೀವ್ರಗೊಳಿಸುತ್ತಿರುವ ಜಾಗತಿಕ ಆರ್ಥಿಕ ಹಿಂಜರಿತ ಈಗ ಬುಡಮಟ್ಟದಲ್ಲಿ ಕಣ್ಣುಕುಕ್ಕುತ್ತಿರುವ ಕಟು ವಾಸ್ತವತೆ. ಇವು ಜಾತ್ಯಾತೀತ ರಾಜಕೀಯ ಪಕ್ಷಗಳ ಮುಖಂಡರ ಮೇಲೆ ಒತ್ತಡ ತರುತ್ತಿವೆ. ಕಾರ್ಪೊರೇಟ್ ಲಾಭದ ಬಗ್ಗೆಯಷ್ಟೇ ಯೋಚಿಸುವುದನ್ನು ಬಿಟ್ಟು ಜನಕೇಂದ್ರಿತ ಪರ್ಯಾಯ ನೀತಿ-ಧೋರಣೆಗಳತ್ತ ಗಮನ ಹರಿಸಲೇಬೇಕಾಗಿ ಬಂದಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಇದನ್ನು ಮಾಡಲಾರವು ಎಂಬುದೀಗ ಅವುಗಳ ಆಳ್ವಿಕೆಗಳಿಂದ ಸಾಬೀತಾಗಿದೆ. ಒಂದು ರಾಜಕೀಯ ಪರ್ಯಾಯವಿದ್ದಾಗ ಮಾತ್ರವೇ ಇಂತಹದೊಂದು ನಿರ್ಣಾಯಕ ಪಲ್ಲಟ ಸಾಧ್ಯ.



ಎಡಪಕ್ಷಗಳ ಪಾತ್ರದ ಅನುಭವ

ಯುಪಿಎ ಸರಕಾರ ಕೈಗೊಂಡ ಕೆಲವು ಜನಪರ ಕ್ರಮಗಳು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು, ಅರಣ್ಯ ಉತ್ಪನ್ನಗಳ ಮೇಲೆ ಬುಡಕಟ್ಟು ಜನಗಳ ಹಕ್ಕುಗಳು, ಸಂಕಟಗ್ರಸ್ತ ರೈತರ ಸಾಲಮನ್ನಾ ಮುಂತಾದುವೆಲ್ಲ ಸಾಧ್ಯವಾಗಿರುವುದು ಕೂಡಾ ಎಡಪಕ್ಷಗಳು ಯುಪಿಎ ಸರಕಾರವನ್ನು ಬೆಂಬಲಿಸುತ್ತಿದ್ದಾಗ ಅವು ಸತತವಾಗಿ ಹಾಕಿದ್ದ ಒತ್ತಡಗಳಿಂದಲೇ ಎಂಬುದನ್ನು ಕೂಡಾ ಜನ ಕಂಡಿದ್ದಾರೆ. ಅಷ್ಟೇ ಅಲ್ಲ, ಜಾಗತಿಕ ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲಿ ಭಾರತಕ್ಕೆ ಸಂಪೂರ್ಣ ಆರ್ಥಿಕ ವಿನಾಶದಿಂದ ರಕ್ಷಣೆ ದೊರೆತಿದ್ದರೆ ಅದು ಕೂಡಾ ಯುಪಿಎ ಸರಕಾರ ತನ್ನ ವಿನಾಶಕಾರಿ ಆರ್ಥಿಕ ಉದಾರೀಕರಣದ 'ಸುಧಾರಣೆ'ಗಳನ್ನು ಮುಂದೊಯ್ಯದಂತೆ, ಎಡಪಕ್ಷಗಳು ತಡೆಯೊಡ್ಡಿದ್ದರಿಂದಲೇ ಸಾಧ್ಯವಾಯಿತು ಎಂಬುದನ್ನೂ ಜನ ನೋಡಿದ್ದಾರೆ. ಯುಪಿಎ ಸರಕಾರ ಭಾರತದ ರೂಪಾಯಿಯ ಪೂರ್ಣ ಪರಿವರ್ತನೀಯತೆ ತರಬೇಕು, ಪೆನ್ಶನ್ ನಿಧಿಗಳನ್ನು ಖಾಸಗೀಕರಿಸಬೇಕು, ಭಾರತದ ಖಾಸಗಿ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳು ವಹಿಸಿಕೊಳ್ಳಲು ಬಿಡಬೇಕು ಮತ್ತು ವಿಮಾವಲಯದಲ್ಲಿ ಎಫ್‌ಡಿಐ ಮಿತಿಯನ್ನು ಹೆಚ್ಚಿಸಬೇಕು ಎಂಬ ಆಕಾಂಕ್ಷೆ ಹೊಂದಿತ್ತು. ಅದಕ್ಕೆ ಎಡಪಕ್ಷಗಳು ಸತತವಾಗಿ ಒಡ್ಡಿದ ತೀವ್ರ ಪ್ರತಿರೋಧ ಈಗ ಭಾರತದ ಆರ್ಥಿಕಕ್ಕೆ ರಕ್ಷಣೆ ಒದಗಿಸಿದೆ ಎಂಬುದನ್ನು ಎಡ-ವಿರೋಧಿಗಳೂ ಅರೆ ಮನಸ್ಸಿನಿಂದ ಲಾದರೂ ಒಪ್ಪಿಕೊಳ್ಳುತ್ತಿದ್ದಾರೆ.

ಹೀಗೆ, ಒಂದೆಡೆ ಸರಕಾರ ಜನಪರ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಡ ತರುವಲ್ಲಿ, ಇನ್ನೊಂದೆಡೆ ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುವ ಲಂಗುಲಗಾಮಿಲ್ಲದ ಉದಾರೀಕರಣ ಕ್ರಮಗಳನ್ನು ತರದಂತೆ ತಡೆಯುವಲ್ಲಿ ಎಡಪಕ್ಷಗಳು ಒಂದು ಮಹತ್ವದ ಪಾತ್ರ ವಹಿಸಿವೆ ಎಂಬುದಂತೂ ವಿವಾದಾತೀತ. ಈ ಅನುಭವ ಮತ್ತು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಬೇಕು ಎಂಬ ಜನಸಮೂಹಗಳ ಆಕಾಂಕ್ಷೆಗಳು ಹಾಕುತ್ತಿರುವ ಒತ್ತಡ, ಇವುಗಳು ಹಲವು ಕಾಂಗ್ರೆಸ್ಸೇತರ ಪಕ್ಷಗಳು ಒಂದು ಜಾತ್ಯಾತೀತ ಪರ್ಯಾಯದತ್ತ ಸಾಗುವಂತೆ ಮಾಡಿವೆ.

ಎನ್‌ಡಿಎ ವೈರುಧ್ಯ

ಆರೆಸ್ಸೆಸ್ ಈ ವಾರ ನಿಜವಾದ ಹಿಂದುತ್ವ ಅಜೆಂಡಾ ಏನು ಎಂಬುದನ್ನು ದೃಢಪಡಿಸಿದೆ. ವಿವಾದಿತ ಸ್ಥಳದಲ್ಲಿ ರಾಮ ದೇವಸ್ಥಾನ ಕಟ್ಟುವ ಭರವಸೆ ನೀಡುವ ಪಕ್ಷಗಳಿಗೆ ಮಾತ್ರ ತನ್ನ ಬೆಂಬಲ ಎಂದು ಅದು ಹೇಳಿದೆ. ಅಂದರೆ ಮತ್ತೆ ಕೋಮುಧ್ರುವೀಕರಣ, ಅದರ ಫಲವಾಗಿ ರಕ್ತದೋಕುಳಿಯ ಅಪಾಯ ದೇಶವನ್ನು ಬಾಧಿಸಲಿದೆ. ಇದರಿಂದ ದೇಶವನ್ನು ಪಾರು ಮಾಡುವ, ಭಾರತೀಯ ಗಣತಂತ್ರದ ಜಾತ್ಯಾತೀತ-ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಿಕೊಂಡು ಧಾರ್ಮಿಕ ಅಲ್ಪಸಂಖ್ಯಾತರಿಗೆ ಭದ್ರತೆ ಒದಗಿಸುವ ಭರವಸೆ ಪರ್ಯಾಯ ಜಾತ್ಯಾತೀತ ಶಕ್ತಿಗಳಿಂದ ಮಾತ್ರ ಸಾಧ್ಯ. ಏಕೆಂದರೆ ಯುಪಿಎ ಸರಕಾರದ ಈ ಐದು ವರ್ಷಗಳಲ್ಲಿ ಕನಿಷ್ಟ ಹದಿಮೂರು ಸಂದರ್ಭಗಳಲ್ಲಿ ಕಾಂಗ್ರೆಸ್ ರಾಜ್ಯ ಮಟ್ಟದಲ್ಲಿ ಚುನಾವಣೆಗಳಲ್ಲಿ ಸೋತು ಅಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲು ಅನುಕೂಲ ಕಲ್ಪಿಸಿ ಕೊಟ್ಟಿದೆ ಎಂಬುದನ್ನು ನಾವು ನೆನಪಿಕೊಳ್ಳಬೇಕಾಗುತ್ತದೆ.

ಮತ್ತೆ ಕಟ್ಟಾ ಹಿಂದುತ್ವ ಅಜೆಂಡಾವನ್ನು ತರುವ ಮೂಲಕ ಆರೆಸ್ಸೆಸ್/ಬಿಜೆಪಿ ಎನ್‌ಡಿಎಯಲ್ಲಿ ಅಡಗಿರುವ ವೈರುಧ್ಯಕ್ಕೂ ಚಾಲನೆ ನೀಡಿದೆ ಎನ್ನಬಹುದು. ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ಪೂರ್ಣಕಾಲ ಅಧಿಕಾರದಲ್ಲಿರಲು ಸಾಧ್ಯವಾದದ್ದು ಅದು ಈ ಅಜೆಂಡಾವನ್ನು ಹಿನ್ನೆಲೆಗೆ ಸರಿಸಿದ್ದರಿಂದ ಎಂದು ಅವರೇ ಒಪ್ಪಿಕೊಂಡಿದ್ದಾರೆ ತಾನೇ? ಈಗ ಅದೇ ಮುಖ್ಯ ಅಜೆಂಡಾವಾದರೆ ಹಲವು ಎನ್‌ಡಿಎ ಪಕ್ಷಗಳು ಆ ಕೂಟದಲ್ಲಿ ಮುಂದುವರೆಯಬಹುದೇ ಎಂದು ಯೋಚಿಸಬೇಕಾಗಿ ಬರುತ್ತದೆ. ಈ ಬಾರಿಯಂತೂ ಈ ಅಂಶ ಇನ್ನಷ್ಟು ಒತ್ತಡ ತರುತ್ತದೆ. ಆದರೆ ಅತ್ತ ಆರೆಸ್ಸೆಸ್/ಬಿಜೆಪಿಗೆ ತಮ್ಮ ನೆಲೆ ಮತ್ತಷ್ಟು ಕ್ಷೀಣಗೊಳ್ಳದಂತೆ ತಡೆಯಲು ಕಾಣುವ ಏಕೈಕ ದಾರಿಯೆಂದರೆ ಇದೊಂದೇ-ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು. ಇತ್ತ ಅದನ್ನು ತೀಕ್ಷ್ಣಗೊಳಿಸಿದಷ್ಟು ಇತರ ಎನ್‌ಡಿಎ ಭಾಗೀದಾರರು ದೂರವಾಗುವ ಸ್ಥಿತಿ ಬಲಗೊಳ್ಳುತ್ತದೆ. ಇದೀಗ ಎನ್‌ಡಿಎಯನ್ನು ಬಾಧಿಸುವ ವೈರುಧ್ಯ.

ಅಬ್ಬರದ ಹಿಂದಿದೆ ಭಿನ್ನವಾದ ವಾಸ್ತವತೆ

ಆರ್ಥಿಕ ಧೋರಣೆಗಳಲ್ಲಿ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ಮುಂದೆ ಮಂಡಿಯೂರುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಏನೇನೂ ಭಿನ್ನಾಭಿಪ್ರಾಯವಿಲ್ಲ ಎಂಬುದನ್ನೂ ಜನ ಕಳೆದ ಹತ್ತು ವರ್ಷಗಳಲ್ಲಿ ಕಣ್ಣಾರೆ ನೋಡಿದ್ದಾರೆ. ಬಿಜೆಪಿಯ ಆಕ್ರಮಣಕಾರಿ ಕೋಮುವಾದಿ ಅಜೆಂಡಾ ಅಂತಿಮವಾಗಿ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ದುರ್ಬಲಗೊಳಿಸುತ್ತದೆ ಎಂಬುದು ಸ್ಪಷ್ಟ. ಇದರಿಂದಾಗಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸಿಕೊಳ್ಳುವ, ಜತೆಗೇ ಜನಗಳ ಕಲ್ಯಾಣ ಸಾಧಿಸುವ ಪರ್ಯಾಯ ನೀತಿಗಳ ದಿಕ್ಕಿನಲ್ಲಿ ಸಾಗುವ ಒಂದು ಪರ್ಯಾಯ ರಾಜಕೀಯ ರಚನೆ ಈಗ ಅನಿವಾರ್ಯವಾಗಿದೆ.

2004ರ ಲೋಕಸಭಾ ಚುನಾವಣೆಗಳ ಪ್ರಚಾರದ ಸಂದರ್ಭದಲ್ಲಿ ಬಿಜೆಪಿ/ಎನ್‌ಡಿಎ 'ಹೊಳೆಯುತ್ತಿರುವ ಭಾರತ' ಎಂಬ ಅಬ್ಬರ ಎಬ್ಬಿಸಿತು. ಆಗಿನ ಬಿಜೆಪಿ ಅಧ್ಯಕ್ಷರಂತೂ ತಮ್ಮ ಪಕ್ಷವೇ 300 ಸ್ಥಾನ ಗೆಲ್ಲುತ್ತದೆ, ಎನ್‌ಡಿಎ ಒಟ್ಟಾಗಿ 400 ಸ್ಥಾನ ಪಡೆಯುತ್ತದೆ ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದರು. ವಾಸ್ತವತೆ ಏನಿತ್ತು ಎಂದು ಚುನಾವಣೆಯ ಫಲಿತಾಂಶಗಳು ತೋರಿಸಿದವು.

ಈಗ ಯುಪಿಎ ಯ ಕೆಲವು ವಿಭಾಗಗಳಿಗೂ ಅದೇ ಕಾಯಿಲೆ ಬಾಧಿಸುವಂತೆ ಕಾಣುತ್ತಿದೆ. ವಾಸ್ತವತೆ ತೀರಾ ಭಿನ್ನವಾಗಿದೆ ಎಂದು ಅವರು ಕೂಡಾ ಅರಿಯುತ್ತಾರೆ. ಆಗಲೂ, ಈಗಲೂ ಮಾಧ್ಯಮಗಳು, ವಿಶೇಷವಾಗಿ ಇಲೆಕ್ಟ್ರಾನಿಕ್ ಮಾಧ್ಯಮ ಈ ಅಬ್ಬರದ ಬೆನ್ನಿಗೆ ನಿಂತಿವೆ ಎಂಬುದೂ ಗಮನಾರ್ಹ.

ಆದರೆ ಭಾರತದ ರಾಜಕಾರಣದಲ್ಲಿ ಈಗ ನಡೆಯುತ್ತಿರುವ ಮಂಥನ ಮುಂದಿನ ಚುನಾವಣೆಗಳಲ್ಲಿ ಒಂದು ಜನತೆಯ ಪರ್ಯಾಯದತ್ತ ಸಾಗುತ್ತಿರುವುದು ಕಾಣಬರುತ್ತಿದೆ. ಇದು ದೇಶದ ಧೋರಣೆಗಳ ದಿಕ್ಕಿನಲ್ಲಿ ಒಂದು ನಿರ್ಣಾಯಕ ಪಲ್ಲಟವನ್ನು ತರಬೇಕು, ದೇಶದ ಜನಗಳಿಗಾಗಿಯೂ, ಜಗತ್ತಿಗಾಗಿಯೂ ಒಂದು ಉತ್ತಮ ಭಾರತದ ನಿರ್ಮಾಣದತ್ತ ಸಾಗಬೇಕು ಎಂಬುದು ಎಲ್ಲ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ. ಈ ರಾಜಕೀಯ ದಿಕ್ಕು ಇನ್ನಷ್ಟು ಕ್ರೋಡೀಕರಣಗೊಳ್ಳಬೇಕು.

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ...)

ಜನರ ಸಂಕಟಗಳ ಪರಿಹಾರಕ್ಕೊಂದು ಪರ್ಯಾಯ ಮೂರನೇ ರಂಗ

ಕಾಂಗ್ರೆಸ್ ಬಿಜೆಪಿಗಳಿಗೆ ಪರ್ಯಾಯವನ್ನು ಘೋಷಿಸುವ ಐತಿಹಾಸಿಕ ಕ್ಷಣಗಳಿಗೆ ಮತ್ತೊಮ್ಮೆ ಕರ್ನಾಟಕದ ಜನತೆ ಸಾಕ್ಷಿಯಾದರು. ತುಮಕೂರು ಸಮೀಪದ ದಾಬಸ್‌ಪೇಟೆ ಬಳಿಯ 'ಗಾಂಧಿ ಗ್ರಾಮ' ದಲ್ಲಿ ನೆರೆದ ಬೃಹತ್ ಜನಸ್ತೋಮದ ಎದುರು ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತಪಕ್ಷಗಳ ಮೂರನೇರಂಗದ ಘೋಷಣೆ ಯಾಯಿತು. ಜೆಡಿ(ಎಸ್) ರಾಷ್ಟ್ರಾಧ್ಯಕ್ಷ ಎಚ್.ಡಿ.ದೇವೇಗೌಡ ಅಧ್ಯಕ್ಷತೆಯ ರ್‍ಯಾಲಿಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ಉದ್ಘಾಟಿಸಿದರು.

ಅಲ್ಲಿ ಉತ್ಸಾಹ, ತುಂಬಿ ತುಳುಕುತ್ತಿತ್ತು. ನೆರೆದ ಜನರ ನಡೆಯಲ್ಲಿ ನುಡಿಯಲ್ಲಿ ಅದು ಕಾಣುತ್ತಿತ್ತು. ತೆನೆ ಹೊತ್ತ ರೈತ ಮಹಿಳೆಯರ ಗುರುತಿನ ಹಸಿರು ಬಾವುಟ, ಕುಡುಗೋಲು ಸುತ್ತಿಗೆಯ ಗುರುತಿನ ಕೆಂಪು ಬಾವುಟ, ತೆನೆ ಕುಡುಗೋಲು ಗುರುತಿನ ಮತ್ತೊಂದು ಕೆಂಬಾವುಟ, ಆಂಧ್ರದಲ್ಲಿ ವ್ಯಾಪಕ ನೆಲೆ ಇರುವ ಹಳದಿ ಬಾವುಟಗಳು ಹಾರಾಡುತ್ತಿದ್ದವು. ಅದು 'ಜನೋತ್ಸಾಹ ರ್‍ಯಾಲಿ' ರಾಜ್ಯದ ವಿವಿಧ ದಿಕ್ಕುಗಳಿಂದ ಗಾಂಧಿ ಗ್ರಾಮಕ್ಕೆ ವಾಹನಗಳು ಹರಿದು ಬಂದವು. ಎಷ್ಟೆಲ್ಲಾ ವಾಹನಗಳು ಬಂದರೂ ಹೆಚ್ಚೇನೂ ಟ್ರಾಫಿಕ್ ಜಾಮ್, ಆದೂ ಇದು ತೊಂದರೆಯೇನೂ ಆಗಲಿಲ್ಲ. ಬಂದವರಲ್ಲಿ ದೊಡ್ಡ ಸಂಖ್ಯೆಯ ಜನರು ರೈತರು, ಅದರಲ್ಲೂ ಯುವ ರೈತರು ಮತ್ತು ಅವರನ್ನು ನೋಡಿದರೆ ಅವರು ಸಣ್ಣ ಅತಿ ಸಣ್ಣ ರೈತರು ಎಂದು ಹೇಳಿಬಿಡಬಹುದು. ಮಹಿಳೆಯರ ಪಾಲ್ಗೊಳ್ಳುವಿಕೆಗೆ, ಮಹಿಳೆಯ ಸಂಭ್ರಮಕ್ಕೆ ಕೂಡ ಕೊರತೆಯೇನೂ ಇರಲಿಲ್ಲ.

ಮೂರನೇ ರಂಗ ಎಲ್ಲಿದೆ, ಯಾರ್‍ಯಾರಿದ್ದಾರೆ. ಅದರಲ್ಲಿ? ಅಂತೆಲ್ಲಾ ತಾತ್ಸಾರದ ಮಾತನಾಡುತ್ತಿದ್ದ ಎಷ್ಟೋ ಜನ ಟೀಕಾಕಾರರಿಗೆ ಅಲ್ಲಿ ಉತ್ತರ ಸಿಕ್ಕಿತು. ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಟಿಡಿಪಿ, ಟಿಆರ್‌ಎಸ್, ಜೆಡಿ(ಎಸ್), ಮಾತ್ರವಲ್ಲ, ಬಿ.ಎಸ್.ಪಿ, ಎಐಎಡಿಎಂಕೆ, ಹರ್‍ಯಾಣ ಜನಹಿತ ಕಾಂಗ್ರೆಸ್, ಆರ್.ಎಸ್.ಪಿ. ಹೀಗೆ ಭಾರತದ ವೈವಿಧ್ಯತೆಯನ್ನು ಬಿಂಬಿಸುವ ಪಕ್ಷಗಳ ಮುಖಂಡರು ಅಲ್ಲಿ ನೆರೆದಾಗ ನೆರೆದ ಬೃಹತ್ ಜನಸ್ತೋಮದಲ್ಲಿ ವಿದ್ಯುತ್ ಸಂಚಾರದ ಭಾವನೆ. ರಾಷ್ಟ್ರ ರಾಜಕಾರಣಕ್ಕೆ ಹೊಸ ದಿಕ್ಕು ನೀಡಬಲ್ಲ ಐತಿಹಾಸಿಕ ಸಂದರ್ಭವೊಂದಕ್ಕೆ ತಾವು ಸಾಕ್ಷಿಯಾಗುತ್ತಿದ್ದೇವೆ



ಎಂಬ ಹೆಮ್ಮೆಯು ಜನರಲ್ಲಿ ಭವಿಷ್ಯದ ಬಗೆಗೆ ಮತ್ತಷ್ಟು ಭರವಸೆಯನ್ನು ಮೂಡಿಸಿತು. ತೃತೀಯ ರಂಗದ ಮುಖಂಡರು ಕೈ ಕೈ ಹಿಡಿದು ನಿಂತಾಗ ಕಾಂಗ್ರೆಸ್, ಬಿಜೆಪಿಗಳಿಗೆ ಪರ್ಯಾಯವಾದ ತೃತೀಯ ರಂಗದ

ಭಾರತದ ವೈವಿಧ್ಯತೆಯ - ಪ್ರಾತಿನಿಧ್ಯ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಿಕೆ - ತೃತೀಯ ರಂಗದಿಂದ ಮಾತ್ರ ಸಾಧ್ಯ

- ಪ್ರಕಾಶ್ ಕಾರಟ್



ಮೂರನೇ ರಂಗಮಾತ್ರದಿಂದ ಮಾತ್ರವೇ ಭಾರತದ ಭಾಷಾ, ಸಾಂಸತಿಕ, ಸಾಮಾಜಿಕ ವೈವಿಧ್ಯತೆಯನ್ನು ರಕ್ಷಿಸುವುದು, ದೇಶದ ಪ್ರಜಾಪ್ರಭುತ್ವವನ್ನು ಕಾಪಾಡುವುದು ಹಾಗೂ ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಅಧಿಕಾರವನ್ನು ನೀಡುವುದು ಸಾಧ್ಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್‌ಕಾರಟ್ ಹೇಳುವಾಗ ಅವರ ಮಾತಿನ ದೃಢತೆಗೆ ವೇದಿಕೆಯ ಮುಖಂಡರು ನೆರೆದ ಜನರು ತಲೆದೂಗಿದರು. ಅವರು ತೃತೀಯ ರಂಗದ ರ್‍ಯಾಲಿ ಉದ್ಘಾಟಿಸಿ ಈ ಮಾತು ಹೇಳಿದರು.

ಅಗಾಧ ಸಂಪನ್ಮೂಲ ದಯನೀಯ ಸ್ಥಿತಿ: ಭಾರತದಲ್ಲಿ ಅಗಾಧ ಪ್ರಾಕೃತಿಕ ಸಂಪನ್ಮೂಲವಿದೆ. ಮಾನವ ಸಂಪನ್ಮೂಲವಿದೆ. ವಿಜ್ಞಾನ ತಂತ್ರಜ್ಞಾನವಿದೆ. 60 ವರ್ಷಗಳ ಕಳೆದರೂ 20 ಕೋಟಿಗೂ ಹೆಚ್ಚು ತೀವ್ರ ಹಸಿವಿನಿಂದ ಬಳಲುತ್ತಿದ್ದಾರೆ. ಶೇ.50 ರಷ್ಟು ಮಹಿಳೆಯರು ರಕ್ತ ಹೀನತೆಯಿಂದ ನರಳುತ್ತಾರೆ. ಶೇ.39 ರಷ್ಟು ಜನರು ಅನಕ್ಷರಸ್ಥರಾಗಿದ್ದಾರೆ. 6 ದಶಕಗಳಲ್ಲಿ ಜನರ ಆಶೋತ್ತರಗಳು ಈಡೇರದೆ ವಿಫಲವಾಗಿವೆ.

ರೈತರ ಆತ್ಮಹತ್ಯೆ ಹೆಚ್ಚುತ್ತಿದೆ. ನಗರ ಗ್ರಾಮಾಂತರ ಪ್ರದೇಶಗಳೆರಡರಲ್ಲೂ ಸಮಸ್ಯೆಗಳು ಹೆಚ್ಚುತ್ತಿವೆ. ಆಹಾರದ ಉತ್ಪನ್ನಗಳ ಬೆಲೆ ತೀವ್ರವಾಗಿ ಏರಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ದೇಶದಲ್ಲಿ ಬ್ಯಾಂಕ್, ಕೈಗಾರಿಕೆ ವ್ಯಾಪಾರ ವಹಿವಾಟುಗಳು ಬಿಕ್ಕಟ್ಟಿಗೆ ಸಿಲುಕಿದೆ. 10 ಲಕ್ಷ ಜನ ಉದ್ಯೋಗ ಕಳೆದು ಕೊಂಡಿದ್ದಾರೆ. ಕೃಷಿ ಬಿಕ್ಕಟ್ಟು ಬಗೆಹರಿಸುವುದಲ್ಲಿ ಯುಪಿಎ ಸರ್ಕಾರ ವಿಫಲವಾಗಿದೆ. ರೈತರು, ಕೃಷಿ ಕೂಲಿಕಾರರು ಕುಶಲಕರ್ಮಿಗಳು ಸಣ್ಣ ವ್ಯಾಪಾರಿಗಳನ್ನು ರಕ್ಷಿಸುವ ಪರ್ಯಾಯ ಆರ್ಥಿಕ ನೀತಿ ಬೇಕಾಗಿದೆ. ಯುಪಿಎಯ 5 ವರ್ಷದ ಆಡಳಿತದಲ್ಲಿ ಶ್ರೀಮಂತರು ಸೂಪರ್ ಶ್ರೀಮಂತರಾಗಿದ್ದಾರೆ. ಜಗತ್ತಿನ 10 ಜನ ಶ್ರೀಮಂತರಲ್ಲಿ 4 ಜನ ಭಾರತದವರಿದ್ದಾರೆ.ನಮಗೆ ಅಭಿವೃದ್ಧಿ ಬೆಳವಣಿಗೆ ಬೇಕು. ಆದರೆ ಅದರಿಂದ ದೇಶದ ಬಹುಸಂಖ್ಯಾತ ಜನತೆಗೆ ಲಾಭವಾಗಬೇಕು.

ವಿಭಜನ ರಾಜಕೀಯ:

ಬಿಜೆಪಿ ಪಕ್ಷವು ಅದರ ಉಗಮದಿಂದಲೂ ಜನರನ್ನು ವಿಭಜಿಸುವ ಕೋಮುವಾದದ ಆಧಾರದಲ್ಲೇ ಕೆಲಸ ಮಾಡುತ್ತಿದೆ. ಅದು ಎಲ್ಲಾ ಪ್ರಶ್ನೆಗಳನ್ನು ಹಿಂದುತ್ವದ ಕೋಮುವಾದಿ ದೃಷ್ಟಿಯಿಂದಲೇ ನೋಡುತ್ತದೆ. ಭಯೋತ್ಪಾದನೆಯನ್ನು ಕೂಡ ಕೋಮುವಾದದ ಕನ್ನಡಕದಿಂದಲೇ ನೋಡುತ್ತದೆ.

ಬಿಜೆಪಿ ಧಾರ್ಮಿಕ ಉಗ್ರಗಾಮಿತ್ವವನ್ನು ಪ್ರಚೋದಿಸುತ್ತಾ ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರೂ, ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆಸುತ್ತಿದೆ. ಭಾರತದ ಬಹುಮುಖಿ ಸಂಸತಿಯನ್ನು ನಾಶ ಮಾಡಲು ನಿಂತಿದೆ. ಇಂತಹ ಬಿಜೆಪಿ ಅಧಿಕಾರಕ್ಕೆ ಬರಲು ಬಿಡುವುದಿಲ್ಲ. ಕೋಮುವಾದಿ ಬಿಜೆಪಿ ಜನವಿರೋಧಿ ಕಾಂಗ್ರೆಸ್ ನೀತಿಗಳಿಗೆ ಪರ್ಯಾಯವಾಗಿ ಬದಲಿ ನೀತಿಗಳ ಆಧಾರದಲ್ಲಿ ಮೂರನೇ ರಂಗದ ಪರ್ಯಾಯವನ್ನು ಘೋಷಿಸಲು ಇಲ್ಲಿ ಸೇರಿದ್ದೇವೆ.

13 ವರ್ಷಗಳ ಹಿಂದೆ ದೇವೇಗೌಡರ ನೇತೃತ್ವದಲ್ಲಿ ಸಂಯುಕ್ತರಂಗ ಅಧಿಕಾರಕ್ಕೆ ಬಂದ ಇತಿಹಾಸವಿದೆ. ಮೂರನೇ ರಂಗ ಪರ್ಯಾಯ ಶಕ್ತಿಯಾಗಿ ಮೂಡಿ ಬರುತ್ತಿದೆ. ಬಿಜೆಪಿ ಈಗ ಒಂದು ಮುಳುಗುತ್ತಿರುವ ಹಡಗು. ಯುಪಿಎ ರಾಷ್ಟ್ರೀಯ ಮಟ್ಟದಲ್ಲಿ ಅಸ್ತಿತ್ವದಲ್ಲಿ ಇಲ್ಲ ಎಂದು ಸ್ವತಃ ಕಾಂಗ್ರೆಸ್ಸೇ ಹೇಳಿಕೊಂಡಿದೆ. ಹಲವು ಪ್ರಾದೇಶಿಕ ಪಕ್ಷಗಳು ತೃತೀಯ ರಂಗದೊಂದಿಗೆ ಸಂಪರ್ಕದಲ್ಲಿವೆ ಇನ್ನಷ್ಟು ಪಕ್ಷಗಳು ತೃತೀಯರಂಗವನ್ನು ಸೇರಲಿವೆ. ಕೇಂದ್ರದಲ್ಲಿ ಜಾತ್ಯಾತೀತ ಸರ್ಕಾರ ಮೂಡಿ ಬರುತ್ತದೆ. ಜಾತ್ಯಾತೀತ ಎಂದಾಕ್ಷಣ ಅದು ಕಾಂಗ್ರೆಸ್ ನೇತೃತ್ವದ ಸರ್ಕಾರ ಅಲ್ಲ. ಜಾತ್ಯಾತೀತತೆ ಒಂದೇ ಮೂರನೇರಂಗದ ಸಮಾನ ಅಂಶ ಅಲ್ಲ. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವಂತಹ ಪ್ರಮುಖ ಅಂಶವೂ ಈ ರಂಗದ ಮುಂದಿದೆ ಎಂದು ಪ್ರಕಾಶ್‌ಕಾರಟ್ ಹೇಳಿದರು.

ತೃತೀಯ ರಂಗ: ಅಧಿಕಾರದ ಪರ್ಯಾಯ ಅಲ್ಲ ಕಾರ್ಯಕ್ರಮ ನೀತಿಯ ಪರ್ಯಾಯ

ಎ.ಬಿ.ಬರ್ಧನ್



ದೇಶದ ಜನ ಕಾಂಗ್ರೆಸ್ ನೇತೃತ್ವ ನೋಡಿದ್ದಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ನೋಡಿದ್ದಾಗಿದೆ. ಜಾಗತೀಕರಣ, ಉದಾರೀಕರಣ, ಉದಾರೀಕರಣದ ನೀತಿಗಳನ್ನು ಜಾರಿ ಮಾಡಲು, ವಿದೇಶಿ ಬ್ಯಾಂಕ್ ಖಾಸಗಿ ಬ್ಯಾಂಕ್‌ನ್ನು ವಶಕ್ಕೆ ತೆಗೆದುಕೊಳ್ಳುವ ಅವಕಾಶ ನೀಡಲು, ಜನರ ಪಿಂಚಣಿ ಹಣವನ್ನು ಜೂಜಿನಲ್ಲಿ ತೊಡಗಿಸುವುದು, ವಿಮೆಯ ಖಾಸಗೀಕರಣ ಇತ್ಯಾದಿಗಳಿಗೆ ಎಡಪಕ್ಷಗಳು ಅವಕಾಶ ನೀಡಲಿಲ್ಲ. ಇದರಿಂದಾಗಿ ಅಮೇರಿಕಾದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಜರ್ಮನಿ ಫ್ರಾನ್ಸ್, ಮುಂತಾದೆಡೆಗಳಲ್ಲಿ ಆದಂತೆ ಭಾರತದಲ್ಲಿ ಆರ್ಥಿಕತೆ ತೀವ್ರವಾಗಿ ಕುಸಿದು ಬೀಳಲಿಲ್ಲ.

ಯುಪಿಎ ಸರ್ಕಾರ, ಅಮೇರಿಕಾದೊಂದಿಗೆ ಅಣು ಒಪ್ಪಂದದ ಮೂಲಕ ಸ್ವತಂತ್ರ ವಿದೇಶಾಂಗ ನೀತಿಗೆ ಧಕ್ಕೆ ತಂದಿದ್ದರಿಂದ ಎಡಪಕ್ಷಗಳು ಯುಪಿಎಗೆ 'ತಲಾಕ್' ಹೇಳಿದವು. ಮೂರನೇ ರಂಗ ಕೇವಲ ಅಧಿಕಾರದ ಪರ್ಯಾಯ ಅಲ್ಲ. ನೀತಿ ಕಾರ್ಯಕ್ರಮದ ಪರ್ಯಾಯ. ಅಣು ಒಪ್ಪಂದಕ್ಕೆ ವಿರೋಧದ ಮೂಲಕ, ವಿಶ್ವಾಸ ಮತದ ವಿರುದ್ಧ ಮತ ನೀಡುವ ಮೂಲಕ ಮೂರನೇ ರಂಗದ ರೂಪುರೇಷೆ ಮೊಳೆಯಿತು.

ವೆಂಕಯ್ಯನಾಯ್ಡುರವರು ಮೂರನೇ ರಂಗವನ್ನು ಮೂರನೇ ದರ್ಜೆಯ ರಂಗ ಎಂದಿದ್ದಾರೆ. ಆ ಟೀಕೆಯು ಮೂರನೇ ದರ್ಜೆಯದು. ಮೂರನೇರಂಗವಲ್ಲ ಎಂದ ಬರ್ಧನ್ ರಾಷ್ಟ್ರೀಯ ಪಕ್ಷ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಬಿಹಾರದಲ್ಲಿ 5 ಸೀಟಿಗಾಗಿ ಉತ್ತರ ಪ್ರದೇಶದಲ್ಲಿ 10-15 ಸೀಟುಗಳಿಗಾಗಿ ಕೈಯೊಡ್ಡಬೇಕಾಗಿದೆ. ಎಲ್.ಕೆ.ಅಡ್ವಾಣಿ ದೇಶದಲ್ಲಿ ಕಾಂಗ್ರೆಸ್, ಬಿಜೆಪಿಗಳ ನೇತೃತ್ವದ ಎರಡೇ ರಂಗ ದೇಶದಲಿ ಸಾಧ್ಯ ಎಂದರು. ಆದರೆ ವೈವಿಧ್ಯಮಯ ಭಾರತದಲ್ಲಿ ಅದು ಸಾಧ್ಯವಿಲ್ಲ. ಮೂರನೇ ರಂಗ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಿರುವುದು ಖಚಿತ ಎಂದರು.

ಒಂದು ಮೂರ್ತಚಿತ್ರ ಜನರ ಕಣ್ಣು ತುಂಬಿತು.

ತುಮಕೂರು ಸಮೀಪದ ದಾಬಸ್‌ಪೇಟೆಯ ಬಳಿಯ ಗಾಂಧಿ ಗ್ರಾಮದಲ್ಲಿ ನಡೆದ ಈ ಐತಿಹಾಸಿಕ ರ್‍ಯಾಲಿಯನ್ನು ತಮ್ಮ ಮಾತುಗಳ ಮೂಲಕ ಉದ್ಘಾಟಿಸಿದ್ದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್‌ಕಾರಟ್, 'ಸಹೋದರ, ಸಹೋದರಿಯರೇ ನಿಮಗೆಲ್ಲರಿಗೂ ಹಾರ್ದಿಕ ಶುಭಾಶಯಗಳು' ಎಂದು ಕನ್ನಡದಲ್ಲಿ ಶುಭಕೋರಿದ



ಕಾರಟ್ ಈ ಬೃಹತ್ ರ್‍ಯಾಲಿಯನ್ನು ಸಂಘಟಿಸಲು ಶ್ರಮಿಸಿದ ದೇವೇಗೌಡರನ್ನು ಅಭಿನಂದಿಸಿದರು. ಎಡ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ಕೋಮುವಾದಿ ಶಕ್ತಿಗಳನ್ನು ಸೋಲಿಸುವ ಮತ್ತು ವಿವಿಧ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸುವ ಮೂರನೇ ರಂಗದ ಸ್ಥಾಪನೆ ಕುರಿತು ಘೋಷಿಸಲು ಇಲ್ಲಿ ನಾವೆಲ್ಲಾ ಸೇರಿದ್ದೇವೆ ಎಂದು ಪ್ರಕಾಶ್‌ಕಾರಟ್ ಘೋಷಿಸಿದರು.

ಜಾತಿ ಧರ್ಮ ಆಧಾರದಲ್ಲಿ ಸಾಮಾಜಿಕ ವಿಭಜನೆ ತರುವ ಬಿಜೆಪಿ ಕಾಂಗ್ರೆಸ್ ಅಧಿಕಾರಕ್ಕೇರಬಾರದು

ಸತೀಶ್ ಮಿಶ್ರ, ಬಿ.ಎಸ್.ಪಿ

60 ವರ್ಷಗಳ ಸ್ವಾತಂತ್ರ್ಯ ನಂತರವೂ ದೇಶದ 90 ಶೇ. ಜನರು ತೊಂದರೆಯಲ್ಲಿದ್ದಾರೆ. ಶಿಕ್ಷಣ, ಆರೋಗ್ಯ ವಸತಿ ಸೌಕರ್ಯಗಳಿಲ್ಲ. ಮೇಲ್ಜಾತಿ ಕೆಳಜಾತಿಗಳ ನಡುವೆ ಕಂದರವಿದೆ. ಎಸ್‌ಸಿ ಎಸ್‌ಟಿ ವಿಭಾಗಗಳ ಜನರನ್ನು ಪ್ರಾಣಿಗಳಿಗಿಂತ ಕಡೆಯಾಗಿ ಶೋಷಿಸಲಾಗುತ್ತಿದೆ. ಕೆಳಜಾತಿ ಮೇಲ್ಜಾತಿಗಳ ನಡುವಿನ ಕಂದರ ಮುಚ್ಚಲು ಕಾಂಗ್ರೆಸ್ ಏನೂ ಮಾಡಲಿಲ್ಲ. ಬಿಜೆಪಿ ಕಾಂಗ್ರೆಸ್‌ಗಳು ಶ್ರೀಮಂತರು, ಬಂಡವಾಳಗಾರರಿಂದ ಹಣ ಪಡೆಯುತ್ತವೆ. ಅವರಿಗಾಗಿ ಕೆಲಸ ಮಾಡುತ್ತವೆ. ಧರ್ಮ, ಜಾತಿಗಳ ಆಧಾರದಲ್ಲಿ ಸಾಮಾಜಿಕ ವಿಭಜನೆ ತರುವ ವಿಭಜನಾಕಾರಿ ರಾಜಕೀಯ ಮಾಡುವ ಬಿಜೆಪಿ, ಕಾಂಗ್ರೆಸ್‌ಗಳು ಕೇಂದ್ರದಲ್ಲಿ ಅಧಿಕಾರಕ್ಕೆ ಬರಬಾರದು. ಮೂರನೇ ರಂಗಕ್ಕೆ ಅಡಿಪಾಯ ಹಾಕಲಾಗಿದೆ ಎಂದು ಬಹುಜನ ಸಮಾಜ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಬಿಎಸ್‌ಪಿ ನಾಯಕಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿಯವರ ಪ್ರತಿನಿಧಿಯಾಗಿ ರ್‍ಯಾಲಿಯಲ್ಲಿ ಪಾಲ್ಗೊಂಡ ಸತೀಶ್‌ಮಿಶ್ರ ಹೇಳಿದರು. ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೇರಿರುವ ಬಿಎಸ್‌ಪಿ ಪಕ್ಷದ ಮಾಯಾವತಿಯ ನೇತೃತ್ವದಲ್ಲಿ ಅಂಬೇಡ್ಕರ್‌ರ ಕನಸು ನನಸು ಮಾಡಲು ಪ್ರಯತ್ನಿಸುತ್ತಿದೆ ಎಂದೂ ಅವರು ಹೇಳಿದರು.

ಕೃಷಿ ಬಿಕ್ಕಟ್ಟಿನ ಬಗ್ಗೆ ಕಾಂಗ್ರೆಸ್‌ನದು ಬರೀ ಭಾಷಣ :

ಚಂದ್ರಬಾಬುನಾಯ್ಡು

ಯುಪಿಎ ಮತ್ತೆ ಅಧಿಕಾರಕ್ಕೆ ಬಂದರೆ 40 ರೂ ಇರುವ ಅಕ್ಕಿಯ ಬೆಲೆ 80 ರೂಪಾಯಿ ಆಗಲಿದೆ. ರೇಷನ್ ಡಿಪೋದಲ್ಲಿ ಸಕ್ಕರೆ ಸಿಗುವುದಿಲ್ಲ. ರೈತರ ಆತ್ಮಹತ್ಯೆ ತೀವ್ರಗೊಂಡರೂ ಕಾಂಗ್ರೆಸ್ ಡಾ: ಸ್ವಾಮಿನಾಥನ್ ವರದಿಯ ಬಗೆಗೆ ಬರೀ ಉಪನ್ಯಾಸ ನೀಡಿತು. ರೈತರ ಸಾಲ ಪೂರ್ತಿ ಮನ್ನಾ ಮಾಡಲಿಲ್ಲ. ಕೃಷಿ ಲಾಗುವಾಡು(ಹೂಡಿಕೆ)ಗಳಾದ ಗೊಬ್ಬರ, ಬೀಜ, ಔಷಧಿ ಮುಂತಾದವುಗಳ ಬೆಲೆ ಕಡಿಮೆ ಮಾಡಲಿಲ್ಲ. ಜಾಗತಿಕ ಬಿಕ್ಕಟ್ಟಿನ ದುಷ್ಪರಿಣಾಮಕ್ಕೂ ಪರಿಹಾರವಿಲ್ಲ. ಎಡಪಕ್ಷಗಳ ಹೋರಾಟದಿಂದ ಮಾತ್ರವೇ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಯಾಯಿತು. ವಿಮಾರಂಗ, ಬ್ಯಾಂಕ್ ಮುಂತಾದವುಗಳ ಖಾಸಗೀಕರಣಕ್ಕೆ ಎಡಪಕ್ಷಗಳು ಪ್ರತಿರೋಧ ಒಡ್ಡಿದ್ದರಿಂ ದಾಗಿಯೇ ಇಂದು ಆರ್ಥಿಕ ಬಿಕ್ಕಟ್ಟಿನ ಪರಿಣಾಮದಿಂದ ದೇಶದ ಆರ್ಥಿಕ ಕುಸಿಯುವ ಅಪಾಯ ತಪ್ಪಿದೆ. ಬಿಜೆಪಿಯು ಕರ್ನಾಟಕದಲ್ಲಿ ಆಪರೇಷನ್ ಕಮಲದ ಮೂಲಕ ದುಡ್ಡುಕೊಟ್ಟು, ಶಾಸಕರನ್ನು ಖರೀದಿಸಿದರೂ ಮತ್ತೆ ಜೆಡಿ(ಎಸ್) 3 ಸ್ಥಾನ ಗೆದ್ದಿತು. ಕಾಂಗ್ರೆಸ್ ಒಂದೂ ಸ್ಥಾನ ಗೆಲ್ಲಲಿಲ್ಲ. ತೃತೀಯರಂಗ ಇಂದಿನ ಅಗತ್ಯವಾಗಿದೆ. ಆದಕ್ಕಾಗಿ ನಾವೆಲ್ಲಾ ಒಂದಾಗಿ ಶ್ರಮಿಸುತ್ತೇವೆ ಎಂದು ಚಂದ್ರಬಾಬುನಾಯ್ಡು ಘೋಷಿಸಿದರು.

ಪುಟ 10 ಕ್ಕೆ

ಕಳೆ ಕಟ್ಟಿದ ಭಾಷಾ ವೈವಿಧ್ಯತೆ

ಮೂರನೇ ರಂಗದ ರ್‍ಯಾಲಿಯಲ್ಲಿ ಮೂರನೇ ರಂಗ ಮಾತ್ರವೇ ಭಾರತದ ಶ್ರೀಮಂತ ವೈವಿಧ್ಯತೆಯನ್ನು ಸಮರ್ಥವಾಗಿ ಬಿಂಬಿಸಲು ಸಾಧ್ಯ ಎಂದು ಸಾರಲಾಯಿತು. ಅದೇನು ಸುಳ್ಳಲ್ಲ. ಸ್ವತಃ ರ್‍ಯಾಲಿಯಲ್ಲಿ ಬಳಸಲಾದ ಭಾಷೆಗಳೇ ಅದನ್ನು ಹೇಳಿದವು.

ಪ್ರಕಾಶ್‌ಕಾರಟ್ ಕನ್ನಡದಲ್ಲಿ ಶುಭಾಶಯ ಹೇಳಿ ಇಂಗ್ಲೀಷ್‌ನಲ್ಲಿ ಮಾತನಾಡಿದರು. ಚಂದ್ರಬಾಬು ತೆಲುಗಿನಲ್ಲಿ ಮಾತನಾಡಿ ಸಿಳ್ಳೆಗಿಟ್ಟಿಸಿಕೊಂಡರು. ಡಾ: ಮೈತ್ರೇಯನ್ ತಮಿಳಿನಲ್ಲಿ ಆರಂಭಿಸಿ ಆಮೇಲೆ ಇಂಗ್ಲೀಷ್‌ಗೆ ಹೊರಳಿದರು. ಟಿ.ಆರ್.ಎಸ್.ನ ತಾರಕರಾಮರಾಮ್ ಅವರು ಕೆಲವು ಮಾತನ್ನು ಕನ್ನಡದಲ್ಲೇ ಆಡಿದರು. ಜೆಡಿ(ಎಸ್)ನ ಡ್ಯಾನಿಷ್ ಆಲಿ ಹಿಂದಿಯಲ್ಲಿ ಮಾತನಾಡಿದರು.

ತಮಗೆ ಅರ್ಥವಾದ ಭಾಷೆಗೆ ಜನ ಹೆಚ್ಚು ಸ್ಪಂದಿಸಿದರಾದರೂ ಯಾವುದೇ ಕ್ಷಣದಲ್ಲೂ ಜನ ಭಾಷಾಂಧತೆಯ ಭಾವನೆ ತೋರದೆ ಸೌಹಾರ್ದ ಮೆರೆದರು. ಇನ್ನೂ ದೇವೇಗೌಡರು ಹೆಚ್.ಡಿ.ಕುಮಾರಸ್ವಾಮಿ ಮುಂತಾದವರು ಅಚ್ಚ ಕನ್ನಡದಲ್ಲೇ ಮಾತನಾಡಿದರು.

ತೃತೀಯ ರಂಗದಿಂದಲೇ ದೇಶಕ್ಕೆ ಭವಿಷ್ಯ..

= ಹೆಚ್.ಡಿ.ದೇವೇಗೌಡ



ಕರ್ನಾಟಕದಲ್ಲಿ ರೈತರ ಭೂಮಿಯನ್ನು ದೇವೇಗೌಡ ಕಿತ್ತುಕೊಳ್ಳಲಾಗುತ್ತಿದೆ. ಕನಕಪುರ ಕ್ಷೇತ್ರದಲ್ಲಿ 40 ಜನ ರೈತರ ಆಸ್ತಿ ಜಪ್ತಿ ಮಾಡಿಕೊಂಡು ಕೃಷ್ಣ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಈಗಿನ ಸರ್ಕಾರವೂ ಅದೇ ನೀತಿ ಅನುಸರಿಸುತ್ತಿದೆ. ಬಡವರಿಗೆ ಆತ್ಮಹತ್ಯೆ ದಾರಿ ತೋರಿಸಲಾಗುತ್ತಿದೆ. ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಕೇವಲ 1500 -2000 ರೂ.ಸಂಬಳ ಪಡೆಯುತ್ತಿದ್ದಾರೆ. ಕಾಂಗ್ರೆಸ್ ಬಿಜೆಪಿಗಳು ಜನರ ವಿಶ್ವಾಸ ಕಳೆದುಕೊಂಡಿವೆ. ಕೋಮುವಾದಿ ಕಾರ್ಯ ಸೂಚಿಯಿಂದ ವಿವಿಧ ಪ್ರಾದೇಶಿಕ ಪಕ್ಷಗಳು ಬಿಜೆಪಿಯಿಂದ ದೂರ ಸರಿಯುತ್ತಿದ್ದಾರೆ. ತೃತೀಯರಂಗದಿಂದಲೇ ದೇಶದಕ್ಕೆ ಭವಿಷ್ಯ ತೃತೀಯರಂಗಕ್ಕೆ ರಾಷ್ಟ್ರೀಯ ನೀತಿ ಆಧಾರದಲ್ಲಿ ದಾಖಲೆ ರೂಪಿಸುತ್ತಿವೆ ಎಂದೂ ಮಾಜಿ ಪ್ರಧಾನಿ ಜೆಡಿ(ಎಸ್) ರಾಷ್ಟ್ರಾಧ್ಯಕ್ಷ ಹೆಚ್.ಡಿ.ದೇವೇಗೌಡ ನುಡಿದರು.

ಬಿಜೆಪಿ-ಕಾಂಗ್ರೆಸ್‌ಗಳಿಂದ ಪ್ರಾದೇಶಿಕ ಪಕ್ಷಗಳ ಆಹುತಿ

=ಕುಮಾರಸ್ವಾಮಿ

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಜೆಡಿ(ಎಸ್)ನಂತಹ ಪ್ರಾದೇಶಿಕ ಪಕ್ಷಗಳನ್ನು ಆಹುತಿ ತೆಗೆದುಕೊಳ್ಳಲು ಪ್ರಯತ್ನಿಸುತ್ತಿವೆ. ಈ ಪಕ್ಷಗಳಿಗೆ ಜನರ ಸಮಸ್ಯೆ ಬಗೆಹರಿಸುವ ಅರ್ಹತೆ ಇಲ್ಲ. ಇಂದು ರಾಜ್ಯದಲ್ಲಿ ಹಳ್ಳಿಗಳಲ್ಲಿ ವಿದ್ಯುತ್ ಇಲ್ಲಿ ರೈತರು ತೊಂದರೆಗೊಳಗಾಗಿದ್ದಾರೆ. ಶಾಲಾ ಕಾಲೇಜುಗಳ ಮಕ್ಕಳು ಗ್ಯಾಸ್‌ಲೈಟ್ ಹಿಡಿದು ಪ್ರತಿಭಟಿಸುತ್ತಿದ್ದಾರೆ. ಕುಡಿಯುವ ನೀರು ಇಲ್ಲ. ಯಡಿಯೂರಪ್ಪ, ವೀರಶೈವರಲ್ಲೂ ಕೂಡ ತಮ್ಮ ಉಪಜಾತಿಯ ರಕ್ಷಣೆಗೆ ನಿಂತಿದ್ದಾರೆ ಎಂದು ಅವರು ಪಕ್ಷದ ಮುಖಂಡರೇ ಹೇಳುತ್ತಿದ್ದಾರೆ. ಈ ಸರ್ಕಾರ ಜನರಿಗೆ ಅಕ್ಕಿ ಕೊಡಲು ವಿಫಲವಾಗಿದೆ. ಆಪರೇಷನ್ ಕಮಲ ನಿಲ್ಲುವುದಿಲ್ಲ ಎನ್ನುತ್ತಾರೆ. ಜನತೆ ಆಪರೇಷನ್ ಮಾಡಿ ಬಿಜೆಪಿಯನ್ನು ಹೊರಗೆ ಹಾಕಬೇಕು. ಸಂಸತಿ ರಕ್ಷಣೆ ಹೆಸರಿನಲ್ಲಿ ಭಜರಂಗದಳ, ಬಿಜೆಪಿ ಕಾರ್ಯಕರ್ತರಿಗೆ ಸ್ವೇಚ್ಛಾಚಾರಕ್ಕೆ ಅವಕಾಶ ನೀಡಲಾಗಿದೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಕಬ್ಬು, ಕೊಬ್ಬರಿ, ಆಲೂಗಡ್ಡೆ, ಟಮೋಟೋ ತರಕಾರಿ ಬೆಳೆದು ಕಷ್ಟಕ್ಕೆ ಸಿಲುಕಿದ ರೈತರ ನೆರವಿಗೆ ಸರ್ಕಾರ ಬರಲಿಲ್ಲ.

ಬಿಜಾಪುರದ ಕಬ್ಬಿನ ರೈತರ ಬಾಕಿ ಬಿಡುಗಡೆ ಹೋರಾಟ ಮಾಡಿದಾಗ ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲಿ 39 ಕೋಟಿ ಹಣ ಬಿಡುಗಡೆ ಮಾಡುತ್ತೇನೆಂದು ಹೇಳಿ ಮತ ಪಡೆದ ಯಡಿಯೂರಪ್ಪ ಇಲ್ಲಿಯವರೆಗೆ ಏನೂ ಮಾಡಿಲ್ಲ.

ಕೈಗಾರಿಕೆಗಳಿಗೂ ವಿದ್ಯುತ್ ಇಲ್ಲ. ಗಾರ್ಮೆಂಟ್ಸ್‌ಗಳು ಮುಚ್ಚಿ ಸಾವಿರಾರು ಜನ ಬೀದಿಗೆ ಬಿದ್ದಿದ್ದಾರೆ. ಆ ಬಗ್ಗೆ ಸರ್ಕಾರ ಚಿಂತನೆ ನಡೆಸಿಲ್ಲ. ಆದರೆ ಮತ್ತೊಂದು ಕಡೆ 10 ಲಕ್ಷ ಉದ್ಯೋಗ ಕೊಡುತ್ತೇವೆಂದು ಯಡಿಯೂರಪ್ಪ ಮಾತ ನಾಡುತ್ತಿದ್ದಾರೆ. ರಾಜ್ಯ ಸರ್ಕಾರದ ಬಜೆಟ್ ಒಂದು ಪೊಳ್ಳು ಘೋಷಣೆ. ಜನ ಬಿಜೆಪಿ ಸರ್ಕಾರವನ್ನು ಕಿತ್ತೆಸೆಯಬೇಕು ಎಂದು ಕುಮಾರಸ್ವಾಮಿ ಹೇಳಿದರು.

ಜೆಡಿ(ಎಸ್)ನ ಡ್ಯಾನಿಷ್ ಆಲಿ ಸಹ ಸಭೆಯಲ್ಲಿ ಮಾತನಾಡಿದರು, ವೇದಿಕೆಯಲ್ಲಿ ಟಿ.ಆರ್.ಎಸ್‌ನ ಎಂ.ಎಲ್.ಸಿ. ರಮಾನಂದ್, ಹರ್ಯಾಣ ಜನಹಿತ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಭಜನ್‌ಲಾಲ್‌ರವರ ಪುತ್ರ ಕುಲದೀಪ್ ವಿಷ್ಣೋಯ್, ಮುಂತಾದವರಲ್ಲದೇ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಸಿದ್ದನಗೌಡ ಪಾಟೀಲ್, ರಾಜ್ಯ ಮುಖಂಡರಾದ ಅನಂತ ಸುಬ್ಬರಾವ್, ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಮುಖಂಡರಾದ ಜಿ.ಆರ್.ಶಿವಶಂಕರ್, ಜೆಡಿ(ಎಸ್) ಮುಖಂಡರಾದ ಹೆಚ್.ಡಿ.ರೇವಣ್ಣ, ಸಿ.ನಾರಾಯಣಸ್ವಾಮಿ, ಚಲುವನಾರಾಯಣ ಸ್ವಾಮಿ, ಡೇವಿಡ್ ಸಿಮೆಯೋನ್, ಜಮೀರ್ ಅಹಮದ್, ಮುಂತಾದವರು ಉಪಸ್ಥಿತರಿದ್ದರು. ಜೆಡಿ(ಎಸ್) ವಕ್ತಾರ ವೈ.ಎಸ್.ವಿ. ದತ್ತಾ ಕಾರ್ಯಕ್ರಮ ನಿರೂಪಿಸಿದರು.

ಕರ್ನಾಟಕವನ್ನು ಗುಜರಾತ್ ಮಾಡಲು ಬಿಡುವುದಿಲ್ಲ:

ನಮ್ಮ ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ನಾಶ ಮಾಡಿ ನಮ್ಮ ಸಮಾಜ ಹಿಂದಕ್ಕೊಯ್ಯಲು ಬಿಜೆಪಿಯು ಯತ್ನಿಸುತ್ತಿದೆ. ಇಂತಹ ಬಿಜೆಪಿಯು ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಬಿಡುವುದಿಲ್ಲ. ಹಾಗೂ ಕರ್ನಾಟಕವನ್ನು ಗುಜರಾತ್ ಮಾಡಲು ಬಿಡುವುದಿಲ್ಲ. ಜೆಡಿ(ಎಸ್) ನೇತೃತ್ವದಲ್ಲಿ ಪ್ರತಿರೋಧ ರೂಪಿಸುತ್ತೇವೆ.

-ಪ್ರಕಾಶ್‌ಕಾರಟ್

ಒರಿಸ್ಸಾ : ಬಿಜೆಪಿ ಮುಸುಡಿಗೆ ಬಿಜೆಡಿ ಗುದ್ದು



ಒರಿಸ್ಸಾದಲ್ಲಿ ಏನು ನಡೆದಿದೆಯೋ ಅದು ಆ ರಾಜ್ಯ ಮಾತ್ರವಲ್ಲ. ಇಡೀ ದೇಶದ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಅಂಶವಾಗಿದೆ. ಮಹತ್ವದ ಮಾತ್ರವಲ್ಲ ದೇಶದ ರಾಜಕಾರಣ ಸಾಗಿರುವ ಹಾದಿಯ ದಿಕ್ಸೂಚಿಯಾಗಿದೆ.

ತಾನು ಈಗಾಗಲೇ ದೇಶದ ಪ್ರಧಾನಿ ಆಗಿಯೇ ಬಿಟ್ಟಿದ್ದೀನಿ ಅಥವಾ ಅದಕ್ಕೆ ತುಂಬಾ ಹತ್ತಿರದಲ್ಲಿದ್ದೀನಿ ಎಂಬಂತೆ ಹಾರಾಡುತ್ತಿದ್ದ ಎನ್‌ಡಿಎ ಪ್ರಧಾನಿ ಅಭ್ಯರ್ಥಿ ಹಾಗೂ ಬಿಜೆಪಿ ಬಳಗಕ್ಕೆ ಆಘಾತ ಕೊಟ್ಟು ಅವರನ್ನು ವಾಸ್ತವ ಪರಿಸ್ಥಿತಿಗೆ ಕಣ್ಣು ಬಿಡುವಂತೆ ಮಾಡಿದ್ದು ಇತ್ತೀಚಿನ ಒರಿಸ್ಸಾದಲ್ಲಿನ ಬೆಳವಣಿಗೆ.

ಬಿಜು ಜನತಾದಳ ಎನ್‌ಡಿಎ ಕೂಟದಿಂದ ಹೊರಬಂದಿದೆ. ಒರಿಸ್ಸಾದಲ್ಲಿ ತಾನು ಬಿಜೆಪಿಯೊಂದಿಗೆ ಚುನಾವಣೆಗೆ ಹೋಗುವುದಿಲ್ಲವೆಂದು ಘೋಷಿಸಿದೆ. ಇದರೊಂದಿಗೆ ಭಾರತದ ಪೂರ್ವ ಕರಾವಳಿ ತೀರದ ರಾಜ್ಯಗಳು ಅಂದರೆ ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರ, ತಮಿಳುನಾಡು ಇಷ್ಟೂ ರಾಜ್ಯಗಳಲ್ಲಿ ಎಲ್ಲಿಯೂ ಬಿಜೆಪಿಗೆ ಮಿತ್ರರೇ ಇಲ್ಲದಂತಾಗಿ ಅದು ಏಕಾಂಗಿಯಾಗಿದೆ.

ಇದು ಬರೀ ಒರಿಸ್ಸಾ ರಾಜ್ಯದ ಮೇಲೆ ಮಾತ್ರವಲ್ಲ ಇಡೀ ರಾಷ್ಟ್ರ ರಾಜಕಾರಣದ ಮೇಲೆ ಪ್ರಭಾವ ಬೀರಬಲ್ಲ ಅತ್ಯಂತ ಮಹತ್ವ ಬೆಳವಣಿಗೆಯಾಗಿದೆ.

ಒರಿಸ್ಸಾ ಲೋಕಸಭೆಗೆ ಒಟ್ಟು 21 ಜನ ಸಂಸದರನ್ನು ಕಳಿಸುತ್ತದೆ. 2004 ರ ಚುನಾವಣೆಯಲ್ಲಿ ಬಿಜೆಪಿ, ಬಿಜೆಡಿ ಮೈತ್ರಿಯ 21 ರಲ್ಲಿ 18 ಸ್ಥಾನಗಳನ್ನು ಗೆದ್ದಿತ್ತು. 9 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ 7 ಸ್ಥಾನವನ್ನು ಬಿಜೆಡಿಯು 12 ಸ್ಥಾನಗಳಲ್ಲಿ ಸ್ಪರ್ಧಿಸಿ 11 ಸ್ಥಾನಗಳನ್ನು ಗೆದ್ದಿತ್ತು. ಈಗ ಸ್ವತಂತ್ರವಾಗಿ ಸ್ಪರ್ಧಿಸಬೇಕಿರುವ ಬಿಜೆಪಿಯು 7 ಸ್ಥಾನವನ್ನು ಮರಳಿ ಗೆದ್ದರೂ (ಅದು ಸಾಧ್ಯವಿಲ್ಲ) ಎನ್‌ಡಿಎಗೆ 11 ಸ್ಥಾನ ನಷ್ಟ ಕಟ್ಟಿಟ್ಟ ಬುತ್ತಿ.

ಬಿಜೆಪಿಗೆ ಹಿನ್ನಡೆ

ಇತ್ತೀಚೆಗೆ ಒರಿಸ್ಸಾ ರಾಜ್ಯದಲ್ಲಿ ಕಟಕ್ ಮತ್ತು ಭುವನೇಶ್ವರಗಳಲ್ಲಿ ನಡೆದ ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ ಬಿಜೆಪಿ ಸ್ವತಂತ್ರವಾಗಿ ಸ್ಪರ್ಧಿಸಿ ಹೀನಾಯವಾಗಿ ಸೋತಿತ್ತು. ಈಗಿನ ಪರಿಸ್ಥಿತಿಯನ್ನು ನೋಡಿದರೆ ಬಿಜೆಪಿ ಮತ್ತು ಎನ್‌ಡಿಎಗೆ ಬಹುಶ: ಇಲ್ಲಿ ಶೂನ್ಯ ಸಂಪಾದನೆ ಎನ್ನುವುದು ಖಾತ್ರಿಯಾಗುತ್ತಿದೆ.

ವಿಧಾನ ಸಭೆಯ ಪ್ರಶ್ನೆ

ಒರಿಸ್ಸಾದಲ್ಲಿ ಲೋಕಸಭಾ ಚುನಾವಣೆಯ ಜೊತೆಗೆ ವಿಧಾನಸಭೆಗೂ ಚುನಾವಣೆ ನಡೆಯುತ್ತಿದೆ. ಕಳೆದ ಚುನಾವಣೆಯಲ್ಲಿ 147 ಸ್ಥಾನಗಳ ವಿಧಾನಸಭೆಯಲ್ಲಿ ಬಿಜೆಡಿ 84 ರಲ್ಲಿ ಸ್ಪರ್ಧಿಸಿ 61 ಸ್ಥಾನಗಳನ್ನು ಗೆದ್ದಿತ್ತು. ಬಿಜೆಪಿಗೆ 32 ಸ್ಥಾನಗಳು ಸಿಕ್ಕಿದ್ದವು. ಕಳೆದ ಚುನಾವಣೆಯ ಅವಧಿಯ ನಂತರ ರಾಜ್ಯದಲ್ಲಿ ಬಿಜೆಪಿಯ ಜನಪ್ರಿಯತೆ ಸಾಕಷ್ಟು ಕುಸಿದಿದೆ ಎಂಬುದು ಸ್ಪಷ್ಟವಾಗಿದೆ.

ಕೋಮುವಾದಿ ಕರಾಳ ಮುಖ :

ಕಂದಮಾಲ್ ಕೋಮುಗಲಭೆಗಳು ಕ್ರಿಶ್ಚಿಯನ್ನರ ಮೇಲಿನ ಅಮಾನುಷ ದಾಳಿ, ಅತ್ಯಾಚಾರಗಳ ನಂತರ ಬಿಜೆಪಿಯ ನಿಜವಾದ ಮುಖದ ಪರಿಚಯ ಜನತೆ ಆಗಿದೆ. ಕ್ರಿಶ್ಚಿಯನ್ನರಿಗೆ ಸೇರಿದ 2855 ಮನೆಗಳನ್ನು ಸುಡಲಾಗಿದೆ. 272 ಗ್ರಾಮಗಳಲ್ಲಿ ಚರ್ಚ್‌ಗಳ ಮೇಲೆ ಧಾಳಿ ನಡೆದಿದೆ.

ಬಿರುಕು ಯಾಕೆ

ಬಿಜೆಡಿಯು ಬಿಜೆಪಿ ಸಂಘ ತೊರೆಯಲು ಕಾರಣವಾದರೇನು? ಕೇವಲ ಸ್ಥಾನ ಹಂಚಿಕೆ ಎಂಬಂತೆ ಮೊದಲು ವರದಿಯಾಯಿತು. ವಾಸ್ತವ ಹಾಗಿಲ್ಲ. ನಕ್ಸಲೀಯರು ಸ್ವಾಮಿ......ನ್ನು ಕೊಂದದ್ದನ್ನೇ ನೆಪವಾಗಿಟ್ಟುಕೊಂಡು ಬಜರಂಗದಳ, ವಿಶ್ವ ಹಿಂದೂ ಪರಿಷತ್‌ಗಳು ಅಲ್ಪಸಂಖ್ಯಾತರ ಮೇಲೆ ಹೀನಾಯ ಹಿಂಸೆ ಹೇರಿದಾಗಲೇ ಬಿಜೆಡಿ, ಬಿಜೆಪಿ ಮೈತ್ರಿ ಅಲುಗಾಡಿತ್ತು. ಸೀಟು ಹಂಚಿಕೆ ಹಂತದಲ್ಲಿ ಅದು ಖಚಿತ ರೂಪ ಪಡೆದಿದೆ ಅಷ್ಟೆ. ಬಿಜೆಪಿ ತನಗೆ ಹಿಂದಿನಂತೆ 9 ಲೋಕಸಭಾ ಸ್ಥಾನ, 63 ವಿಧಾನಸಭಾ ಸ್ಥಾನ ಕೇಳಿದೆ. ಬಿಜೆಡಿ ಅದನ್ನು ಕೊಡಲು ಒಪ್ಪದೇ ಮೈತ್ರಿ ಮುರಿದುಬಿದ್ದಿದೆ.

ಬಿಜೆಪಿ ಬೆಳವಣಿಗೆ

1990 ರಲ್ಲಿ ರಾಜ್ಯದಲ್ಲಿ ಬಿಜೆಪಿಯ ಶಾಸಕರು ಇಬ್ಬರು ಮಾತ್ರ. 1995 ರಲ್ಲಿ 9 ಜನ. 90ರ ದಶಕದ ಕೊನೆಯ ಭಾಗದಲ್ಲಿ ಕಾಂಗ್ರೆಸ್ ವಿರೋಧಿ ರಾಜಕೀಯದ ನೆಪದಲ್ಲಿ ಬಿಜೆಪಿ ಕೋಮುವಾದಿ ವಿಷಪ್ರಚಾರ ನಡೆಸಿತು. ಆಗಿನ ಜನತಾದಳದ ನಿಷ್ಕ್ರಿಯತೆಯಿಂದ ಬಿಜೆಪಿ ಅಲ್ಪ ಬಲ ಪಡೆದುಕೊಂಡಿತು. ಬಿಜೆಡಿಯೊಂದಿಗೆ 1998 ರಲ್ಲಿ ಮೈತ್ರಿ ಆದ ಮೇಲೆ ತನ್ನ ಸಾಮರ್ಥ್ಯಕ್ಕಿಂತ ಹೆಚ್ಚು ಅವಕಾಶ ಪಡೆದು 32 ಸ್ಥಾನ ಗಳಿಸಿತು. ಈಗ ರಾಜ್ಯದಲ್ಲಿ ಬಿಜೆಪಿಯು ತೀವ್ರ ಹಿನ್ನಡೆ ಕಂಡಿದೆ. ರಾಜಸ್ಥಾನ, ಗುಜರಾತ್ ಮುಂತಾದ ಕಡೆಗಳಲ್ಲಿ ನಡೆದಂತೆ ಜನತಾ ದಳವನ್ನು ಒರಿಸ್ಸಾದಲ್ಲಿಯೂ ನುಂಗಿ ಹಾಕುವ ಯೋಜನೆ ಬಿಜೆಪಿಗೆ ಇತ್ತು. ಆದರೆ ಅದು ಸಾಧ್ಯವಾಗದೆ ಬಿಜೆಪಿ ಜನಬೆಂಬಲವೇ ಕುಸಿಯುತ್ತಿದೆ.

ವಿಶ್ವಾಸ ಮತ

ಬಿಜೆಪಿಯು ಬಿಜೆಡಿ ತನ್ನೊಂದಿಗಿನ ಮೈತ್ರಿಯನ್ನು ಕಡಿದುಕೊಳ್ಳುತ್ತಿದ್ದಂತೆ ತಕ್ಷಣ ರಾಜ್ಯ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆದು ರಾತ್ರಿ 11.15 ಕ್ಕೆ ರಾಜ್ಯಪಾಲರಿಗೆ ಪತ್ರ ನೀಡಿತು. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಸಹ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಒತ್ತಾಯಿಸಿದರು.

ಮುಖ್ಯಮಂತ್ರಿ ಬಿಜು ಪಟ್ನಾಯಕ್, ಎನ್.ಡಿ.ಎ ಯೊಂದಿಗಿನ ಮೈತ್ರಿ ಮುರಿದುಕೊಂಡ ಕೂಡಲೇ ಸಂಪರ್ಕಿಸಿದ್ದು ಸಿಪಿಐ(ಎಂ) ಮುಖಂಡರಾದ ಪ್ರಕಾಶ್ ಕಾರಟ್, ಸೀತಾರಾಮ ಯೆಚೂರಿಯವರನ್ನು. ಸಿಪಿಐ(ಎಂ) 1, ಸಿಪಿಐ ಶಾಸಕರನ್ನು ಹೊಂದಿದ್ದು ಅವು ಸರ್ಕಾರಕ್ಕೆ ಬೆಂ ನೀಡಿದವು. ಇದಲ್ಲದೇ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆ.ಎಂ.ಎಂ) 4, ಎನ್‌ಸಿಪಿ ಶಾಸಕರನ್ನು ಹೊಂದಿದ್ದು ಅವರೂ ಸಹ ಬೆಂಬಲ ನೀಡಿದರು. ಮಾರ್ಚ್ 11 ರಂದು ಗದ್ದಲದ ನಡುವೆಯೇ ಧ್ವನಿ ಮತದಿಂದ ಸರ್ಕಾರ ಬಹುಮತ ಗಳಿಸಿತು. ಚುನಾವಣೆ ಘೋಷಣೆಯಾದ ಮೇಲೆ ವಿಧಾನಸಭಾ ಅಧಿವೇಶನ ನಡೆಯುವುದು ಅಕ್ರಮ ಎಂದು ಕಾಂಗ್ರೆಸ್, ಬಿಜೆಪಿಗಳು ಗದ್ದಲ ಎಬ್ಬಿಸಿದವು. ಅವು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಆಗ್ರಹಿಸುತ್ತಿವೆ. ಈ ವಿಚಾರದಲ್ಲಿ ಬಿಜೆಪಿಯೊಂದಿಗೆ ಕೈಜೋಡಿಸಿರುವ ಕಾಂಗ್ರೆಸ್‌ನ ಕ್ರಮವನ್ನು ಸಿಪಿಐ(ಎಂ) ಟೀಕಿಸಿದೆ. ವಿಧಾನಸಭೆಯಲ್ಲಿ ಧ್ವನಿ ಮತದಿಂದ ಬಹುಮತ ಸಾಬೀತಾಗಿರುವುದನ್ನು ಮಾನ್ಯ ಮಾಡಬೇಕೆಂದೂ ಒತ್ತಾಯಿಸಿದೆ ಹಾಗೂ ರಾಷ್ಟ್ರಪತಿ ಆಳ್ವಿಕೆ ಹೇರಿ ಪಕ್ಷಪಾತ ಮಾಡುವುದರ ವಿರುದ್ಧ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ರಾಜ್ಯಪಾಲರು ವಿಧಾನಸಭೆಯ ಸ್ಪೀಕರ್ ನಿರ್ಣಯ ಒಪ್ಪದೆ ಮತ್ತೊಮ್ಮೆ ವಿಶ್ವಾಸಮತ ಎದುರಿಸುವ ಸನ್ನಿವೇಶ ಬರಬಹುದು ಎನ್ನಲಾಗಿದೆ.

ಉದುರುತ್ತಿರುವ ಬಿಜೆಪಿ

ದೇಶದಲ್ಲೂ, ರಾಜ್ಯದಲ್ಲೂ ಬಿಜೆಪಿ ಮುಳುಗುತ್ತಿರುವ ಹಡಗು ಎಂದು ಗೊತ್ತಾದ ಮೇಲೆ ಬಿಜೆಪಿ ತೊರೆಯುವವರ ಸಂಖ್ಯೆ ಹೆಚ್ಚಾಗಿದೆ. ಒಟ್ಟು 5 ಬಿಜೆಪಿ ಶಾಸಕರು ಈಗಾಗಲೇ ಬಿಜೆಪಿ ಬಿಟ್ಟು ಬಿಜೆಡಿ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಜನ ಬಿಜೆಡಿ ಸೇರಿದ್ದಾರೆ.

ಮೂರನೇ ರಂಗಕ್ಕೆ

ಬಿಜು ಪಟ್ನಾಯಕ್ ಅವರು ತಮ್ಮ ಮುಂದಿನ ನಡೆಯ ಬಗೆಗೆ ಸೀತಾರಾಮ ಯೆಚೂರಿಯವರನ್ನು ಕರೆಸಿಕೊಂಡು ಈಗಾಗಲೇ ಮಾತನಾಡಿದ್ದಾರೆ. ಕೇವ ತಾಂತ್ರಿಕ ಪ್ರಶ್ನೆಗಳ ಆಧಾರದಲ್ಲಿ ಅವರು ಮೂರನೇ ರಂಗಕ್ಕೆ ಸೇರುವ ಘೋಷಣೆ ವಿಳಂಬವಾದಂತೆ ಕಾಣುತ್ತಿದೆ.

ಜನರ ಸಂಕಟಗಳ ಪರಿಹಾರಕ್ಕೊಂದು .....

ಪುಟ 9 ರಿಂದ

ಜನರ ಪರ್ಯಾಯ ಬೇಕು:


ಡಾ: ಮೈತ್ರೇಯನ್,
ಎಐಎಡಿಎಂಕೆ ಮುಖಂಡರು

ಯುಪಿಎ ಸರ್ಕಾರದ ಆರ್ಥಿಕ ಬಿಕ್ಕಟ್ಟಿಗೆ ಸರಿಯಾಗಿ ಸ್ಪಂದಿಸಲಿಲ್ಲ. ತಪ್ಪ ವಿದೇಶಾಂಗ ನೀತಿ ಅನುಸರಿಸಿತು. ಭಯೋತ್ಪಾದನೆಯ ಪ್ರಶ್ನೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ. ಗೃಹಮಂತ್ರಿ ಅಸಾಮರ್ಥ್ಯದಿಂದ ರಾಜೀನಾಮೆ ನೀಡಿದರು. ಒಂದೂವರೆ ತಿಂಗಳು ದೇಶಕ್ಕೆ ಪೂರ್ಣಾವಧಿ ಹಣಕಾಸು ಮಂತ್ರಿಯೇ ಇರಲಿಲ್ಲ. ಇಂತಹ ನೀತಿಗಳಿಗೆ ಜನರ ಪರ್ಯಾಯ ಮೂಡಿ ಬರಬೇಕು ಎಂದೂ ಎಐಎಡಿಎಂಕೆ ಪಕ್ಷದ ಮುಖಂಡರಾದ ಹಾಗೂ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾರ ಪ್ರತಿನಿಧಿ ರಾಜ್ಯ ಸಭಾ ಸದಸ್ಯ ಡಾ:ಮೈತ್ರೇಯನ್ ಹೇಳಿದರು.

ಕಾಂಗ್ರೆಸ್‌ನದು ಸರ್ವಾಧಿಕಾರಿ ಧೋರಣೆ

- ತಾರಕರಾಮರಾವ್

ಕಾಂಗ್ರೆಸ್ ಪಕ್ಷದ್ದು ಸರ್ವಾಧಿಕಾರಿ ಧೋರಣೆ. ಅವಕಾಶವಾದಿತನದ ನೀತಿ, ಮತ್ತು ಪಾಳೇಗಾರಿ ಪ್ರವೃತ್ತಿ ದ್ವಂದ್ವ ನೀತಿ. ಭಾರತದ ವೈವಿಧ್ಯತೆಯಲ್ಲಿನ ಏಕತೆಯನ್ನು ರಕ್ಷಿಸಲು ಜಾತ್ಯಾತೀತ ಚಿಂತನೆಯ ಪಕ್ಷಗಳು ಮೂರನೇ ರಂಗದ ಮೂಲಕ ಒಂದುಗೂಡಿವೆ. ಆಂಧ್ರದಲ್ಲಿ ತೆಲುಗು ದೇಶಂ, ಎಡಪಕ್ಷಗಳು, ಟಿ.ಆರ್.ಎಸ್.ಗಳ 'ಮಹಾಕೂಟಮಿ'ಯೇ ಅಧಿಕಾರಕ್ಕೆ ಬರಲಿದೆ ಎಂದೂ ಟಿಆರ್‌ಎಸ್ ಪಕ್ಷದ ಮುಖಂಡರು ಹಾಗೂ ಟಿಆರ್‌ಪಕ್ಷದ ಅಧ್ಯಕ್ಷ ಚಂದ್ರಶೇಖರರಾವ್ ಅವರ ಪುತ್ರ ತಾರಕರಾಮರಾವ್ ಹೇಳಿದರು.


ಚಾರ್ಲ್ಸ್ ಡಾರ್ವಿನ್

ದೈವ ಸೃಷ್ಟಿವಾದದ ಬುಡ ಅಲುಗಾಡಿಸಿದ ವಿಕಾಸವಾದ

ಗೆಲಿಲಿಯೋರ 'ಆಕಾಶವೀಕ್ಷಣೆ'ಗೆ 400 ವರ್ಷ, ಡಾರ್ವಿನ್ ಹುಟ್ಟಿದ ಇನ್ನೂರನೇ ವರ್ಷ, ವಿಕಾಸವಾದ ಮಹತ್ವದ ಗ್ರಂಥ, 'ಒರಿಜಿನ್ ಆಫ್ ಸ್ಪೀಸೀಸ್' ಪ್ರಕಟವಾಗಿ ನೂರವತ್ತು ವರ್ಷ ಇವೆಲ್ಲಾ ಆಚರಣೆಗಳೂ ಒಂದೇ ವರ್ಷ ಬಂದರೆ ಯಾರಿಗೆ ತಾನೇ ಸಂತೋಷವಾಗುವುದಿಲ್ಲ. ಇದಾವುದನ್ನೂ ಗಮನಿಸದೇ ತಮ್ಮ ಅಜ್ಞಾನ, ಮೌಢ್ಯ, ಕಂದಾಚಾರಗಳನ್ನು ಪ್ರಸಾರ ಮಾಡುತ್ತಿರುವ ಬಹುತೇಕ ದೃಶ್ಯ ಮಾಧ್ಯಮಗಳು ಮೈಮರೆತಿರುವಾಗ ಜನರ ನಡುವೆ ಈ ಆಚರಣೆಯನ್ನು ವ್ಯಾಪಕವಾಗಿ ನಡೆಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಒಂದು ಲೇಖನ

■ ಅರ್ಜುನ್

ಕನ್ನಡಕ್ಕೆ: ಜ್ರಿ.ವಿಸುತ

ಪ್ರಸ್ತುತ ವರ್ಷವಾದ 2009ನೇಇಸವಿಯನ್ನು 'ಅಂತರರಾಷ್ಟ್ರೀಯ ಖಗೋಳ ವರ್ಷ' ಎಂದು ತೀರ್ಮಾನಿಸಲಾಗಿದೆ. ಗೆಲಿಲಿಯೋ ಗೆಲಿಲಿ ತಾನೇ ತಯಾರಿಸಿದ ದೂರದರ್ಶಕದ ಮೂಲಕ ಆಕಾಶವನ್ನು ವೀಕ್ಷಿಸಿ 400 ವರ್ಷಗಳಾದ ಹಿನ್ನೆಲೆಯಲ್ಲಿ ಈ ಆಚರಣೆಯನ್ನು ಮಾಡಲಾಗುತ್ತಿದೆ. ಈ ವರ್ಷಕ್ಕಿರುವ ಮತ್ತೊಂದು ಮಹತ್ವವೆಂದರೆ ಇದು ಚಾರ್ಲ್ಸ್ ಡಾರ್ವಿನ್ನರ ದ್ವಿಶತಮಾನೋತ್ಸವ ಹಾಗು ಅವರ ಪುಸಕ್ತವಾದ 'ಆರಿಜಿನ್ ಆಫ್ ಸ್ಪೀಸಿಸ್'ಗೆ ನೂರೈವತ್ತು ವರ್ಷದ ಆಚರಣೆ. ಈ ಎರಡೂ ಘಟನೆಗಳೂ ಕ್ರಾಂತಿಕಾರಿಯಾದವುಗಳಾದರೂ ಇವೆರಡರ ನಡುವಿನ ಅಂತರ ಇನ್ನೂರೈವತ್ತು ವರ್ಷ. ಕೊಪರ್ನಿಕಸ್ ಖಗೋಳ ವಿಜ್ಞಾನದಲ್ಲಿ ಮಾಡಿದ ತನ್ನ ಸಂಶೋಧನೆಗಳ ಫಲವಾಗಿ ನಿರ್ಮಾಣವಾದ ವೇದಿಕೆಯ ಮೇಲೆ ಡಾರ್ವಿನ್ ನಿಂತನೆಂದೇ ಹೇಳಬಹುದು. ಆದರೆ ಜೀವ ವಿಜ್ಞಾನವು ಅದರ ಫಲವನ್ನು ಪಡೆಯಲು ಬೇಕಾದ ಪ್ರಬುದ್ಧತೆ ಸಾಧಿಸಲು ಹಲವು ವರ್ಷಗಳೇಬೇಕಾಯಿತು.


ಸಂಪ್ರದಾಯ ಶರಣತೆಯ ಹಿಡಿತ

ಡಾರ್ವಿನ್ ಕ್ರಾಂತಿ ಘಟಿಸಲು ಅಷ್ಟು ದೀರ್ಘಕಾಲ ಬೇಕಾಯಿತೇ? ಭೌತವಿಜ್ಞಾನದಲ್ಲಿ ಗೆಲಿಲಿಯೋ ನಂತರ ಕಿತ್ತೆಸೆಯಲಾದ ಸಂಪ್ರದಾಯ ಶರಣತೆಯ ಹಿಡಿತವು ಜೀವ ವಿಜ್ಞಾನದಲ್ಲಿ ತನ್ನ ಹಿಡಿತವನ್ನು ಸಡಿಲಗೊಳಿಸಲಿಲ್ಲ.

ಇದಕ್ಕಿಂತ ಹೆಚ್ಚಾಗಿ ಜೀವಶಾಸ್ತ್ರವ ಜೀವದ ಕುರಿತ ನಮ್ಮ ಅರ್ಥಗ್ರಹಿಕೆಗೆ ಸಂಬಂಧಪಟ್ಟಿದ್ದಾಗಿದ್ದು ಈ ಬಗ್ಗೆ ನಡೆದ ಸಂಶೋಧನೆಗಳನ್ನು ಜನ ಸುಲಭವಾಗಿ ನಂಬುತ್ತಿರಲಿಲ್ಲ. ವೀಕ್ಷಣೆ, ಪ್ರಯೋಗದ ಮೂಲಕ ತೀರ್ಮಾನಕ್ಕೆ ಬರುವ ವೈಜ್ಞಾನಿಕ ವಿಧಾನಗಳನ್ನು ಗೆಲಿಲಿಯೋ ನಮ್ಮ ಮುಂದಿಟ್ಟಿದ್ದಾರೆ.

ಗೆಲಿಲಿಯೋನ ನಂತರ ಈ ವಿಧಾನವನ್ನು ಜೀವಶಾಸ್ತ್ರವೂ ಒಳಗೊಂಡಂತೆ ಎಲ್ಲ ಕ್ಷೇತ್ರದಲ್ಲಿಯೂ ಅಳವಡಿಸಿಕೊಳ್ಳಲಾಗಿದೆ. ಜೀವಶಾಸ್ತ್ರ ಕ್ಷೇತ್ರದಲ್ಲಿ ಸಂಭವಿಸಿದ ದೊಡ್ಡ ಆವಿಷ್ಕಾರವೆಂದರೆ ಜೀವಿಗಳಲ್ಲಿ ಆಗುವ ರಕ್ತ ಪರಿಚಲನೆಯ ಬಗ್ಗೆ 1628ರಲ್ಲಿ ಬ್ರಿಟಿಷ್ ಭೌತಶಾಸ್ತ್ರಜ್ಞ ವಿಲಿಯಂ ಹಾರ್ವೆ ಮಂಡಿಸಿದ ವಿಷಯ. ಮಧ್ಯಯುಗದಲ್ಲಿ ಲಿಯೋನಾರ್ಡೋಡವಿಂಚಿಯು ಶರೀರ ರಚನಾ ಶಾಸ್ತ್ರದ ಬಗ್ಗೆ ಮಾಡಿದ ಅಧ್ಯಯನ ಬಿಟ್ಟರೆ ಜೀವಶಾಸ್ತ್ರದ ಕ್ಷೇತ್ರ ಅವನತಿಯತ್ತ ಸಾಗಿತೆಂದೆ ಹೇಳಬಹುದು.

ಚಾರ್ಲ್ಸ್ ಡಾರ್ವಿನ್ ಬೆಳಕಿಗೆ ಬರುವ ಕಾಲಕ್ಕೆ ವಿಕಾಸವಾದದ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿರಲಿಲ್ಲ. ಕೆಲವು ಮೂಲಭೂತ ಪರಿಕಲ್ಪನೆಗಳ ಬಗ್ಗೆ ಮಾತ್ರ ವಿಚಾರಗಳು ಹೊರಬಿದ್ದಿದ್ದವು. ಅದು ಕೈಗಾರಿಕಾ ಕ್ರಾಂತಿ ಮತ್ತು ವಸಾಹತುಗಳ ವಿಸ್ತರಣೆಯ ಕಾಲವಾಗಿತ್ತು. ಈ ಪ್ರಕ್ರಿಯೆಯಲ್ಲಿ ಕೆಲವು ಶ್ರೇಷ್ಠ ನಿಸರ್ಗವಾದಿಗಳು ಹುಟ್ಟಿಕೊಂಡರು. ಅವರು ಭೂಗೋಳದ ಮೇಲಿನ ಪ್ರಾಣಿ, ಸಸ್ಯ ಮತ್ತು ಖನಿಜಗಳನ್ನು ಅಧ್ಯಯನ ಮಾಡಿ ಅವುಗಳ ವರ್ಗೀಕರಣದ ಕೆಲಸವನ್ನು ಕೈಗೆತ್ತಿಕೊಂಡರು. ಭೂಮಿ ಹೇಗೆ ವಿಕಾಸಹೊಂದಿತು ಎಂಬುದು ಆಗ ಹೆಚ್ಚಾಗಿ ಚರ್ಚೆಗೊಳಗಾಗಿದ್ದ ಪ್ರಶ್ನೆಯಾಗಿತ್ತು. ಇದರ ಜೊತೆಯಲ್ಲಿಯೇ ಬಂದ ಪ್ರಶ್ನೆಯೆಂದರೆ ಪ್ರಕೃತಿಯ ವಿಕೋಪ ಮತ್ತು ಜೀವ ಸಂಕುಲದ ಉಳಿವು ಹಾಗೂ 'ಪ್ರಕೃತಿಯೇ ಸ್ವತಃ ಮಹಾಪ್ರಳಯಕಾಲದಲ್ಲಿ ಪ್ರಾಣಿ, ಸಸ್ಯ ಸಂಕುಲವನ್ನು (ನೋವಾನ ಹಡಗಿನ ಮೂಲಕ) ಹೇಗೆ ಕಾಪಾಡುತ್ತದೆ' ಎಂಬ ಪ್ರಶ್ನೆಯಾಗಿತ್ತು. ಇಂತಹ ವಿಷಯಗಳ ಬಗೆಗೆ ಚಾರ್ಲ್ಸ್ ಡಾರ್ವಿನ್ ಎಳೆಯ ವಯಸ್ಸಿನಲ್ಲಿಯೇ ಅವನ ಅಜ್ಜ ಎರಾಸ್‌ಮಸ್ ಡಾರ್ವಿನ್ ಹೇಳುವುದನ್ನು ಕೇಳಿದ್ದ.




ಎರಾಸ್‌ಮಸ್ ಡಾರ್ವಿನ್ ಅಂದಿನ ಕಾಲದ ಗಣ್ಯರ ಒಂದು ವಿಜ್ಞಾನ ಸಂಸ್ಥೆಯಾಗಿದ್ದ 'ಲೂನಾರ್ ಸೊಸೈಟಿ'ಗೆ ಸದಸ್ಯನಾಗಿದ್ದನು. ಎರಾಸ್‌ಮಸ್ ಡಾರ್ವಿನ್ ಸಹ ಒಬ್ಬ ಜೀವಶಾಸ್ತ್ರ ಕ್ಷೇತ್ರದ ವಿಕಾಸವಾದಿಯಾಗಿದ್ದು 1790 ರ ಆದಿ ಭಾಗದಲ್ಲೇ ಆ ಬಗ್ಗೆ ಪ್ರಸ್ತಾಪಿಸಿದ್ದ. ಫ್ರೆಂಚಿನ ನಿಸರ್ಗವಾದಿಗಳಾದ ಬಫನ್, ಕುಯ್‌ರರ್ ಮತ್ತು ಲೆಮಾರ್ಕ್‌ರಿಂದ ಮಹತ್ತರವಾದ ವಿಚಾರಗಳು ಹೊರಬಂದವು. ಲೆಮಾರ್ಕ್ 1809 ರಲ್ಲಿ ತನ್ನ ಸಿದ್ಧಾಂತವನ್ನು ಮಂಡಿಸಿದ. ಜೀವಿಗಳಲ್ಲಿನ ಅಂಗಗಳು ಅವುಗಳ ಬಳಕೆಗೆ ಅನುಗುಣವಾಗಿ ಬದಲಾವಣೆ ಹೊಂದುತ್ತವೆ. ಇದಕ್ಕಾಗಿಯೇ ಬೇರೆ ಬೇರೆ ಜೀವ ಸಂಕುಲಗಳಲ್ಲಿ



ಬೇರೆ ಬೇರೆ ಗುಣಲಕ್ಷಣಗಳು ಬೆಳೆಯುತ್ತವೆ ಎಂಬುದೇ ಅವನ ವಾದ. ಉದಾ: ಜಿರಾಫೆ, ಒಂಟೆ, ಇತ್ಯಾದಿ ಪ್ರಾಣಿಗಳ ಗುಣಲಕ್ಷಣಗಳು.

ಸಿದ್ಧಾಂತಕ್ಕೆ ಪ್ರಯೋಗಿಕ ದೃಢತೆ

ಡಾರ್ವಿನ್‌ಗೆ ಈ ಸಿದ್ದಾಂತಗಳ ಅರಿವಿತ್ತು. ಆದರೆ ಅವನ ದೊಡ್ಡ ಸಾಧನೆಯೆಂದರೆ, ವಿವರವಾದ ಮತ್ತು ವ್ಯವಸ್ಥಿತವಾದ ಪ್ರಯೋಗ ಮತ್ತು ಪರಿಶೀಲನೆಗಳ ಮೂಲಕ ವಿಕಾಸವಾದ ಸಿದ್ದಾಂತವನ್ನು ಅಭಿವೃದ್ಧಿಪಡಿಸಿದ್ದು, ಅಂದರೆ ಡಾರ್ವಿನ್ ಸಿದ್ದಾಂತ ಮತ್ತು ಪ್ರಯೋಗಗಳನ್ನು ಒಟ್ಟು ಗೂಡಿಸಿದ. ಚಾರ್ಲ್ಸ್ ಡಾರ್ವಿನ್ ವೈದ್ಯ ವಿಜ್ಞಾನ ಮತ್ತು ಮತಧರ್ಮ ಶಾಸ್ತ್ರದಲ್ಲಿ ತರಬೇತಿ ಹೊಂದಿದ್ದ. ತನ್ನ 22ನೇ ವಯಸ್ಸಿನಲ್ಲಿ ಬ್ರಿಟಿಷ್‌ನ ಸಮುದ್ರಯಾನ ಕಾರ್ಯಕ್ರಮದಲ್ಲಿ ನಿಸರ್ಗವಾದಿಯಾಗಿ ಸೇರಿಕೊಂಡ. ಬೀಗಲ್ ನೌಕೆಯಲ್ಲಿ ಕೈಗೊಂಡ ಸಮುದ್ರಯಾನದಲ್ಲಿ ಐದು ವರ್ಷಗಳ ಕಾಲವನ್ನು ಕಳೆದ. ಹೋದೆಡೆಯಲ್ಲೆಲ್ಲಾ ಅನೇಕ ಪ್ರಾಣಿ ಮತ್ತು ಸಸ್ಯಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ. ಅವನ ತೀವ್ರಗತಿಯ ಅಧ್ಯಯನ ನಡೆದಿದ್ದು ಪೆಸಿಫಿಕ್ ಮಹಾಸಾಗರದ ಗ್ಯಾಲಪಗೊಸ್ ದ್ವೀಪದಲ್ಲಿ. ಈಗಾಗಲೇ ನಿರ್ನಾಮವಾದ ಅನೇಕ ಜೀವ ಸಂಕುಲಗಳ ಪಳೆಯುಳಿಕೆಗಳು ಅಲ್ಲಿ ಜೀವಿಸುತ್ತಿರುವ ಜೀವ ಸಂಕುಲಗಳನ್ನು ಬಹಳಷ್ಟು ಹೋಲುತ್ತಿದ್ದವು ಎಂಬುದನ್ನು ಗಮನಿಸಿದ. ಈ ಜೀವಿಗಳಿಗೆ ಹಾಗೂ ದಕ್ಷಿಣ ಅಮೇರಿಕಾದ ಜೀವಿಗಳಿಗೂ ಹೋಲಿಕೆಯಿರುವುದನ್ನು ಗಮನಿಸಿದ. ಇಂಗ್ಲೆಂಡ್‌ಗೆ ವಾಪಸ್ಸಾದ ಮೇಲೆ ಡಾರ್ವಿನ್ ತಾನು ಸಂಗ್ರಹಿಸಿದ ಮಾದರಿಗಳು ಮತ್ತು ದಾಖಲೆಗಳನ್ನು ಬಹಳಷ್ಟು ಕಾಳಜಿಯಿಂದ ಇಪ್ಪತ್ತು ವರ್ಷಗಳ ಕಾಲ ಅಧ್ಯಯನ ಮಾಡಿದ.


ಗೆಲಿಲಿಯೋ

ಇಷ್ಟೆಲ್ಲಾ ಅಧ್ಯಯನಗಳ ನಂತರ ಡಾರ್ವಿನ್‌ನ 'ಆರಿಜಿನ್ ಆಫ್ ಸ್ಪೀಷೀಸ್' ಪುಸ್ತಕ ಹೊರಬಂತು. ಅದೇ ಸಮಯದಲ್ಲೇ ಬ್ರಿಟಿಷ್‌ನ ನಿಸರ್ಗವಾದಿಯಾದ ಆಲ್ಫ್ರೇಡ್ ರಸೆಲ್ ವೆಲ್ಲೇಸ್ ಎಂಬುವನ ಇದೇ ದೃಷ್ಟಿಕೋನವನ್ನು ಹೊಂದಿದ ಪುಸ್ತಕವೂ ಹೊರಬಂತು. ಆದರೆ ಡಾರ್ವಿನ್ನನ ಪುಸ್ತಕಕ್ಕೆ ಸಾರ್ವಜನಿಕರಿಂದ ಹೆಚ್ಚಿನ ಮನ್ನಣೆ ದೊರೆಯಿತು. ಡಾರ್ವಿನ್ನನ ಸಿದ್ದಾಂತವು ಚರ್ಚ್‌ನಿಂದ ಆಕ್ರಮಣಕ್ಕೊಳಪಟ್ಟಾಗ ವೆಲ್ಲೇಸ್, ಥಾಮಸ್ ಹಕ್ಸಲೇಯೊಂದಿಗೆ ಸೇರಿ ಡಾರ್ವಿನ್ನನ ಸಿದ್ದಾಂತವನ್ನು ಬೆಂಬಲಿಸಿದ.

ಡಾರ್ವಿನ್ ಪ್ರತಿಪಾದಿಸಿದ್ದೇನು?

ಜೀವ ಸಂಕುಲಗಳು ವಿಕಾಸವಾಗುತ್ತಿದ್ದಂತೆ, ಪೂರ್ವಜರಿಗೆ ಹೋಲಿಸಿದಾಗ ಕೆಲವು ಲಕ್ಷಣಗಳನ್ನು ಉಳಿಸಿಕೊಳ್ಳುತ್ತವೆ ಮತ್ತು ಕೆಲವೊಂದು ಲಕ್ಷಣಗಳು ಬದಲಾವಣೆಯಾಗುತ್ತವೆ. ಬೇರೆ ಬೇರೆ ಸಸ್ಯಗಳ ಬೀಜಗಳು ಹಾಗೂ ಸಸ್ಯಗಳು ಕೆಲವು ನಿರ್ದಿಷ್ಟ ಗುಣಲಕ್ಷಣಗಳನ್ನು ಉಳಿಸಿಕೊಳ್ಳುತ್ತವೆ ಹಾಗೂ ಅವುಗಳ ಮಿಶ್ರತಳಿ ಮಾಡುವುದರಿಂದ ಅವುಗಳನ್ನು ಹೇಗೆ ಬದಲಾಯಿಸಬಹುದು ಎಂಬುದನ್ನು ಕೆಲವು ನುರಿತ ತೋಟಗಾರರ ಅನುಭವಗಳ ಆಧಾರದಲ್ಲಿ ಪ್ರಯೋಗ ಮಾಡಿ ಕಂಡುಕೊಂಡ. ಉಳಿವಿಗಾಗಿನ ಹೋರಾಟದಲ್ಲಿ ಉಳಿವಿಗೆ ಹೆಚ್ಚು ಸೂಕ್ತವಾದ ಮತ್ತು ಅನುಕೂಲಕರವಾದ ಲಕ್ಷಣಗಳನ್ನು ಹೊಂದಿರುವ ಜೀವ ಸಂಕುಲಗಳ ಸದಸ್ಯರು ದೀರ್ಘಕಾಲ ಬಾಳುವುದಷ್ಟೇ ಅಲ್ಲದೆ ಅವನ್ನು ಮುಂದಿನ ತಲೆಮಾರಿಗೆ ಸಾಗಿಸುತ್ತವೆ ಎಂದು ಪ್ರತಿಪಾದಿಸಿದ. ಉಳಿವಿಗಾಗಿನ ಈ ಹೋರಾಟ ಅನೇಕ ತಲೆಮಾರುಗಳಿಂದ ನಡೆದುಕೊಂಡು ಬಂದಿದ್ದು ಹಲವು ವರ್ಷಗಳ ನಂತರದಲ್ಲಿ ಹೊಸ ಲಕ್ಷಣಗಳು ಅಭಿವೃದ್ಧಿಯಾಗಿ ಭೂಮಿಯ ಮೇಲೆ ಹೊಸ ಜೀವಸಂಕುಲಗಳು ಉದಯಿಸುತ್ತವೆ. ಅದೇ ರೀತಿ ಉಳಿವಿಗೆ ಹೆಚ್ಚು ಸೂಕ್ತವಲ್ಲದ ಲಕ್ಷಣಗಳನ್ನು ಹೊಂದಿರುವ ಸಂಕುಲಗಳು ಕಾಲಾನಂತರದಲ್ಲಿ ನಿರ್ನಾಮವಾಗುತ್ತವೆ. ಆಧುನಿಕ ಜೀವಶಾಸ್ತ್ರಜ್ಞರು ಭೂಮಿಯ ಮೇಲೆ ಎರಡು ಮಿಲಿಯನ್ ಜೀವಂತವಾದ ಜೀವ ಸಂಕುಲಗಳಿದ್ದು, ಕಳೆದ ಕೆಲವು ಮಿಲಿಯನ್ ವರ್ಷಗಳಲ್ಲಿ ಕೆಲವು ನೂರು ಜೀವ ಸಂಕುಲಗಳು ನಿರ್ನಾಮವಾಗಿವೆ, ಕೆಲವು ನೂರು ಜೀವ ಸಂಕುಲಗಳು ರೂಪುಗೊಂಡಿವೆ ಎಂದು ಅಂದಾಜಿಸಿದ್ದಾರೆ.

ಪುಟ 12ಕ್ಕೆ

......ಬುಡ ಅಲುಗಾಡಿಸಿದ ವಿಕಾಸವಾದ

ಪುಟ 9 ರಿಂದ

ಶಕ್ತಿಯನ್ನು ಬೆಳೆಸಿಕೊಂಡಿರುವುದು ಆಧುನಿಕ ವಿಜ್ಞಾನಕ್ಕೆ ತಿಳಿದ ವಿಷಯವೇ ಆಗಿದೆ. ಮೊದಲಿಗೆ ಅತ್ಯಂತ ಪರಿಣಾಮಕಾರಿಯಾಗಿದ್ದ ಮತ್ತು ಖಾಯಿಲೆ ನಿವಾರಿಸುವಲ್ಲಿ ಯಶಸ್ವಿಯಾಗಿದ್ದ ಔಷಧಿಗಳ ಪರಿಣಾಮ ನಂತರ ಕುಗ್ಗಿರುವುದನ್ನು ಗುರುತಿಸಬಹುದಾಗಿದೆ.

ಆಕ್ರಮಣ ಏಕೆ

ಗೆಲಿಲಿಯೋನ ಸಿದ್ಧಾಂತದಂತೆ, ಡಾರ್ವಿನ್‌ನ ಸಿದ್ಧಾಂತವು ಚರ್ಚ್‌ನಿಂದ ಆಕ್ರಮಣಕ್ಕೆ ಒಳಪಟ್ಟಿದ್ದೇಕೆ? ಉತ್ತರ ಹುಡುಕುವುದು ಕಷ್ಟವೇನಲ್ಲ. ಭೂಮಿ, ವಿಶ್ವ ಸಜೀವ ಮತ್ತು ನಿರ್ಜೀವ ಪ್ರಪಂಚವು ದೇವರ ಸೃಷ್ಟಿ ಇದು ದೇವರ ನಿರ್ದಿಷ್ಟ ಯೋಜನೆಯಂತೆ ರೂಪುಗೊಂಡಿದೆ ಎಂದು ನಂಬಲಾಗಿತ್ತು(ಲಾಗಿದೆ).

ಆದರೆ ಡಾರ್ವಿನ್ ಸಿದ್ಧಾಂತದಂತೆ 'ತಂದೆ ಆಡಮ್ ಮತ್ತು ತಾಯಿ ಈವ್'ರ ಮೂಲ ಗೊರಿಲ್ಲಾದಲ್ಲಿದೆ. ಸುಮಾರು 100 ಲಕ್ಷ ವರ್ಷಗಳ ಹಿಂದೆ ಗೊರಿಲ್ಲಾ ನಮ್ಮ ಪೂರ್ವಜ. ಸುಮಾರು 300 ದಶಲಕ್ಷ ವರ್ಷಗಳ ಹಿಂದೆ ಸರೀಸೃಪಗಳು ನಮ್ಮ ಪೂರ್ವಜರಾಗಿದ್ದರು. ಈ ಸಿದ್ಧಾಂತದ ಪ್ರಕಾರ ಮಾನವ ಭೂಗೋಳದ ಮೇಲೆ ಇತ್ತೀಚೆಗೆ ಸೃಷ್ಟಿಯಾಗಿದ್ದು, ಇನ್ನೂ ವಿಕಾಸ ಹೊಂದುತ್ತಲೇ ಇದ್ದಾನೆ. ಮುಂದೆಯೂ ವಿಕಾಸ ಹೊಂದುತ್ತಾನೆ. ಗೆಲಿಲಿಯೋ ಸೂರ್ಯ ಕೇಂದ್ರವಾದದ ಪ್ರತಿಪಾದನೆಯಿಂದ ಭೂಮಿಯನ್ನು ವಿಶ್ವದ ಕೇಂದ್ರದಿಂದ ದೂರ ಸರಿಸಿದಂತೆ, ಚಾರ್ಲ್ಸ್ ಡಾರ್ವಿನ್ ಮನುಷ್ಯನನ್ನು ದೈವ ಸೃಷ್ಟಿ ಎಂಬ ಶಿಖರದಿಂದ ಕೆಳಗಿಳಿಸಿದ. ಸಂಪ್ರದಾಯವಾದಿಗಳೇ ಅಲ್ಲದೆ, ಜನಾಂಗೀಯ ವಾದಿಗಳು ಡಾರ್ವಿನ್ ಸಿದ್ಧಾಂತವನ್ನು ಉಗ್ರವಾಗಿ ಖಂಡಿಸಿದರು. ಎಲ್ಲಾ ಮಾನವರಿಗೂ ಪೂರ್ವಜರು ಒಬ್ಬರೇ ಆಗಿದ್ದರೆ ಕೆಲವು ಜನ ಮಾತ್ರ ತಾವು ಉನ್ನತ ವರ್ಗ, ಉನ್ನತ ಜಾತಿ ಎಂದು ಹೇಳಿ ಕೊಳ್ಳಲು ಹೇಗೆ ಸಾಧ್ಯ? ಇದೇ ತರ್ಕವೇ ಜಾತಿ ಪದ್ಧತಿಗೂ ಅನ್ವಯಿಸುತ್ತದೆ. ಆರ್ಯದೇವತೆಗಳು ಮತ್ತು ವಾನರ ಸೇನೆ ಇವರಿಬ್ಬರ ಪೂರ್ವಜರೂ ಒಂದೇ ಆಗಿದ್ದರೆ ಆರ್ಯದೇವತೆಗಳಿಗೆ ವಾನರ ಸೇನೆಯ ದಾಸ್ಯ ಮನೋವೃತ್ತಿಯನ್ನು ಹೇಗೆ ಸಮರ್ಥಿಸಿ ಕೊಳ್ಳಲು ಸಾಧ್ಯ?

ಜೀವಶಾಸ್ತ್ರದ ವಿಮೋಚನೆ

ಡಾರ್ವಿನ್‌ನನ್ನು ಚರ್ಚ್ ದೋಷಾರೋಪಣೆಗೆ ಗುರಿಪಡಿಸಿದಾಗ ಅನೇಕ ಜೀವಶಾಸ್ತ್ರಜ್ಞರು ಡಾರ್ವಿನ್ ಸಿದ್ಧಾಂತದ ಪುರಾವೆಗಳ ಹಿನ್ನೆಲೆಯಲ್ಲಿ ಅವನನ್ನು ಬೆಂಬಲಿಸಿದರು. ಡಾರ್ವಿನ್ ಜೀವಶಾಸ್ತ್ರವನ್ನು ಒಂದೇ ಹೊಡೆತದಿಂದ ವಿಮುಕ್ತಿಗೊಳಿಸಿ ಅದಕ್ಕೆ ಹೊಸ ಜೀವ ನೀಡಿದ. ಇದರ ನಂತರ ಎರಡು ಗಮನಾರ್ಹವಾದ ಘಟನೆಗಳು ನಡೆದವು. ಅವೇನು ಆಕಸ್ಮಿಕವಾದವುಗಳಾಗಿರಲಿಲ್ಲ. ಆಸ್ಟ್ರಿಯಾದ ಅನಾಮಧೇಯ ಕ್ರಿಶ್ಚಿಯನ್ ಅನುಯಾಯಿ ಗ್ರೆಗೊರಿ ಮೆಂಡಲ್ ಅನುವಂಶೀಯತೆಯ ಸಿದ್ಧಾಂತಕ್ಕೆ ನಾಂದಿ ಹಾಡಿ, ಆಧುನಿಕ ತಳಿ ವಿಜ್ಞಾನದ ತಂದೆ ಎನಿಸಿಕೊಂಡ. ಫ್ರಾನ್ಸ್‌ನಲ್ಲಿ ಲೂಯಿಸ್ ಪ್ಯಾಶ್ಚರ್ ರೋಗಗಳಿಗೆ ಕಾರಣವಾದ ಸೂಕ್ಷ್ಮಾಣು ಜೀವಿಗಳ ಸಿದ್ಧಾಂತವನ್ನು ಮಂಡಿಸಿದ. ಇದರಿಂದ ಸಾವಿನಂಚಿನಲ್ಲಿದ್ದ ಅನೇಕ ರೋಗಿಗಳ ಜೀವುಳಿಯುವಂತಾಯಿತು. ಡಾರ್ವಿನ್‌ರ ವಿಕಾಶವನ್ನು ಮಂಡಿಸಿದ ನೂರೈವತ್ತು ವರ್ಷಗಳಾದ ಮೇಲೂ ಸಹ ಜೀವಶಾಸ್ತ್ರದ ಇತರ ವಿಭಾಗಗಳಲ್ಲಿ ಹಲವು ಮುನ್ನಡೆ ಸಾಧ್ಯವಾಗಿದ್ದರೂ ಸಹ ಡಾರ್ವಿನ್‌ರ ವಿಕಾಸವಾದವನ್ನು ತಳ್ಳಿ ಹಾಕುವುದು ಸಾಧ್ಯವಿಲ್ಲ ಎಂಬುದನ್ನು ಬಹಳ ಮುಖ್ಯವಾಗಿ ಗಮನಿಸಬೇಕು. ಆದರೆ ಕೆಲವು ಹೊಸ ಪ್ರಶ್ನೆಗಳು ಎದ್ದು ನಿಂತಿವೆ. ಆಧುನಿಕ ಜೀವ ವಿಜ್ಞಾನಿಗಳ ಮುಂದೆ ಒಂದು ದೊಡ್ಡ ಸವಾಲು ಎದುರಾಗಿದೆ. 'ಉಳಿವಿಗಾಗಿನ ಹೋರಾಟ'ದ ಪರಿಕಲ್ಪನೆಯಲ್ಲಿ ಡಾರ್ವಿನ್ ಪ್ರತಿಪಾದಿಸಿದಂತೆ ಜೈವಿಕ ಲಕ್ಷಣಗಳು ಹೇಗೆ ಪೀಳಿಗೆಯಿಂದ ಪೀಳಿಗೆ ವರ್ಗಾವಣೆಯಾಗುವ ಅನುವಂಶಿಕ ಲಕ್ಷಣವಾಗಿ ಪರಿವರ್ತನೆ ಹೊಂದುತ್ತವೆಂಬುದೇ ಈ ಪ್ರಶ್ನೆಯಾಗಿದೆ. ಗಮನಿಸಬೇಕಾದ ಮುಖ್ಯಾಂಶವೇನೆಂದರೆ, ಡಾರ್ವಿನ್ ಸಂಶೋಧನೆಯ ಪರಿಣಾಮವು ಇತರ ಕ್ಷೇತ್ರಗಳಲ್ಲಿಯೂ ಆಳವಾದ ಮತ್ತು ಗಹನವಾದ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿತು. "ಆರಿಜಿನ್ ಆಫ್ ಸ್ಪೀಷೀಸ್" (ಜೀವ ಸಂಕುಲಗಳ ಉಗಮ) ಪುಸ್ತಕದ ಪ್ರಕಟಣೆಯ ಒಂದು ವರ್ಷದ ನಂತರ ಕಾರ್ಲ್ ಮಾರ್ಕ್ಸ್ ಹೀಗೆ ಹೇಳುತ್ತಾರೆ "ಇದು ಒರಟು ಇಂಗ್ಲಿಷ್‌ನಲ್ಲೇ ರೂಪುಗೊಂಡಿದ್ದರೂ ಸಹ, ಈ ಪುಸ್ತಕವು ನಮ್ಮ ಪ್ರಾಕೃತಿಕ ಇತಿಹಾಸದ ದೃಷ್ಟಿಕೋನವನ್ನೇ ಆಧಾರವಾಗಿ ಹೊಂದಿದೆ". ಮಾರ್ಕ್ಸ್ 'ಕ್ಯಾಪಿಟಲ್' ಅನ್ನು ಡಾರ್ವಿನ್‌ಗೆ ಸಮರ್ಪಿಸಲು ಯೋಚಿಸಿದ್ದ ಎಂದು ತಿಳಿಯಲಾಗಿದೆ. ಆದರೆ 'ಕ್ಯಾಪಿಟಲ್' ನ ಮೊದಲ ಸಂಚಿಕೆಯ ಒಂದು ಪ್ರತಿಯನ್ನು ಡಾರ್ವಿನ್‌ಗೆ ಕಳುಹಿಸಿದ್ದ ಎನ್ನುವುದಂತೂ ಸತ್ಯ.


ಡಾರ್ವಿನ್ ಸಾಮಾಜಿಕ ದೃಷ್ಟಿ

ಡಾರ್ವಿನ್ನನ ಸಾಮಾಜಿಕ ದೃಷ್ಟಿಕೋನವೂ ಮಾಲ್ತೂಸಿಯನ್‌ನ ದೃಷ್ಟಿಕೋನದಲ್ಲಿ ತುಂಬಾ ಆಳವಾಗಿ ಬೇರೂರಿತ್ತೆಂಬುಧನ್ನು ಗಮನಿಸಬೇಕು. ಆದರೆ ಇದು ಮಾರ್ಕ್ಸ್‌ನ ದೃಷ್ಟಿಕೋನಕ್ಕಿಂತ ಭಿನ್ನವಾಗಿತ್ತು. ಅವರ ಕಾಲದ ಪ್ರಶ್ನೆಯೆಂದರೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಸುಧಾರಣೆ ಮಾಡಿ ಮಾನವೀಯವಾಗಿ ಗರಿಷ್ಟ ಸಂಖ್ಯೆಯ ಜನರಿಗೆ ಗರಿಷ್ಠ ಸಂತೋಷ ದೊರೆಯುವಂತೆ ಮಾಡುವುದು ಹೇಗೆ ಎಂಬುದಾಗಿತ್ತು. ಇದು ಬೆಂಥಂ ಮತ್ತು ಮಿಲ್‌ನಂತಹ ಉದಾರವಾದಿಗಳ ದೃಷ್ಟಿಕೋನ. ಮಾಲ್ತಸ್ ಇದಕ್ಕೆ ವಿರುದ್ಧವಾಗಿ ಪ್ರತಿಕ್ರಿಯಿಸಿ 1978ರಲ್ಲಿ ಹೀಗೆ ಬರೆಯುತ್ತಾನೆ.


"ಇಂಥ ಪ್ರಯತ್ನಗಳು ಪರಿಣಾಮಕಾರಿಯಲ್ಲ. ಇದೊಂದು ವ್ಯರ್ಥ ಪ್ರಯತ್ನ. ಏಕೆಂದರೆ ಸಂಪನ್ಮೂಲವನ್ನು ಅನೇಕ ಜನರಿಗೆ ಹಂಚಬೇಕಾಗಿರುವುದರಿಂದ, ಅವರನ್ನು (ಬಡವರನ್ನು) ನಿಯಂತ್ರಣದಲ್ಲಿಡಲು ಸಾಧ್ಯವಾಗುವುದಿಲ್ಲ. ಅವರ ಸಂಖ್ಯೆ ಗುಣಿತವಾಗಿ ತಡೆಯಲಾರದ ದರದಲ್ಲಿ ಹೆಚ್ಚಾಗಿ, 'ಕಡಿಮೆ ಪ್ರತಿಫಲ" ಸಿಗುವ ಸ್ಥಿತಿ ತಲುಪುತ್ತದೆ. ಇದರಿಂದ ಘರ್ಷಣೆ, ಯುದ್ಧ ಬರಗಾಲಗಳುಂಟಾಗುತ್ತವೆ." ಬಂಡವಾಳಶಾಹಿ ವ್ಯವಸ್ಥೆಯ ಅನೇಕ ಆಸಕ್ತ ಸಮಾಜ ವಿಜ್ಞಾನಿಗಳು ಕಾರ್ಮಿಕ ವರ್ಗದ ಮೇಲೆ ಬಂಡವಾಳದ ಶ್ರೇಷ್ಠತೆ ಮತ್ತು ತಮ್ಮ ಉಳಿಯುವಿಕೆಯನ್ನು ಸಂರಕ್ಷಿಸಿಕೊಳ್ಳಲು ಡಾರ್ವಿನ್ ನೈಸರ್ಗಿಕ ಆಯ್ಕೆ ಪರಿಕಲ್ಪನೆಯನ್ನು ಬಳಸಿಕೊಂಡರು. ಹಲವಾರು ಜನ, ಸೂಕ್ತ ಸ್ಪರ್ಧೆಯನ್ನು ರೂಪಿಸುವ ಮೂಲಕ ಹಾಗೂ ಜನಾಂಗಗಳ ನಡುವೆ ನಿಯಂತ್ರಿತ ಸಂಕರ ಏರ್ಪಡಿಸುವ ಮೂಲಕ 'ಅತ್ಯುತಷ್ಟ ಗುಣ ಲಕ್ಷಣಗಳುಳ್ಳ ಮಾನವನ ಹೊಸ ಜನಾಂಗವನ್ನೇ ಸೃಷ್ಟಿಸಬಹುದು ಎಂದು ನಂಬಿದರು.

ಡಾರ್ವಿನ್‌ರ ವಿಕಾಸವಾದವನ್ನು ವಿರೂಪಗೊಳಿಸುವ ಈ ಅಪಾಯದ ನಡುವೆಯೂ ಡಾರ್ವಿನ್‌ನ ಸಿದ್ಧಾಂತ ವಿಜ್ಞಾನ ಮತ್ತು ಮಾನವನ ಚಿಂತನೆಯ ಚರಿತ್ರೆಯಲ್ಲಿ ಒಂದು ಯುಗ ಪ್ರವರ್ತಕ ಘಟನೆಯಾಗಿದೆ. ಇದು ಕ್ರಾಂತಿಯನ್ನುಂಟು ಮಾಡಿದ ಜೀವ ವಿಕಾಸ ಸಿದ್ಧಾಂತ ಡಾರ್ವಿನ್ ಸಿದ್ಧಾಂತದ ಮೇಲೆ ಆಕ್ರಮಣಗಳು ಇಂದೂ ಮುಂದುವರಿದಿದೆ. 1925ರಲ್ಲಿ ಅಮೇರಿಕಾದ ಶಾಲಾ ಶಿಕ್ಷಕ ಜಾನ್ ಸ್ಕೂಪ್ಸ್‌ನನ್ನು ಡಾರ್ವಿನ್ ಸಿದ್ಧಾಂತವನ್ನು ಪಾಠ ಮಾಡಿದ ಎಂಬ ಕಾರಣಕ್ಕಾಗಿ ಸೇವೆಯಿಂದ ವಜಾ ಮಾಡಲಾಯಿತು. ನ್ಯಾಯಾಲಯ ಸಹ ಅದನ್ನೇ ಸಮರ್ಥಿಸಿಕೊಂಡಿತು.

1968 ರ ನಂತರದ ತೀರ್ಪುಗಳು ಹಳೆಯ ತೀರ್ಪುಗಳನ್ನು ನಿರಾಕರಿಸಿದರೂ 1980 ನಂತರ ಡಾರ್ವಿನ್ ಸಿದ್ಧಾಂತದ ಮೇಲೆ ಹೊಸ ಆಕ್ರಮಣಗಳು ಆರಂಭವಾದವು. ಅರ್ಕನ್‌ಸ್ಸಾಸ್ ರಾಜ್ಯವು, ಶಾಲೆಗಳಲ್ಲಿ ದೈವಸೃಷ್ಟಿವಾದ ಮತ್ತು ವಿಕಾಸವಾದ ಎರಡನ್ನೂ ಬೋಧಿಸಬೇಕೆಂದು ನಿರ್ಬಂಧ ಹೇರಿತು. ಇಂಥ ಅವೈಚಾರಿಕತೆಯನ್ನು ಬೆಳೆಸಿದ್ದೇಕೆ? ಕೇಸರೀಕರಣವು ಎಲ್‌ಪಿಜಿ ಯ ಜೊತೆ ಜೊತೆಗೆ ಬಂದಂತೆ ಇವೂ ಸಹ ಹೊಸ ವಸಾಹತುಶಾಹಿ, ಹೊಸ ಉದಾರವಾದಿ ಮತ್ತು ಜಾಗತೀಕರಣದ ಪರಿಕಲ್ಪನೆಗಳ ಜೊತೆ ಜೊತೆಗೆ ಉದಯಿಸಿವೆಯೇ? ಅಂತರಾಷ್ಟ್ರೀಯ ಖಗೋಳ ವಿಜ್ಞಾನ ವರ್ಷವನ್ನೆ ಚಾರ್ಲ್ಸ್ ಡಾರ್ವಿನ್ನರ ದ್ವಿಶತಮಾನೋತ್ಸವ ವರ್ಷದ ಜೊತೆಯಲ್ಲಿ ಆನಂದದಿಂದ ಆಚರಿಸುವಾಗ ನಾವು ಈ ಮೇಲಿನ ಪ್ರಶ್ನೆಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.



ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಬೇಡಿಕೆ ಈಡೇರಿಸದರ ವಿರುದ್ಧ ರಾಮದುರ್ಗದಲ್ಲಿ ಪ್ರತಿಭಟನೆ



ಸಮಾನವೇತನ, ಕನಿಷ್ಠ ಕೂಲಿ ಒತ್ತಾಯಿಸಿ ತಾಲ್ಲೂಕು ಕಛೇರಿ ಮುತ್ತಿಗೆ, ಸಿಂಧನೂರು

ಆಂಧ್ರ 'ಮಹಾ ಕೂಟಮಿ' ಗೆ ವಿಜಯದ ವಿಶ್ವಾಸ

ರಾಷ್ಟ್ರ ರಾಜಕಾರಣದ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲ ರಾಜ್ಯಗಳಲ್ಲಿ ದಕ್ಷಿಣ ಭಾರತದ ಆಂಧ್ರ ಪ್ರದೇಶವೂ ಒಂದು ಪ್ರಮುಖ ರಾಜ್ಯ. ಅಲ್ಲೀಗ ಕಾಂಗ್ರೆಸ್ ಪಕ್ಷದ ಸರ್ಕಾರವಿದೆ. ವೈ.ಎಸ್. ರಾಜಶೇಖರ ರೆಡ್ಡಿ ರಾಜ್ಯದ ಮುಖ್ಯಮಂತ್ರಿ. ತೀವ್ರ, ರಾಜಕೀಯ ಸಂಚಲನಗಳು ನಡೆದಿರುವ ಈ ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿ ಏನು ಎಂಬುದು ಕುತೂಹಲಕರವಾಗಿದೆ.

ರಾಷ್ಟ್ರ ರಾಜಕಾರಣದ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲ ರಾಜ್ಯಗಳಲ್ಲಿ ದಕ್ಷಿಣ ಭಾರತದ ಆಂಧ್ರ ಪ್ರದೇಶವೂ ಒಂದು ಪ್ರಮುಖ ರಾಜ್ಯ. ಅಲ್ಲೀಗ ಕಾಂಗ್ರೆಸ್ ಪಕ್ಷದ ಸರ್ಕಾರವಿದೆ. ವೈ.ಎಸ್. ರಾಜಶೇಖರ ರೆಡ್ಡಿ ರಾಜ್ಯದ ಮುಖ್ಯಮಂತ್ರಿ. ತೀವ್ರ, ರಾಜಕೀಯ ಸಂಚಲನಗಳು ನಡೆದಿರುವ ಈ ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿ ಏನು ಎಂಬುದು ಕುತೂಹಲಕರವಾಗಿದೆ.

2004 ರ ಸಂದರ್ಭದಲ್ಲಿ ಲೋಕಸಭೆಗೂ, ವಿಧಾನಸಭೆಗೂ ಇಲ್ಲಿ ಒಟ್ಟಿಗೆ ಚುನಾವಣೆಗಳು ನಡೆದಿದ್ದವು. ಆಗ ರಾಜ್ಯದಲ್ಲಿ 10 ವರ್ಷ ನಿರಂತರ ಆಡಳಿತ ಮಾಡಿದ ತೆಲುಗುದೇಶಂ ಅಧಿಕಾರದಲ್ಲಿತ್ತು. ಅದು ಕೋಮುವಾದಿ ಬಿಜೆಪಿಯೊಂದಿಗೆ ಮೈತ್ರಿ ಹೊಂದಿತ್ತು. ಬಿಜೆಪಿ ಮತ್ತು ಮಿತ್ರಪಕ್ಷಗಳನ್ನು ಸೋಲಿಸುವುದು ಅಂದಿನ ಒಂದು ಕೇಂದ್ರ ಪ್ರಶ್ನೆಯಾಗಿದ್ದರಿಂದ ಸಿಪಿಐ(ಎಂ), ಸಿಪಿಐಗಳೆರಡೂ ಆಂಧ್ರದಲ್ಲಿ ಕಾಂಗ್ರೆಸ್ ನೊಂದಿಗೆ ಸೀಟು ಹೊಂದಾಣಿಕೆ ಮಾಡಿಕೊಂಡಿದ್ದವು. ಜೊತೆಗೆ ಟಿ.ಆರ್.ಎಸ್. ಕೂಡ ಇತ್ತು ಎಂಬುದನ್ನು ನೆನಪಿಸಿ ಕೊಳ್ಳಬಹುದು. ಮುಂದೆ ನಡೆದದ್ದು ಈಗ ಇತಿಹಾಸ.

ಬದಲಾದ ಪರಿಸ್ಥಿತಿ

ಟಿಡಿಪಿ ಈಗ ಬಿಜೆಪಿಯ ಬೆಂಬಲಕ್ಕಿಲ್ಲ. ದೂರವಾಗಿದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಆಂಧ್ರಪ್ರದೇಶ ಎಂದೂ ಕಾಣದ ಭ್ರಷ್ಟಾತಿಭ್ರಷ್ಟ ಸರ್ಕಾರ ತನ್ನದು ಎಂದು ಸಾಬೀತು ಮಾಡಿಕೊಂಡಿದೆ. ಕಾಂಗ್ರೆಸ್, ಟಿ.ಆರ್.ಎಸ್, ಎಡಪಕ್ಷಗಳು 2004 ರಲ್ಲಿ ಹೆಚ್ಚಿನ ಲೋಕಸಭಾ ಸ್ಥಾನಗಳಿಸಿ ಎನ್‌ಡಿಎ ಅಧಿಕಾರಕ್ಕೆ ಬರದಂತೆ ತಡೆಯಲು ನೆರವಾಗಿದ್ದು ಒಂದು ಸಾಧನೆಯೇ. ಆದರೆ ಜನತೆಯು ನೀಡಿದ ತೀರ್ಪಿನ ಅರ್ಥವೇನೆಂದು ಕಾಂಗ್ರೆಸ್ ಅರಿತುಕೊಳ್ಳಲಿಲ್ಲ. ಅದು ಅರಿತುಕೊಳ್ಳಬಹುದೆಂಬ ಭ್ರಮೆಯೂ ಎಡಪಕ್ಷಗಳಿಗಿಲ್ಲ. ಆದರೆ ಈ ನಡುವೆ ಆಗಿದ್ದೆಂದರೆ ಬಿಜೆಪಿಯು ಬಿಜೆಡಿಯ ಕೋಮುವಾದದ ಅಪಾಯದ ಬಗೆಗೆ ಸ್ಪಷ್ಟ ಎನ್ನಬಹುದಾದ ನಿಲುವು ತಳೆದದ್ದು.

ಕಾಲಚಕ್ರ ಉರುಳಿದೆ. ಆಂಧ್ರದಲ್ಲೀಗ ಬಿಜೆಡಿಪಿ, ಟಿ.ಆರ್.ಎಸ್., ಎಡಪಕ್ಷಗಳು ಸೇರಿ 'ಮಹಾಕೂಟಮಿ' ರಚಿಸಿಕೊಂಡಿವೆ. ಆಂಧ್ರದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಮಹಾಕೂಟಮಿ ಕಾಂಗ್ರೆಸ್ ಅನ್ನು ಸೋಲಿಸಿ ಗೆಲುವು ಸಾಧಿಸುತ್ತದೆ ಎಂಬುದು ಸಿಪಿಐ(ಎಂ) ಆಂಧ್ರ ಪ್ರದೇಶ ಕಾರ್ಯದರ್ಶಿ, ಪೊಲಿಟ್ ಬ್ಯೂರೋ ಸದಸ್ಯರಾದ ಬಿ.ವಿ.ರಾಘವುಲು ಅವರ ಸ್ಪಷ್ಟ ನುಡಿ.

ಪ್ರಜಾರಾಜ್ಯಂ ಪರಿಣಾಮ

ಈ ಮಧ್ಯೆ ಚಿತ್ರನಟ ಚಿರಂಜೀವಿ ರಾಜಕೀಯ ರಂಗ ಪ್ರವೇಶಿಸಿದ್ದಾರೆ. ಪ್ರಜಾರಾಜ್ಯ ರಚನೆಯಾಗಿದೆ. ಇದು ಯಾವ ರೀತಿಯ ಪರಿಣಾಮ ಬೀರಬಹುದು. ಖಚಿತ ಊಹೆ ಕಷ್ಟ. ಆದರೆ ಸ್ಥೂಲ ಅಂದಾಜು ಸಾಧ್ಯ. ಈಗ ಕಂಡುಬರುತ್ತಿರುವ ಬೆಳವಣಿಗೆ ನೋಡಿದರೆ ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಬೆಂಬಲಕ್ಕಿರುವ ಹಿಂದುಳಿದ ಕಾಪು ಸಮುದಾಯದ ಬೆಂಬಲ ಕಾಂಗ್ರೆಸ್‌ನಿಂದ ಪ್ರಜಾರಾಜ್ಯಂ ಕಡೆಗೆ ಸೆಳೆಯಲ್ಪಡಬಹುದು. ಒಟ್ಟಾರೆ ಪ್ರಜಾರಾಜ್ಯಂನಿಂದ



ಇತರರಿಗಿಂತ ಕಾಂಗ್ರೆಸ್‌ಗೆ ಹೆಚ್ಚು ಹಾನಿ ಎಂಬುದು ಎದ್ದು ಕಾಣುತ್ತಿದೆ.

ಕಾಂಗ್ರೆಸ್ ತಂತ್ರ

ಚುನಾವಣೆಯನ್ನು ಗೆಲ್ಲಲು ಕಾಂಗ್ರೆಸ್ ಹಣಬಲ, ತೋಳ್ಬಲ, ಹೆಂಡ, ಸಾರಾಯಿಗಳ ಮೊರೆ ಹೋಗಿರುವುದು ಅದರ ಆತ್ಮವಿಶ್ವಾಸದ ಕೊರತೆಗೆ ಸಾಕ್ಷಿಯಾಗಿದೆ. ಮೂರನೇ ಎರಡರಷ್ಟು ಬಹುಮತ ದೊರೆಯಲಿದೆ ಎಂದೇ ಸಾರುತ್ತಾ ಬಂದಿದ್ದ ಕಾಂಗ್ರೆಸ್ ಇತ್ತೀಚಿಗೆ ಸ್ಫೋಟಗೊಂಡ ಸರಣಿಭ್ರಷ್ಟ ಕಾಂಡಗಳ ನಂತರ ಮೂಲೆಗುಂಪಾದಂತಾಗಿದೆ. ಸಹಸ್ರಾರು ಕೋಟಿ ರೂಪಾಯಿಗಳ ಸತ್ಯಂ ಹಗರಣ, ಮೇತಾಸ್ ಹಗರಣ, ವೈ.ಎಸ್.ರಾಜಶೇಖರ್ ರೆಡ್ಡಿಯವರ ಕುಟುಂಬ ತೊಡಗಿಕೊಂಡಿರುವ ಹಗರಣಗಳು ಕಾಂಗ್ರೆಸ್‌ನ ಕಳೆಗುಂದಿಸಿದೆ. ಕಾಂಗ್ರೆಸ್‌ನ ಇಂದಿರಮ್ಮ ವಸತಿ ಯೋಜನೆಯ ಮೂಲಕ 20 ಲಕ್ಷ ಮನೆ ಕೊಟ್ಟಿದ್ದೇವೆ. ಇನ್ನೂ 20 ಲಕ್ಷ ಕೊಡುತ್ತಿದ್ದೇವೆ ಎಂದು ಸರ್ಕಾರ ಹೇಳಿಕೊಂಡರೂ ಸಹ ಮನೆ ನಿರ್ಮಾಣದಲ್ಲಿ ಜನರೂ ಹಣ ತೊಡಗಿಸಿದ್ದಾರೆ. ಅದು ಉಚಿತವೇನಲ್ಲ. ಜೊತೆಗೆ ಕಾಂಗ್ರೆಸ್‌ನ ಸ್ವಜನ ಪಕ್ಷಪಾತ, ವ್ಯಾಪಕ ಭ್ರಷ್ಟಾಚಾರವು ರಾಜ್ಯದಲ್ಲೆಲ್ಲಾ ಬಯಲಾಗಿದೆ. ಎಸ್ ಇಜೆಡ್‌ಗಳಿಗೆ ಭೂಮಿ ವಿತರಣೆ, ನೀರಾವರಿ ಯೋಜನೆಗಳಲ್ಲಿ ಭ್ರಷ್ಟಾಚಾರವೇ ಮೆರೆದಿದೆ. ವಸತಿ ನಿವೇಶನ ಕೇಳಿದ ಬಡಜನರ ಮೇಲೆ ಗೋಲಿಬಾರ್ ನಡೆಸಿ 7 ಜನರನ್ನು ಕೊಂದ ಸರ್ಕಾರದ ಕ್ರೌರ್ಯವನ್ನು ಜನ ಮರೆತಿಲ್ಲ. ರೈತರ ಸಾಲಮನ್ನಾದ ಪ್ರಯೋಜನ ಒಂದಷ್ಟು ಜನರಿಗೆ ದೊರೆತಿದ್ದರೂ ಸರ್ಕಾರದ ದುಷ್ಟ ಆಡಳಿತದ ದುಷ್ಪರಿಣಾಮವನ್ನು ಅದು ಅಳಿಸಲಾರದು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ವಸತಿ ಯೋಜನೆಗೆ ತಿರುಗಿಸಿ ಸರ್ಕಾರ ಜಂಬ ಕೊಚ್ಚಿಕೊಳ್ಳುತ್ತಿರುವುದನ್ನು ಜನ ಗಮನಿಸುತ್ತಿದ್ದಾರೆ.

ಜಾಹೀರಾತು ಪ್ರಚಾರದ ಭರಾಟೆ

ಆಂಧ್ರ ರಾಜ್ಯ ರಚನೆಯ ಒಂದೇ ದಿನ ಮುದ್ರಣ ಮಾಧ್ಯಮಗಳಿಗೆ ಸರ್ಕಾರದ ಸಾಧನೆ ಕುರಿತು 20 ಕೋಟಿ ಜಾಹಿರಾತು ನೀಡಿದ ಸರ್ಕಾರ, ಹಣ ಹೊಳೆ ಹರಿಸಿ ಬಾರಿ ಪ್ರಚಾರ ಯೋಜನೆಯ ಮೂಲಕ ಚುನಾವಣೆ ಗೆಲ್ಲಬಹುದೆಂದು ಭ್ರಮಿಸಿದೆ. ಟಿಡಿಪಿ ಎಡಪಕ್ಷಗಳ ಜೊತೆಗೆ ಟಿ.ಆರ್.ಎಸ್ ಸೇರಿದ ಮೇಲಂತೂ ತೆಲಂಗಾಣ ಪ್ರಾಂತದಲ್ಲಿ ಕಾಂಗ್ರೆಸ್ ಪರಿಸ್ಥಿತಿ ದಯನೀಯವಾಗಿದೆ. ಹೈದರಾಬಾದ್‌ನಲ್ಲಿ ಮಾತ್ರ ಸ್ವಲ್ಪ ನೆಲೆ ಹೊಂದಿರುವ (ಎಂಐಎಂ) -ಪಕ್ಷ ಮಾತ್ರವೇ ಕಾಂಗ್ರೆಸ್‌ಗೆ ಪರೋಕ್ಷ ಬೆಂಬಲಕ್ಕಿರುವ ಪಕ್ಷ.

ಸೀಟು ಹಂಚಿಕೆಯಲ್ಲಿ ಸಿಪಿಐ(ಎಂ) ಪಕ್ಷವು ಈ ಬಾರಿ ತನಗೆ 25 ವಿಧಾನಸಭಾ ಕ್ಷೇತ್ರದಲ್ಲಿ 3 ಲೋಕಸಭಾ ಸ್ಥಾನಗಳಲ್ಲೂ ಸ್ಪರ್ಧೆಗೆ ಅವಕಾಶ ಸಿಗಬಹುದೆಂದು ನಿರೀಕ್ಷಿಸಿದೆ.

ತೆಲಂಗಾಣ ಪ್ರಶ್ನೆ

ತೆಲಂಗಾಣ ಪ್ರಶ್ನೆಯಲ್ಲಿ ಪಕ್ಷದ ನಿಲುವೇನು ಬದಲಾಗಿಲ್ಲ. ಪ್ರತ್ಯೇಕ ರಾಜ್ಯ ರಚನೆ ಸಮಸ್ಯೆ ಪರಿಹಾರವಲ್ಲ ಎಂಬುದೇ ಸಿಪಿಐ(ಎಂ) ನಿಲುವಾಗಿದೆ. ಆದರೆ ತೆಲಂಗಾಣ ಜನರ ಭಾವನೆಗೆ ಘಾಸಿಯಾಗದ ದಂತೆ ತೆಲಂಗಾಣ ಪ್ರಾಂತದ ಹಿಂದುಳಿದಿರುವಿಕೆಯ ಸಮಸ್ಯೆಗೆ ನೈಜ ಪರಿಹಾರವನ್ನು ಅಂದರೆ ರಚನಾತ್ಮಕ ಅಭಿಪ್ರಾಯ, ದೃಷ್ಟಿಕೋನವನ್ನು ಜನರ ಮುಂದೆ ಪ್ರತಿಪಾದಿಸಲು ತೀರ್ಮಾನಿಸಲಾಗಿದೆ. ಇನ್ನು ಟಿಡಿಪಿ ಅಧಿಕಾರಕ್ಕೆ ಬಂದು ಅದೇ 'ಹಳೆಯ' ಜಾಗತೀಕರಣ ನೀತಿಗೆ ಜೋತುಬಿದ್ದರೆ? ಸಿಪಿಐ(ಎಂ) ಎಡಪಕ್ಷಗಳು ಸುಮ್ಮನೆ ಕೂರುವ ಪಕ್ಷಗಳಲ್ಲವಲ್ಲ. ಬಾವುಟ ಹಿಡಿದು ಬೀದಿಗೆ ಬರುತ್ತವೆ.

ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ಸತ್ಯವ್ರತ ಇನ್ನಿಲ್ಲ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿವಾದಿಗಳು, ಜನಪರ ಚಳುವಳಿ ಒಡನಾಡಿ ಸತ್ಯವ್ರತ ಮಾರ್ಚ್ 14 ರಂದು ಬೆಂಗಳೂರಿನಲ್ಲಿ ಕೊನೆಯುಸಿರೆಳೆದರು.

ಸತ್ಯವ್ರತರವರು ಒಬ್ಬ ಸರಳ ಜೀವಿಯಾಗಿದ್ದರು. ಅದು ಕೋಮುವಾದದ ವಿರುದ್ಧ ಹೋರಾಟವೇ ಇರಲಿ ಇಲ್ಲ ಜನಪರ ಪ್ರಶ್ನೆಗಳಿಗಾಗಿ ನಡೆಯುವ ಹೋರಾಟವೇ ಇರಲಿ ಉತ್ಸಾಹದಿಂದ ಪಾಲ್ಗೊಂಡು ಯುವಜನರಿಗೂ ಸ್ಫೂರ್ತಿ ನೀಡುವವರಾಗಿದ್ದರು. ಸರ್ವೋದಯ ಮೌಲ್ಯಗಳ ಪ್ರತಿಪಾದಕರಾಗಿದ್ದ ಸತ್ಯವ್ರತರವರ ಸಾವು ಜನಪರ ಚಳುವಳಿ ಒಂದು ನಷ್ಟವಾಗಿದೆ. 'ಜನಶಕ್ತಿ'ಯು ಸತ್ಯವ್ರತದ ನಿಧನಕ್ಕೆ ತೀವ್ರ ಸಂತಾಪ ಸಲ್ಲಿಸುತ್ತದೆ.

ಸಂ

ನೆರವು ನೀಡಲು ಕೋರಿಕೆ

ಜನಶಕ್ತಿ ವಾರಪತ್ರಿಕೆಯ ಸಂಪಾದಕರು, ಸಿಪಿಐ(ಎಂ)ನ ರಾಜ್ಯ ಕಾಯದರ್ಶಿ ಮಂಡಳಿ ಸದಸ್ಯರಾಗಿರುವ ಎಸ್.ವೈ.ಗುರುಶಾಂತ್ ರವರು ಏಪ್ರಿಲ್ ಮೊದಲ ವಾರದಲ್ಲಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾಗಿದೆ. ಇದಕ್ಕಾಗಿ ಸುಮಾರು ಮೂರೂವರೆ ಲಕ್ಷ ರೂಪಾಯಿಗಳಷ್ಟು ವೆಚ್ಚ ತಗೆಲುವ ಅಂದಾಜಿದೆ. ಆದ್ದರಿಂದ ಹಿತೈಷಿಗಳು ಧನ ಸಹಾಯ ನೀಡಲು ಕೋರಲಾಗಿದೆ.

- ವಿ.ಜೆ.ಕೆ.ನಾಯರ್,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ,

ವಿ.ಸೂ.: ನಿಮ್ಮ ನೆರವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಹೆಸರಿಗೆ ಕಳುಹಿಸುವುದು.

ಪುಟ 2 ರಿಂದ

ಸ್ವಾಮಿ ವಿವೇಕಾನಂದರ ಪ್ರಖರ ವಿಚಾರಧಾರೆ

ಶೂದ್ರನೆಂದು ಕರೆದರೆ ನನಗೇನೂ ಬೇಸರವಿಲ್ಲ; ನೀವಿಲ್ಲ. ನಮ್ಮ ಪೂರ್ವಜರು ದರಿದ್ರರ ಮೇಲೆ ಮಾಡಿದ ಪಾಪಕ್ಕೆ, ದೌರ್ಜನ್ಯಕ್ಕೆ ಇದು ಅಲ್ಪ ಪ್ರಾಯಶ್ಚಿತ್ತವೆಂದು ಭಾವಿಸುತ್ತೇನೆ, ನಾನು ಪರಯಾ (ಮ್ಲೇಚ್ಛ) ಆದರೆ ನನಗೆ ಇನ್ನೂ ಅಧಿಕ ಸಂತೋಷವೆ. ಯಾಕೆಂದರೆ ನಾನು ಬ್ರಾಹ್ಮಣರಲ್ಲೆಲ್ಲ ಉತ್ತಮೋತ್ತಮ ಬ್ರಾಹ್ಮಣನ ಶಿಷ್ಯ. ಆ ಮಹಾಮಹಿಮನು ಪರಯಾ (ಮ್ಲೇಚ್ಛ)ನ ಮನೆಯನ್ನು ಸ್ವಚ್ಛ ಮಾಡಲು (ಕಸಗುಡಿಸಲು) ಇಚ್ಛಿಸಿದರು. ಆದರೆ ಪರಯಾ ಅದಕ್ಕೆ ಒಪ್ಪಲಿಲ್ಲ..... ಆಗ ಆತ ಮಧ್ಯರಾತ್ರಿಯಲ್ಲಿ ಎದ್ದು, ಆ ಪರಯನ ಮನೆಯಲ್ಲಿ ಯಾರಿಗೂ ಗೊತ್ತಾಗದಂತೆ ಹೊಕ್ಕು ಅವನ ಮನೆಯ ಪಾಯಿಖಾನೆಯನ್ನು ಬಳಿದು, ತನ್ನ ಉದ್ದನೆಯ ಕೂದಲಿನಿಂದ ಅದನ್ನು (ತಿಕ್ಕಿ ತೊಳೆದು) ಸಾರಿಸಿದ....... ಆ ಶೂರನ ಜೀವನವನ್ನು ನಾನು ಅನುಕರಿಸಬಯಸುತ್ತೇನೆ. ಇಪ್ಪತ್ತು ಮಣ ಒಣ ಆಡಂಬರದ ಮಾತುಗಳಿಗಿಂತ ಒಂದು ಗುಂಜಿ ಆಚರಣೆ ಲೇಸು".

[c.w,vol. III, p.211-12-]

"ಭಾರತದಲ್ಲಿ ಪೂಜಾರಿಗಳಿಗೆ ಬ್ರಾಹ್ಮಣರಿಗೆ , ಅಗಾಧ ಬುದ್ಧಿಶಕ್ತಿಯಿತ್ತು. ಚಿತ್ ಶಕ್ತಿಯಿತ್ತು. ಭಾರತದಲ್ಲಿ ಆಧ್ಯಾತ್ಮಿ ಬೆಳವಣಿಗೆಯನ್ನು ಅವರೆ ಪ್ರಾರಂಭಿಸಿದರು. ಅವರು ಆಶ್ಚರ್ಯಕರವಾಗ ಸಿದ್ಧಿ ಪಡೆದರು. ಆದರೆ ಪ್ರಾರಂಭದಲ್ಲಿ ನಿರ್ಮುಕ್ತ ಆತ್ಮಾಭಿವೃದ್ಧಿಯನ್ನು ಪ್ರಚೋದಿಸಿದ ಆ ಪ್ರವೃತ್ತಿ ಕ್ರಮೇಣ ಮಾಯವಾಗುವ ಕಾಲ ಬಂತು. ನಮಗೇ ಅಧಿಕ ಅಧಿಕಾರ ಮತ್ತು ಸೌಲಭ್ಯಗಳಿವೆ ಎಂದು ಕಬಳಿಸಿಕೊಂಡರು. ಬ್ರಾಹ್ಮಣ ಯಾರನ್ನಾದರೂ ಕೊಂದರೆ ಅವನನ್ನು ಶಿಕ್ಷಿಸುತ್ತಿರಲಿಲ್ಲ. ಬ್ರಾಹ್ಮಣ ಹುಟ್ಟನಿಂದಲೇ ಈ ವಿಶ್ವದೊಡೆಯನಾಗಿಬಿಟ್ಟ! ಅತ್ಯಂತ ಹೀನ ದುರಾತ್ಮನಾದ ಬ್ರಾಹ್ಮಣನನ್ನು ಪೂಜಿಸಬೇಕಂತೆ!

[c.w.vol. VIII, p.93-95]

"ಭಾರತದಲ್ಲಿ ಪೌರೋಹಿತ್ಯವೂ ಸಾಮಾಜಿಕ ಜೀವನದಲ್ಲಿ ವಂಶಪಾರಂಪರ್ಯ ವೃತ್ತಿಯಾಗಿಹೋಯ್ತು. ಅರ್ಚಕನ ಮಗ ಅರ್ಚಕ. ಬಡಗಿಯ ಮಗ ಬಡಗಿಯಾಗುವಂತೆ, ಕಮ್ಮಾರನ ಮಗ ಕಮ್ಮಾರನಾಗುವಂತೆ."

[c.w.vol. VIII, p.78]

"... ಸಹಜವಾಗಿ ಪೂಜಾರಿ ತನಗೆ ತಾನೆ ಅಂದುಕೊಳ್ಳುತ್ತಾನೆ: ದೇವರುಗಳನ್ನು ನನ್ನ ಅಡಿಯಾಳನ್ನಾಗಿ ಮಾಡಿರುವ ನನಗಿರುವ ಅಧಿಕಾರವನ್ನೇಕೆ ಬಿಟ್ಟುಕೊಡಬೇಕು? ದೈಹಿಕ ಮತ್ತು ಮಾನಸಿಕ ರೋಗರುಜಿನಗಳ ಬಗ್ಗೆ ಇರುವ ಪ್ರಭುತ್ವವನ್ನು ಕೊಟ್ಟಿರುವ ಅಧಿಕಾರವನ್ನು ನಾನೇಕೆ ಬಿಟ್ಟುಕೊಡಬೇಕು? ಭೂತ, ಬೇತಾಳ ಮತ್ತು ಇತರ ಅಗೋಚರ (ದುಷ್ಟ) ಶಕ್ತಿಗಳ ಮೇಲೆ ನನಗಿರುವ ಹಿಡಿತದ ಅಧಿಕಾರವನ್ನು ನಾನೇಕೆ ಬಿಟ್ಟುಕೊಡಬೇಕು? ಅತ್ಯಂತ ತ್ಯಾಗದ ಬೆಲೆಕೊಟ್ಟು ಕೊಂಡುಕೊಂಡ (ಪಡೆದ) ಈ ಬಹುಮಾನವನ್ನು ನಾನೇಕೆ ಬಿಟ್ಟುಕೊಡಬೇಕು?.... " ಹಾಗೂ ಆ ಶಕ್ತಿ ಸಂಪೂರ್ಣವಾಗಿ ಮಾನಸಿಕವಾದದ್ದು. ಅದನ್ನು ಪರಿಪೂರ್ಣ ರಹಸ್ಯವನ್ನಾಗಿಟ್ಟುಕೊಳ್ಳಲು ಎಷ್ಟೊಂದು ಅವಕಾಶಗಳಿವೆ! ..... ತತ್ಪರಿಣಾಮವಾಗಿ ಇತರ ಜಾತಿಗಳೊಡನೆ ಅವರ ತೀವ್ರ ಸೆಣಸಾಟವುಂಟಾಯಿತು.

"ಗುರಿಯು ಕಣ್ಮರೆಯಾಗಿ, ಗೊತ್ತು ಗುರಿಯಿಲ್ಲದೆ ತೇಲುತ್ತ ತೇಲುತ್ತ ತಾನೇ ನೇಯ್ದ ಬಲೆಯಲ್ಲಿ ಜೇಡನ ಹುಳು ಸಿಕ್ಕಿ ಬೀಳುವಂತೆ ಪುರೋಹಿತವರ್ಗ ಪೌರೋಹಿತ್ಯಶಕ್ತಿ ತೊಡಕಿನಲ್ಲಿ ಸಿಕ್ಕುಬಿದ್ದಿದೆ. ತಲೆತಲಾಂತರಗಳಿಂದ, ಅತ್ಯಂತ ಎಚ್ಚರಿಕೆಯಿಂದ ಇತರರ ಕಾಲುಗಳಿಗೆ ತೊಡಿಸಲೆಂದು ಸಿದ್ಧಪಡಿಸಿದ್ದ ಬೇಡಿಯು ಈಗ ತನ್ನ ಕಾಲುಗಳಿಗೇ ಸಾವಿರ ಸುರುಳಿಗಳಿಂದ ಭದ್ರವಾಗಿ ಸುತ್ತಿಕೊಂಡಿದೆ. ತನ್ನ ಚಲನೆಯನ್ನೇ ನೂರಾರು ವಿಧವಾಗಿ ಕುಂಠಿತಗೊಳಿಸಿದೆ. ದೇಹ ಮತ್ತು ಮನಸ್ಸಿನ ಶುದ್ಧಿಗಳಿಗಾಗಿ ಮಾಡಬೇಕಾದ ಅನಂತ ಆಚಾರಗಳ, ಶಾಸ್ತ್ರಗಳ ಮೂಲಕ ಸಮಾಜವನ್ನು ತಮ್ಮ ಕಬ್ಬಿಣ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶದಿಂದ ಅಸಂಖ್ಯಾತ ಬಂಧನಗಳ ಅನಂತ ಬಲೆಯನ್ನು ಎಲ್ಲ ದಿಕ್ಕುಗಳಲ್ಲೂ ನಿರ್ಮಿಸಿ ಪೌರೋಹಿತ್ಯಶಕ್ತಿ ಹೀಗೆ ಅಡಿಯಿಂದ ಮುಡಿಯವರೆಗೆ ಕೊನೆಯಿಲ್ಲದ ಬಲೆಯಲ್ಲಿ ಸಿಕ್ಕುಬಿದ್ದು ಈಗ ಹತಾಶೆಯಿಂದ ನಿದ್ದೆ ಮಾಡುತ್ತಿದೆ! ಅದರಿಂದ ಅವರಿಗೆ ಬಿಡುಗಡೆಯಿಲ್ಲದಂತಾಗಿದೆ. ಆ ಬಲೆಯನ್ನು ಹರಿದೊಗೆಯಿರಿ. ಪುರೋಹಿತನ ಪೌರೋಹಿತ್ಯದ ಬುನಾದಿಯೆ ನಡುಗಿ ಹೋಗುತ್ತದೆ........."

[c.w.vol. IV, p.252-58]

"... ನಮ್ಮ ಧರ್ಮ, ಧರ್ಮ ಎಂಬ ಹೆಸರಿಗೆ ಅರ್ಹವಾಗಿದೆ. 'ಮುಟ್ಟದಿರು, ನನ್ನನ್ನು ಮುಟ್ಟದಿರು' 'ನನ್ನನ್ನು ಮುಟ್ಟದಿರು' ಎಂಬುದು ನಮ್ಮ ಧರ್ಮ ಮಾತ್ರ. ಶ್ರೇಷ್ಠ ಸ್ವರ್ಗಗಳು! ಬಲಗೈಯಿಂದ ಊಟ ಮಾಡಬೇಕೆ, ಎಡಗೈಯಿಂದ ಮಾಡಬೇಕೆ? ಬಲ ಬದಿಯಿಂದ ನೀರು ತೆಗೆದುಕೊಳ್ಳಬೇಕೆ, ಎಡ ಬದಿಯಿಂದ ತೆಗೆದುಕೊಳ್ಳಬೇಕೆ? ಎಂಬ ವಿಚಾರವನ್ನು ಕುರಿತು ದೇಶದ ದೊಡ್ಡ ದೊಡ್ಡ ಮುಂದಾಳುಗಳು ಕಳೆದ ಎರಡು ಸಾವಿರ ವರ್ಷಗಳಿಂದ ಚರ್ಚಿಸುತ್ತ ಕುಳಿತಿದ್ದರೆ ಅಂಥ ದೇಶ ಹಾಳಾಗಿ ಹೋಗದಿದ್ದರೆ ಇನ್ನಾವ ದೇಶ ಹೋದೀತು?.... ಯಾವ ದೇಶದಲ್ಲಿ ಮೊಹುವಾ ಮರದ ಹೂವುಗಳನ್ನು ತಿಂದು ಅನೇಕ ಲಕ್ಷೋಪಲಕ್ಷ ಜನ ಬದುಕಿದ್ದಾರೆಯೋ ಹಾಗೂ ಯಾವ ದೇಶದಲ್ಲಿ ಒಂದೆರಡು ಲಕ್ಷ ಸಾಧುಗಳು ಕೆಲವು ಲಕ್ಷ ಬ್ರಾಹ್ಮಣರು, ಆ ಜನರಿಗೆ ಒಂದಿಷ್ಟೂ ಪರಿಹಾರವನ್ನು ನೀಡದೆ ಅವರ ರಕ್ತ ಹೀರುತ್ತಿರುವ ಆ ದೇಶ ದೇಶವೋ ಅಥವಾ ನರಕವೋ? ಅದೊಂದು ಧರ್ಮವೊ. ಇಲ್ಲವೆ ಪಿಶಾಚಿಯ ನೃತ್ಯವೋ?....

[c.w.vol. VI, p.253-54]

ಕವಿತೆ

ವಸಂತದಲ್ಲೊಂದು ಕನಸು

ಗಡಿಯಂಚಿನ ದಾರಿಯಲ್ಲಿ
ಸಂಜೆ ಸೂರ್ಯ ಸುಸ್ತಾಗಿ
ಮನೆಗೆ ಮರಳುವ ಹೊತ್ತು

ತುಟಿಗಳಂಚಿನ ನಗು
ಎಲ್ಲೆಗಳ ದಾಟಿ
ವಿನಿಮಯಿಸುವ ಹೊತ್ತು

ಎರಡೂ ಬದಿಯ ಊರುಗಳಲಿ
ಅವ್ವಂದಿರು ಮಕ್ಕಳಿಗೆ
ಚಂದಪ್ಪನನು ತೋರಿ
ಕೈ ತುತ್ತು ಉಣಿಸುವ ಹೊತ್ತು

ದಣಿದ ಜೀವಗಳು
ಕೆಮ್ಮುತ್ತ ಕುಳಿತ ಹೊತ್ತು
ಉರಿವ ಒಲೆಯ ಮುಂದೆ
ಅವ್ವ ರೊಟ್ಟಿ ಸುಡುವ ಹೊತ್ತು

ಅಪ್ಪನ ತೊಡೆಯೇರಿ
ಕುಳಿತ ಮಗಳ ಕಂಗಳು
ಸಾರಿ ಸಾರಿ ಹೇಳುತಿವೆ
ಯುದ್ಧ
ಮಾಡುವುದಾದರೆ ಮಾಡಿ
ಬಾಂಬು ಬಂದೂಕುಗಳ
ವಿರುದ್ಧ
ಗೂರಲು ಕೆಮ್ಮಿನ ಅಪ್ಪ
ಗೋಡೆಯಿಂದಾಚೆಗಿನ ಜಗವ
ನೋಡದ ಅಮ್ಮೀಜಾನ್
ಹೊಂಬಗಳ ಜೊತೆಗೂಡಿ
ಆಟವಾಡುವ ನನ್ನ ತಮ್ಮಂದಿರನು ಬಿಟ್ಟು

ಯುದ್ಧ ಮಾಡುವುದಾದರೆ ಮಾಡಿ
ಬಾಂಬು, ಬಂದೂಕುಗಳ
ವಿರುದ್ಧ

ನಟ್ಟ ನಡು ಮನೆಯಲ್ಲಿ
ಎಳೆದ ಗೆರೆಯಗುಂಟ
ನಡೆದರೆ ಗಡಿಯಾದೀತು
ಬೆಸೆದರೆ ಬೆಸುಗೆಯಾದೀತು
ಅವಳಿ ಮಕ್ಕಳ ಹೆತ್ತವ್ವನ
ಕತ್ತರಿಸದ ಕರುಳಬಳ್ಳಿ

ಎದ್ದ ಕೆಂಧೂಳು
ಸಾರಿ ಸೇರಿ ಹೇಳುತಿದೆ
'ಯುದ್ಧ ಕಾರ್ಮೋಡಗಳೇ ದೂರ ಸರಿಯಿರಿ'
ಯಾರೋ ಸಿಡಿದರೆಂದು
ನೀವೂ ಸಿಡಿಯದಿರಿ

ಚರಿತ್ರೆಯ ಪುಟಗಳ ತುಂಬಾ ಯಾರೋ ಬಿಸುಟ
ಕಲ್ಲು ಮುಳ್ಳುಗಳ
ಚಿತ್ರ

ಯಾರೋ ಬಿತ್ತಿದ
ಬಂದೂಕು, ಬಾಂಬಿನ ಬೀಜಗಳು
ಮೊಳಕೆಯೊಡೆದು
ಯಾರನ್ನೋ ಸುಟ್ಟ ವಾಸೆ
ಪುಟ ಪುಟಗಳ ತುಂಬಾ

ಮುದ್ದು ಮೊಗದ
ಜೋಡು ಜಡೆಗಳಲಿ
ಮುಡಿದ ಮೊಗ್ಗು ಬಿರಿದು
ಹೂವಾಗಿ ಅರಳಿ ನಗುವ ಚಿತ್ರ

ಈ ಬಾವುಟದ ಕರೆಗೆ
ಆ ಬಾವುಟದ ಮುಗುಳ್ನಗೆ
ತಂಗಾಳಿ ಬೀಸಿ ಬಂದು
ತಲೆದೂಗಿದಂತೆ
ವಸಂತದಲ್ಲೊಂದು
ಹರುಷದಾ ಕನಸು.

ಬಿ.ಶ್ರೀನಿವಾಸ, ಹಾವೇರಿ



ಮಾರ್ಚ್ 11 ರಂದು ಬಾಬಾಬುಡನ್‌ಗಿರಿಯಲ್ಲಿ ನಡೆದ ಉರುಸ್‌ನಲ್ಲಿ ಹಿಂದೂ ಮುಸ್ಲಿಂ ಭೇದವಿಲ್ಲದೆ ಸಹಸ್ರಾರು ಸಂಖ್ಯೆಯಲ್ಲಿ ಶ್ರದ್ಧೆಯಿಂದ ಪಾಲ್ಗೊಂಡಿರುವ ಜನತೆ

ಎದೆಯಲ್ಲಿ ಕೆಂಪು ಕಾವ್ಯ ಬರೆದ ಒಡನಾಡಿಯ ನೆನಪುಗಳು

1980ನೇ ಇಸ್ವಿ, ಹೊಳಲಿನ ಸಂತೆ ಬಯಲಿನಲ್ಲಿ ದಿನಾಟಕ ಪ್ರದರ್ಶನ ನಡೆದಿತ್ತು. ರಂಗ ಕ್ಷೆಯಲ್ಲಿ ಕಂಪನಿ ನಾಟಕಗಳನ್ನು ಮಾತ್ರ ನೋಡಿದ್ದ ಗೆ ವೇಷ ಭೂಷಣಗಳಿಲ್ಲದ ನಾಟಕ ಕುತೂಹಲ ಳಿಸಿತು. ಅಂದು ಪ್ರದರ್ಶನಗೊಂಡ 'ಬೆಲ್ಚಿ' ನಾಟಕ ಭಾವನೆಗಳನ್ನು ಬಡಿದೆಬ್ಬಿಸಿತು. ಭೂ ಮಾಲಕರ ರ್ಜನ್ಯಕ್ಕೆ ಸುಟ್ಟು ಕರಕಲಾದ ದಲಿತರ ಬದುಕಿನ ರುಣ ಕಥೆ ನನ್ನಲ್ಲಿ ಆವೇಶವುಕ್ಕಿಸಿತು. ಧಣಿಗಳ ನೆಗಳಲ್ಲಿ ಜೀತದಾಳಾಗಿ ದುಡಿದು ನೋವುಂಡು ದ ನನಗೆ ಅವರ ದೌರ್ಜನ್ಯದ ಕ್ರೂರ ಮುಖಗಳ ಚಿಯುವಿತ್ತು. ಜುಬ್ಬ ಧರಿಸಿ, ಕುರುಚಲು ಗಡ್ಡ ಟ್ಟಿದ್ದ ಸಾಧಾರಣ ಮೈಕಟ್ಟಿನ ಆ ವ್ಯಕ್ತಿ ತನ್ನ ಕಂಚಿನ ಠದಲ್ಲಿ ಹಾಡಿದ ಹೋರಾಟದ ಹಾಡುಗಳು, ದಿನಗಳ ಕಾಲ ನನ್ನ ಮನಸ್ಸಿನಲ್ಲಿ ಗುಂಯ್ ತ್ತಿದ್ದವು.....

ಪಿ.ಆರ್.ವೆಂಕಟೇಶ್ ನನ್ನನ್ನು ಹಡಗಲಿಗೆ ದೊಯ್ದು ಎಸ್ ಎಸ್ ಹಿರೇಮಠ್‌ರ ಪರಿಚಯ ಾಡಿಸಿದರು. ಅಲ್ಲಿಂದ ವಾರಕ್ಕೊಮ್ಮೆ ಹಡಗಲಿಗೆ ೋಗುವ ಪರಿಪಾಠವಿಟ್ಟುಕೊಂಡೆ. ಹಾಗೆ ೋದಾಗಲೆಲ್ಲಾ ಹಿರೇಮಠ್‌ರ ಮನೆಯಲ್ಲಿ ಊಟದ ಜೊತೆಗೆ ಮಾರ್ಕ್ಸ್‌ವಾದದ ಪಾಠವೂ ಡೆಯುತ್ತಿತ್ತು. ಸಾಧಾರಣ ವ್ಯಕ್ತಿಯಾಗಿದ್ದ ನನ್ನನ್ನು ಲವೇ ದಿನಗಳಲ್ಲಿ ಹಿರೇಮಠ್ ಮತ್ತು ಪಿ.ಆರ್. ವೆಂಕಟೇಶ್ ಒಬ್ಬ ಹೋರಾಟಗಾರರನ್ನಾಗಿ ೂಪಿಸಿದರು. 1983ರಲ್ಲಿ ಕೆ.ಇ.ಬಿ. ಯಲ್ಲಿ ಅಪ್ರೆಂಟಿಸ್ ತರಬೇತಿ ಪಡೆಯಲು ದಾವಣಗೆರೆಗೆ ಹೋದೆ. ದಾವಣಗೆರೆಯಲ್ಲಿದ್ದಾಗಲೂ ಹಿರೇಮಠ್‌ರೊಡನೆ ನಿರಂತರ ಸಂಪರ್ಕದಲ್ಲಿದ್ದೆ ಪತ್ರದ ಮೂಲಕ ನನಗೆ ಮಾರ್ಗದರ್ಶನ ತ್ತಿದ್ದರು. ಅವರು ಬರೆದ ಪತ್ರವೊಂದರ ಸಾಲುಗಳು ಇಂತಿವೆ. "ದಾವಣಗೆರೆ ಒಂದು ಕೆಂಪು ಪಟ್ಟಣ ನೀವು ಅಂಥಲ್ಲಿ ಒಂದಿಷ್ಟು ದೀರ್ಘಕಾಲ ಕಳೆಯುವ ಸನ್ನಿವೇಶದಲ್ಲಿದ್ದೀರಿ. ಅದರ ಎಲ್ಲಾ ಸದುಪಯೋಗ ಮಾಡಿಕೊಳ್ಳಬೇಕು. ಹೆಚ್ಚಿನ ಸಂಗಾತಿಗಳ ಸ್ನೇಹ ಮತ್ತು ಅವರಲ್ಲಿರುವ ಗ್ರಂಥಗಳ ಒಡನಾಟ, ನೀವು ಅಲ್ಲಿ ಹೋಗಿರುವ ಉದ್ದೇಶ ಇವೆಲ್ಲಾ ಸಫಲವಾಗಬೇಕು...."

ಹಿರೇಮಠ್‌ರ ಪತ್ರದ ಈ ಸಾಲುಗಳು ನನಗೆ ಸ್ಪೂರ್ತಿ ನೀಡುತ್ತಿದ್ದವು. ಮಾರ್ಕ್ಸ್‌ವಾದದ ಅಧ್ಯಯನ ಮತ್ತು ಹಿರೇಮಠ್‌ರ ಮಾರ್ಗದರ್ಶನ ಸ್ಪೂರ್ತಿಯ ಸೆಲೆಯಾಯಿತು.

ನನಗೆ ಅವರೊಂದಿಗೆ ಭಿನ್ನಾಭಿಪ್ರಾಯವಿದ್ದರೂ ಅವರ ಬಗ್ಗೆ ಗೌರವವೂ ಇತ್ತು. ಬಳ್ಳಾರಿ ಜಿಲ್ಲೆಯಲ್ಲಿ ಏನೆಲ್ಲಾ ಕಷ್ಟ ಅವಮಾನ, ದೈಹಿಕ ಹಲ್ಲೆಗಳನ್ನು ಎದುರಿಸಿ ಎಡ ಚಳುವಳಿಯನ್ನು ಕಟ್ಟಿ ಬೆಳೆಸಲು ಅವರು ಮಾಡಿದ ತ್ಯಾಗವನ್ನು ಯಾರೂ ಮರೆಯಲು ಸಾಧ್ಯವಿಲ್ಲ.

ಇತ್ತೀಚೆಗೆ ಹಿರೇಮಠ್‌ರಿಗೆ ಕ್ಯಾನ್ಸರ್ ಆಗಿದೆ ಎಂಬ ಸುದ್ದಿ ತಿಳಿದು ಬೆಚ್ಚಿ ಬಿದ್ದೆ. ಕಾಂ:ಎಸ್‌ವೈ ಗುರುಶಾಂತ್‌ರವರಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ದಿನಾಂಕ:05.03.09ರಂದು ಮುಂಜಾನೆ ಚಹಾ ಕುಡಿಯುತ್ತಾ ಕುಳಿತಿದ್ದೆ. ಕಾಂ: ಎಸ್.ವೈ.ಗುರುಶಾಂತ್‌ರಿಂದ ಮೆಸೇಜ್ ಬಂತು. ಹಿರೇಮಠ್ ನಿಧನ ಹೊಂದಿದ್ದಾರೆ ಎಂಬ ಮೆಸೇಜ್ ನೋಡಿ ದಿಗ್ಭ್ರಾಂತನಾದೆ. ಹಿರೇಮಠ್‌ರು ನನ್ನಲ್ಲಿ ಬಿತ್ತಿದ್ದ ಕೆಂಪುಕಾವ್ಯದ ಬೀಜಗಳು ಮರವಾಗಿ ಬೆಳೆದು ನಿಂತಿವೆ. ಕ್ರಾಂತಿಕಾರಿಗೆ ಸಾವಿಲ್ಲ ಎಂಬುದಕ್ಕೆ ಹಿರೇಮಠ್‌ರೇ ಸಾಕ್ಷಿ. ಅಗಲಿದ ಹಿರಿಯ ಗೆಳಯನಿಗೆ ಕೆಂಪು ವಂದನೆಗಳು.

ಹುಲಿಕಟ್ಟಿ ಚನ್ನಬಸಪ್ಪ, ಸಿರುಗುಪ್ಪ

ಇದ್ದದ್ದು ಇದ್ದಾಂಗ

'ಮುದಿಹದ್ದು'

"ಮಾಜಿ ಪ್ರಧಾನಿ ದೇವೇಗೌಡ ಮುದಿಹದ್ದು ಆಗಿದ್ದರೂ ಅವರಿಗೆ ಬುದ್ದಿಯಿಲ್ಲ. ಬುದ್ದಿ ಇಲ್ಲದ ದೇವೇಗೌಡರ ಜೊತೆ ಬುದ್ದಿ ಜೀವಿಗಳು ಹೊರಟಿದ್ದಾರೆ.... ವಿಮಾನ ನಿಲ್ದಾಣ ಅಲ್ಲಿಯೇ ಸ್ಥಾಪಿಸುವುದು ಶತಸಿದ್ಧ. ರೈತರೇ ಈಗ ನನ್ನ ಬಳಿ ಬಂದು 'ಯಾವಾಗ ವಿಮಾನ ನಿಲ್ದಾಣ ಸ್ಥಾಪಿಸುತ್ತೀರಿ'? ಎಂದು ಕೇಳಿಕೊಳ್ಳುತ್ತಾರೆ. ಅಂತಹ ವಾತಾವರಣ ಸೃಷ್ಟಿಯಾಗಿದೆ"

-ಜನಾರ್ಧನ ರೆಡ್ಡಿ,
ಬಿಜೆಪಿ ಸಚಿವ, 'ಗಣಧಣಿ'

"ಮೈತ್ರಿ ಮುರಿದು ಬಿದ್ದಿದೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ 24 ಅಭ್ಯರ್ಥಿಗಳನ್ನು ಘೋಷಿಸಿದ ಕೂಡಲೇ ಮೈತ್ರಿಯ ಶ್ರದ್ಧಾಂಜಲಿ ಬರೆದಾಗಿದೆ. .. ಒಟ್ಟು 80 ಸ್ಥಾನಗಳಲ್ಲಿ ಕನಿಷ್ಠ 25 ಸ್ಥಾನಗಳನ್ನು ನೀಡುವಂತೆ ್ರೆಸ್ ಆಗ್ರಹಿಸಿದೆ. ಆದರೆ ಸಮಾಜವಾದಿ ಪಕ್ಷ ಗರಿಷ್ಠ 17 ಸ್ಥಾನಗಳನ್ನು ಮಾತ್ರ ನೀಡಲು ಸಾಧ್ಯ."

- ಅಮರಸಿಂಗ್
ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ

"ಕುಟುಂಬ ರಾಜಕಾರಣ ಟೀಕಿಸಿಲ್ಲ"

"ಶಿವಮೊಗ್ಗದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ರಾಘವೇಂದ್ರ, ವಿಧಾನಸಭೆ ಚುನಾವಣೆಯಲ್ಲಿ ನನ್ನ ಗೆಲುವಿಗೆ ಶ್ರಮಿಸಿ ಮತದಾರರೊಂದಿಗೆ ಸಂಪರ್ಕ ಸಾಧಿಸಿದ್ದಾರೆ. ಇದರಿಂದಾಗಿ ಅಲ್ಲಿನ ಜನರು, ಪಕ್ಷದ ಮುಖಂಡರು ರಾಘವೇಂದ್ರನೇ ಅಭ್ಯರ್ಥಿಯಾಗಬೇಕು ಎಂದು ಬಯಸಿದ್ದಾರೆ. ಜೊತೆಗೆ ಹೈಕಮಾಂಡ್ ಕೂಡ ರಾಘವೇಂದ್ರನನ್ನು ಗುರುತಿಸಿದೆ.

ಗೆಲುವಿನ ಸೂತ್ರಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವ ಬಿಜೆಪಿಗೆ ರಾಘವೇಂದ್ರ ಸೂಕ್ತ ಅಭ್ಯರ್ಥಿಯಾಗಿದ್ದಾನೆ. ಕುಟುಂಬ ರಾಜಕಾರಣ ಬಗ್ಗೆ ತಾವು ಎಂದಿಗೂ ಮಾತನಾಡಿಲ್ಲ. ಸ್ವಾತಂತ್ರ್ಯ ಬಂದ ನಂತರ ಅಪ್ಪ ಮಕ್ಕಳು ಅಧಿಕಾರ ಅನುಭವಿಸುವುದು ನಡೆದೇ ಇದೆ. ಇದನ್ನು ವಿರೋಧಿಸುವುದು ಸಾಧ್ಯವೇ?"

- ಬಿ.ಎಸ್.ಯಡಿಯೂರಪ್ಪ,
ಕರ್ನಾಟಕ ಮುಖ್ಯಮಂತ್ರಿ, ಲೋಕಸಭಾ ಚುನಾವಣೆಯಲ್ಲಿ ತಮ್ಮ ಮಗನ ಸ್ಪರ್ಧೆ ಸಮರ್ಥಿಸುತ್ತಾ,

ಜೀವಂತಿಕೆ ಉಳಿಸಿಕೊಂಡಿದ್ದು ಹಿರೇಮಠರ ಒಂದು ನೆನಪು



ಎಸ್. ಹಿರೇಮಠರು ಮೂಲತ: ಬಂಡು ಕೋರ ವ್ಯಕ್ತಿತ್ವದ ಲೇಖಕರು. ತನಗನಿಸಿದ್ದನ್ನು ಹೊಟ್ಟೆಯಲ್ಲಿಟ್ಟುಕೊಳ್ಳದೇ ಅವಸರವಾಗಿ ಹೇಳಿಬಿಡುವ ತವಕ ಅವರನ್ನು ಯಾವತ್ತೂ ಕೈಬಿಡಲಿಲ್ಲ.

ರಮ್ಯ ಎನಿಸುವ ಅವಾಸ್ತವಾದಿ ಆದರ್ಶವೊಂದು ಯಾವಾಗಲೂ ಅವರ ಬಳಿ ಸುಳಿದಾಡುತ್ತಿತ್ತು. ಕೆಲವೊಮ್ಮೆ ಅವರ ಅದೇ ಸವಾರಿ ಕೂಡಾ ಮಾಡುತ್ತಿತ್ತು.; ಹೀಗಾಗಿ ಅವರನ್ನು ಹೀಗೆ ಎಂದು ಹೇಳಲು ಬರದಷ್ಟು ವ್ಯಕ್ತಿತ್ವ ಅವರದ್ದಾಗಿತ್ತು. ಹೀಗೆ ಸಾಮೂಹಿಕ ಸಂಘಟನೆಗಳು, ಪಕ್ಷ ಕಟ್ಟುವಲ್ಲಿ ಅವರದ್ದು ಒಂದು ಗಮನಿಸಬೇಕಾದ ಕೊಡುಗೆಯೇ.

ಕವಿ, ಚಿಂತಕ, ನಾಟಕಕಾರ, ಹೋರಾಟಗಾರ, ಸಂಶೋಧಕ ಹೀಗೆ ಬಹುಬಗೆಯ ಕೃಷಿ ಮಾಡುವಂತೆ ರೂಪಿಸಿದ್ದು ಹೋರಾಟದ ವಿದ್ಯಮಾನಗಳೇ ಆಗಿವೆ.

1974 ರಲ್ಲಿ ಹೊಸಪೇಟೆ ವಿಜಯನಗರ ಕಾಲೇಜ್‌ಗೆ ಕನ್ನಡ ಉಪನ್ಯಾಸಕರಾಗಿ ಅವರು ಬಂದಿದ್ದರು. ಆಗ ತಾನೇ ಕನ್ನಡ ಎಂ.ಎ.ದಲ್ಲಿ ಬಂಗಾರದ ಪದಕ ಪಡೆದಿದ್ದರು. ಅತ್ಯಂತ ಸ್ಫುರದ್ರೂಪಿಯೂ ಆಗಿದ್ದ ಅವರ ವಿಚಿತ್ರ ನಡವಳಿಕೆ, ಆಗಿನ ವಿದ್ಯಾರ್ಥಿಗಳಲ್ಲಿ ಅಪಾರ ಕುತೂಹಲಕ್ಕೆ ಕಾರಣವಾಗಿತ್ತು. ನವ್ಯ ಕವಿತೆಗಳ ಸಂಕಲನವೊಂದನ್ನು ಅದೇ ಸುಮಾರಿಗೆ ಹೊರಗೆ ತಂದರು. ಆ ಸಂಕಲನದಲ್ಲಿ ಬಹುತೇಕ ಕವಿತೆಗಳ ಸ್ಥಾಯಿಭಾವ ಕಾಮವಾಗಿತ್ತು. ನಂತರ ಅವರು ಹೊರಳಿದ್ದು ಗಾಂಧಿವಾದದ ಕಡೆಗೆ. ಗಾಂಧಿವಾದ ಅವರನ್ನು ಎಷ್ಟು ಪ್ರೇರೇಪಿಸಿತು ಎಂದರೆ ಚರಕ ತಿರುಗಿಸುವುದು ಅವರ ನಿತ್ಯದ ಕಾಯಕವಾಗಿತ್ತು. ಖಾದಿ ಬಟ್ಟೆಗಳನ್ನೇ ಧರಿಸಲಾರಂಭಿಸಿದರು. ಈ ನಡುವೆ ತುರ್ತು ಪರಿಸ್ಥಿತಿ, ಕರ್ನಾಟಕದಲ್ಲಿ ನರಗುಂದ ರೈತ ಬಂಡಾಯ, ಸಮುದಾಯ, ಬಂಡಾಯ, ದಲಿತ ಚಳುವಳಿಗಳ ಹುಟ್ಟು ಅವರನ್ನು ಸೆಳೆಯದೇ ಬಿಡಲಿಲ್ಲ. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಮಾರುಹೋಗಿ 'ಮನುಷ್ಯನೆಲ್ಲಿ?' ಎಂದು ಕೇಳಲಾರಂಭಿಸಿದ ಹಿರೇಮಠರು ಸಂಪೂರ್ಣವಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದು ಈ ತರಹದ ಸಂಘಟನೆಗಳ ಜೊತೆಯಲ್ಲಿ. ಸರ್ವಾಧಿಕಾರಿ ಕಾಂಗ್ರೆಸ್ ವಿರುದ್ಧ ಸೆಣಸಾಡುತ್ತಿದ್ದ ಈ ಎಲ್ಲಾ ಸಂಘಟನೆಗಳ ಒಂದಂಶದ ರಾಜಕೀಯ ಕಾರ್ಯಕ್ರಮ ಸದ್ಯಕ್ಕೆ ಗೆದ್ದುಬಿಟ್ಟಿತ್ತು. ಈ ಹುಮ್ಮಸ್ಸು ಮೈ ಮರೆಯುವುದಕ್ಕೆ ಕೂಡಾ ಕಾರಣವಾಯಿತು. ಬಂಡಾಯ, ಸಮುದಾಯಕ್ಕೆ ಹೊಸ ರೂಪ ಕೊಡುವಲ್ಲಿ ಹಿರೇಮಠರು ಹೆಣಗಿದರು. 'ನೂರು ಅಡಿಗಳಣ್ಣ, ಇದು ಬಣ್ಣದ ನಡೆಯಣ್ಣ' ಎಂಬ ಯುದ್ಧವಿರೋಧಿ ವಿಶ್ವಶಾಂತಿ ಸಾರುವ ಜಾಥಾ ಸಂಘಟಿಸಿದರು. ಬೀದಿನಾಟಕಗಳ ಮೂಲಕ ಊರು ಕೇರಿಸುತ್ತಿದ್ದರು.

ಒಂದು ಹಂತದ ನಂತರ ಅವರ ಗಮನ ಸೆಳೆದಿದ್ದು ಸಂಶೋಧನಾ ಕ್ಷೇತ್ರ. ಅಲ್ಲಿಂದಲೂ ಹೆಕ್ಕಿಕೊಂಡುಬಂದು ದಲಿತ ಚಳುವಳಿ, ಹಿಂದುಳಿದ ಜಾತಿಗಳ ಚಳುವಳಿಗೆ ಹೊಸ ಶಕ್ತಿಯನ್ನು ನೀಡುವ ಉದ್ದೇಶದಿಂದ ಆ ಕ್ಷೇತ್ರಕ್ಕೆ ದಾಪುಗಾಲು ಹಾಕಿದರು. ಆಗ ಅವರು ತಡವಿಕೊಂಡಿದ್ದು ಹಬ್ಬಗಳು, ಜಾತ್ರೆಗಳು, ಗ್ರಾಮ ದೇವತೆಗಳು, ಇನ್ನೂ ಒಳಕ್ಕೆ ಹೋದಾಗ ಸಾಂಖ್ಯ, ಕಾಳಮುಖ, ಪಾಶುಪಥ, ಯೋಗಾದಿ ದರ್ಶನಗಳ ಬಗ್ಗೆ 32 ಪುಸ್ತಕಗಳನ್ನು ಹೊರತಂದರು. ಎಂದರೆ ಅವರ ಪರಿಶ್ರಮ ಎಷ್ಟಿತ್ತು ಎಂದು ಗೊತ್ತಾಗುತ್ತದೆ. ಇಷ್ಟೆಲ್ಲಾ ಮಾಡಿದರೂ ಅವರನ್ನು ದಲಿತ ಲೋಕ, ಹಿಂದುಳಿದ ವರ್ಗದಗಳ ಲೋಕ ಅವರನ್ನು ಅರ್ಥ ಮಾಡಿಕೊಳ್ಳಲಿಲ್ಲ. ಸಾಂಸ್ಕೃತಿಕ ಲೋಕವಂತೂ ಈ ಪುಸ್ತಕಗಳ ಬಗ್ಗೆ ಚರ್ಚಿಸಲೇ ಇಲ್ಲ. 'ಅವರ ಜನ ಸಂಸ್ಕೃತಿ ಚಿಂತನೆ' ಒಂದು ಹೊಸ ಬಗೆಯ ಚರ್ಚೆಯನ್ನು ಹುಟ್ಟುಹಾಕುತ್ತದೆ ಎಂದು ಭಾವಿಸಿದ್ದರು. ಅದು ನಡೆಯಲೇ ಇಲ್ಲ. ಬಹುಶ: ಅದಕ್ಕೆ ಬೇರೆ ಬೇರೆ ಕಾರಣಗಳು, ಕಾಲಮಾನ ಎಲ್ಲವೂ ಕಾರಣವಾಗಿರಬಹುದು.

ಮುಗ್ಧವಾಗಿ ಎಲ್ಲರನ್ನೂ ನಂಬುವ ಗುಣ, ಭಿನ್ನಮತೀಯ ಬಂಡುಕೋರತನ, ವರ್ತಮಾನದ ಸದ್ಯದ ಸ್ಥಿತಿಗತಿಗಳ ಬಗ್ಗೆ ಅವರಿಗಿದ್ದ ಅಪೂರ್ಣ ಅರಿವು, ಗೆಳೆಯರಿಗಿಂತ ಹೆಚ್ಚಾಗಿ ಅವರನ್ನು ಇಷ್ಟಪಡುವ ಶಿಷ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಸುತ್ತುವರೆದಿದ್ದರಿಂದ ಅವರು ಒಂದರ್ಥದಲ್ಲಿ 'ಸಮಕಾಲೀನ'ರಾಗಲೇ ಇಲ್ಲ. ಕಾಲದ ಒಂದು ಪಯಣದಲ್ಲಿ ಸದಾವಕಾಲ ಜೀವಂತಿಕೆಯನ್ನುಳಿಸಿಕೊಂಡು ತಪ್ಪೋ, ಸರಿಯೋ ನಡೆಯುತ್ತಾ ಬಂದ ಹಿರೇಮಠರು ನಮ್ಮ ಎಲ್ಲಾ ಸಂಘಟನೆಗಳ ಒಂದು ಮುಖವು ಆಗಿದ್ದಾರೆ. ವಿಚಾರ, ಸಂಘಟನೆ, ಹೋರಾಟದಿಂದ ಅವರನ್ನು ಪ್ರತ್ಯೇಕಿಸಿ ನೋಡಲು ನನಗೆ ಬರುತ್ತಿಲ್ಲವಾದ್ದರಿಂದ ಅವರ ಬಗ್ಗೆ ಇಷ್ಟು ಮಾತ್ರ ಬರೆಯಲು ಸಾಧ್ಯವಾಯಿತು.

ಪರಶುರಾಮ ಕಲಾಲ್

ಸ್ಪೆಕ್ಟ್ರಮ್ ಹಂಚಿಕೆ ಮತ್ತು ಮೊಬೈಲ್ ತಂತ್ರಜ್ಞಾನ ಒಂದು ಲಕ್ಷ ಕೋಟಿ ರೂ.ದಳ ಭಾರಿ ಹಗರಣ

ಸ್ಪೆಕ್ಟ್ರಂ ಎಂಬುದು ಒಂದು ವಿಜ್ಞಾನ-ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯ. ಆ ಬಗ್ಗೆ ಇಲ್ಲಿದೆ ಓದಿ. ಜೊತೆಗೆ ಇಲ್ಲೊಂದು ರಾಜಕೀಯ ಪ್ರಶ್ನೆಯೂ ಇದೆ. 5 ವರ್ಷ ಪೂರೈಸಿದ ಯುಪಿಎ ಸರ್ಕಾರ ತಾನು ಬಾರಿ ಸ್ವಚ್ಛ-ಭ್ರಷ್ಟಾಚಾರ ರಹಿತ ಎಂದು ಹೇಳಕೊಳ್ಳುತ್ತದೆ. ಆದರೆ ವಿವಿಧ ಕಾರ್ಪೋರೇಟ್ ಕಂಪನಿಗಳಿಗೆ ಸ್ಪೆಕ್ಟ್ರಂ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ದೇಶಕ್ಕೆ 1 ಲಕ್ಷ ಕೋಟಿ ರೂಪಾಯಿಗಳನ್ನು ವಂಚಿಸಿದೆ. ಇದೊಂದು ಈ ಶತಮಾನದ ಮಹಾ ಹಗರಣ. ಈ ಕುರಿತೂ ಓದಿ.

ವರ್ಣಪಟ್ಟಿ ಅಥವಾ ಸ್ಪೆಕ್ಟ್ರಮ್: ನಾವು ರೇಡಿಯೋ, ದೂರದರ್ಶನ, ಮೊಬೈಲ್ ಇತ್ಯಾದಿಗಳಿಂದ ಅನೇಕ ಬಗೆಯ ಧ್ವನಿ ಮತ್ತು ದೃಶ್ಯ ಮಾಹಿತಿಗಳನ್ನು ದಿನಂಪ್ರತಿ ಪಡೆಯುತ್ತಿದ್ದೇವೆ. ರೇಡಿಯೋ ಕೇಂದ್ರಗಳು ನಮಗೆ ಧ್ವನಿ ತಲುಪಿಸಲು ಕೆಲವು ತರಂಗಾಂತರಂಗವನ್ನು ಬಳಸುತ್ತವೆ. ಹೀಗೆ ತಂತುರಹಿತ ಸಿಗ್ನಲ್‌ಗಳ (ವೈರ್‌ಲೆಸ್ ಸಿಗ್ನಲ್) ಮೂಲಕ ಧ್ವನಿ ಮತ್ತು ದೃಶ್ಯ ಮಾಹಿತಿ ರವಾನೆ ಮಾಡಲು ನಿರ್ದಿಷ್ಟ ಉಪಕರಣಗಳನ್ನು ನಿರ್ದಿಷ್ಟ ತರಂಗಾಂತರಂಗವನ್ನು ಬಳಸಿಕೊಳ್ಳುತ್ತವೆ. ಇದು ಒಟ್ಟಾರೆ ವರ್ಣಪಟ್ಟ ಅಥವಾ ಸ್ಪೆಕ್ಟ್ರಮ್‌ನ ಒಂದು ಭಾಗದ ಬಳಕೆ ಮಾತ್ರ.

ವಿದ್ಯುದಾಯಸ್ಕಾಂತೀಯ ವಿಕರಣಗಳು :(Electromagnetic radiation): ವಿಶಿಷ್ಟ ಶಕ್ತಿಯನ್ನು ಹೊಂದಿರುವ ವಿದ್ಯುದಾಯಸ್ಕಾಂತೀಯ ವಿಕಿರಣಗಳು ನಮ್ಮ ವಿಶ್ವದಲ್ಲಿ ಎಲ್ಲೆಡೆ ಸದಾ ಪ್ರವಹಿಸುತ್ತಿವೆ. ಈ ವಿದ್ಯುದಾಯಸ್ಕಾಂತೀಯ ವಿಕಿರಣಗಳು ವಿದ್ಯುತ್ ಮತ್ತು ಆಯಸ್ಕಾಂತೀಯ ಶಕ್ತಿಗಳೆರಡನ್ನೂ ಹೊಂದಿವೆ. ಇವುಗಳನ್ನು ವಿಭಾಗಿಸಿ ನೋಡಿದಾಗ ರೇಡಿಯೋ ತರಂಗಗಳು, ಮೈಕ್ರೋ ತರಂಗಳು, ಬರಿಗಣ್ಣಿಗೆ ಕಾಣುವ ಬೆಳಕು, ಇನ್‌ಫ್ರಾರೆಡ್ ತರಂಗಗಳು, ಅಲ್ಟ್ರಾ ವಯಲೆಟ್, ಎಕ್ಸ್‌ರೇ, ಗಾಮಾ ವಿಕಿರಣಗಳು ಕಂಡುಬರುತ್ತವೆ. ಇವುಗಳಲ್ಲಿ ಒಂದು ಸಣ್ಣ ಭಾಗವಷ್ಟೇ ನಮ್ಮ ಬರಿಗಣ್ಣಿಗೆ ಕಾಣುವ ಬೆಳಕು. ಬರಿಯುಗಣ್ಣಿಗೆ ಕಾಣುವ ವರ್ಣಪಟ್ಟ ಅಥವಾ ಸ್ಪೆಕ್ಟ್ರಮ್ ಎಂದು ಕರೆಯುಬಹುದು. ಹೀಗೆ ಹೆಸರಿಸಿದ ವಿವಿಧ ವಿಕಿರಣಗಳನ್ನು ಅವುಗಳ ತರಂಗಾಂತರ (Wave-length) ಮತ್ತು ಆವರ್ತನದ (frequency) ಆಧಾರದ ಮೇಲೆ ಇಂತಹ ವಿಭಜನೆಯನ್ನು ಮಾಡಲಾಗಿದೆ. ಇದನ್ನೇ ಸಾಮಾನ್ಯವಾಗಿ ವರ್ಣಪಟ್ಟಿ ಅಥವಾ ಸ್ಪೆಕ್ಟ್ರಮ್ (Spectrum) ಎಂದು ಕರೆಯುತ್ತಾರೆ. ಚಲಿಸುತ್ತಿರುವ ತರಂಗವೊಂದು ಎರಡು ಬಾರಿ ಪುನರಾವರ್ತನೆಯಾಗುವ ನಡುವಿನ ದೂರವನ್ನು ತರಂಗಾಂತರ ಎಂದು ಕರೆಯಲಾಗುತ್ತದೆ. ಆವರ್ತನ ಎಂದರೆ ಒಂದು ನಿಗದಿತ ಕಾಲಾವಧಿಯಲ್ಲಿ ಜರುಗುವ ಪುನರಾವರ್ತನೆಗಳ ಸಂಖ್ಯೆ.

ಹೀಗಾಗಿ ಇಡೀ ವಿಶ್ವದ ವಿದ್ಯುದಾಯಸ್ಕಾಂತಿಯ ವಿಕಿರಣಗಳೆಲ್ಲವೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ರೇಡಿಯೋ ತರಂಗಗಳ ಆವರ್ತನ ಪಟ್ಟಿಯನ್ನು ನಾವು ರೇಡಿಯೋ ಸುದ್ದಿ, ಮಾಹಿತಿಗಳನ್ನು ರವಾನಿಸಲು ಉಪಯೋಗಿಸಿಕೊಳ್ಳುತ್ತಿದ್ದೇವೆ.

ಸಿಡಿಎಂಎ ಮತ್ತು ಜಿಎಸ್‌ಎಂ ಮೊಬೈಲ್‌ಗಳು:

ನಾವು ಉಪಯೋಗಿಸುತ್ತಿರುವ ಮೊಬೈಲ್‌ಗಳಲ್ಲಿ ಮಾಹಿತಿ ರವಾನೆಗಾಗಿ ಬಳಸುವ ಸಿಗ್ನಲ್‌ಗಳು ಒಂದೋ ಸಿಡಿಎಂಎ (ಕೋಡ್ ಡಿವಿಜನ್ ಮಲ್ಟಿಪಲ್ ಆಕ್ಸೆಸ್) ತಂತ್ರಜ್ಞಾನಾಧಾರಿತ ಆಗಿರುತ್ತವೆ ಇಲ್ಲವೇ ಜಿಎಸ್‌ಎಮ್ (ಗ್ಲೋಬಲ್ ಸಿಸ್ಟಮ್ ಫಾರ್ ಮೊಬೈಲ್ ಕಮ್ಯುನಿಕೇಷನ್) ತಂತ್ರಜ್ಞಾನಾಧಾರಿತ ಆಗಿರುತ್ತವೆ. ಇವೆರಡೂ ತಂತ್ರಜ್ಞಾನದಲ್ಲೂ ರೇಡಿಯೋ ವರ್ಣಪಟ್ಟಿಯನ್ನು ಬಳಕೆದಾರರ ನಡುವೆ ಹಂಚಲು, ಆ ಮೂಲಕ ಮಾಹಿತಿ ರವಾನಿಸಲು ಬಳಸಲಾಗುತ್ತದೆ.ಜಿಎಸ್‌ಎಂ ತಂತ್ರಜ್ಞಾನದಲ್ಲಿ ವಾಸ್ತವವಾಗಿ ಒಂದು ಸಮಯದಲ್ಲಿ ಒಬ್ಬ ಬಳಕೆದಾರ ಮಾತ್ರವೇ ಆಯಾಯ ಛಾನೆಲ್‌ನ್ನು ಉಪಯೋಗಿಸುತ್ತಿರುತ್ತಾನೆ. ಸಿಡಿಎಂಎ ತಂತ್ರಜ್ಞಾನದಲ್ಲಿ ಒಂದೇ ವೇಳೆ ಹಲವು ಬಳಕೆದಾರರು ಬೇಕಾದ ಛಾನೆಲ್‌ನನ್ನು ಬಳಸುತ್ತಿರುತ್ತಾರೆ. ಒಂದು ಸರಳ ಉದಾಹರಣೆ ನೀಡಬಹುದಾದಲ್ಲಿ, ಒಂದು ಭಾಷಣ ಕಾರ್ಯಕ್ರಮ ನಡೆಯುತ್ತಿರುತ್ತೆ ಎಂದು ಭಾವಿಸೋಣ. ಒಬ್ಬ ಭಾಷಣಕಾರನ ನಂತರ ಮತ್ತೊಬ್ಬ ಮಾತನಾಡುವುದು ಜಿಎಸ್‌ಎಂ ತಂತ್ರಜ್ಞಾನಕ್ಕೆ ಉದಾಹರಣೆ. ಅದೇ ಎಲ್ಲಾ ಭಾಷಣಕಾರರು ಬೇರೆ ಬೇರೆ ಭಾಷೆಯಲ್ಲಿ ಒಂದೇ ವೇಳೆ ಭಾಷಣ ಮಾಡಲಾರಂಭಿಸಿದಾಗ ಆಯಾಯ ಭಾಷೆಯನ್ನು ಬಲ್ಲ ಕೇಳುಗರು ತಮಗೆ ಅರ್ಥವಾಗಬಲ್ಲ ಭಾಷೆಯ ಭಾಷಣವನ್ನು ಮಾತ್ರ ಕೇಳುತ್ತಾರೆಯೇ ಹೊರತು ಇತರೆ ಭಾಷಣಗಳನ್ನು ಕೇಳುವುದಿಲ್ಲ. ಇದು ಸಿಡಿಎಂಎ ತಂತ್ರಜ್ಞಾನಕ್ಕೆ ಉದಾಹರಣೆ.




ಮೊಬೈಲ್ ತಂತ್ರಜ್ಞಾನವು ಮಾಹಿತಿಯನ್ನು ರವಾನಿಸುವ ಸಾಮರ್ಥ್ಯಕ್ಕನುಗುಣವಾಗಿ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಪೀಳಿಗೆಯ ತಂತ್ರಜ್ಞಾನ ಎಂದು ಕರೆಯಲಾಗುತ್ತದೆ. ಇದೀಗ ಮೂರನೇ ಪೀಳಿಗೆಯ ಮೊಬೈಲ್ ತಂತ್ರಜ್ಞಾನ ಮಾರುಕಟ್ಟೆ ಪ್ರವೇಶಿಸಿದ್ದು, ಶೀಘ್ರದಲ್ಲೇ ನಾಲ್ಕನೇ ಪೀಳಿಗೆಯ ತಂತ್ರಜ್ಞಾನ ಬರಲಿದೆ. ಪ್ರಸ್ತುತದಲ್ಲಿ ನಾವು ಬಳಸುತ್ತಿರುವ ಎರಡನೇ ಪೀಳಿಗೆಯ ಜಿಎಸ್‌ಎಂ ತಂತ್ರಜ್ಞಾನ ಬರಲಿದೆ. ಪ್ರಸ್ತುತದಲ್ಲಿ ನಾವು ಬಳಸುತ್ತಿರುವ ಎರಡನೇ ಪೀಳಿಗೆಯ ಮೊಬೈಲ್ ತಂತ್ರಜ್ಞಾನದಲ್ಲಿ ಧ್ವನಿ, ಚಿತ್ರ, ಮಾಹಿತಿ, ಇತ್ಯಾದಿ ರವಾನಿಸಲಾಗುತ್ತಿದೆ. ಆದರೆ, ಮೂರನೇ ಪೀಳಿಗೆಯ ತಂತ್ರಜ್ಞಾನದಲ್ಲಿ ವೀಡಿಯೋ, ಹೆಚ್ಚು ಮಾಹಿತಿ, ಇತ್ಯಾದಿಗಳನ್ನು ರವಾನಿಸಬಹುದು.

ಸ್ಪೆಕ್ಟ್ರಮ್ ಹಂಚಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ದ್ರೋಹ: ಸ್ಪೆಕ್ಟ್ರಮ್ ಎಂಬುದು ಶೀಘ್ರ ಮುಗಿದುಹೋಗಬಹುದಾದ ಪರಿಮಿತ ಸಂಪನ್ಮೂಲ: ಅದರ ಹಂಚಿಕೆ ಮಾಡುವಲ್ಲಿ ಕೇಂದ್ರ ಸರ್ಕಾರ ಅನುಸರಿಸಿದ ಧೋರಣೆಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಸುಮಾರು ಒಂದು ಲಕ್ಷ ಕೋಟಿ ನಷ್ಟವುಂಟಾಗಿದೆಯೆಂದು ಅಂದಾಜಿಸಲಾಗಿದೆ. ಈ ನಷ್ಟವು ಪ್ರಮುಖವಾಗಿ ಮೂರು ಮೂಲಗಳಿಂದ ಉಂಟಾಗಿದೆ.

1. ಹೊಸ ಕಂಪನಿಗಳಿಗೆ ಸ್ಪೆಕ್ಟ್ರಮ್ ಹಂಚಿಕೆ ಮಾಡುವಲ್ಲಿ ಅತಿ ಕಡಿಮೆ ಪರವಾನಗಿ ಶುಲ್ಕವನ್ನು ನಿಗದಿಪಡಿಸಿರುವುದು.

2. ಸಿಡಿಎಂಎ ತಂತ್ರಜ್ಞಾನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕಂಪನಿಗಳು ಜಿಎಸ್‌ಎಂ ತಂತ್ರಜ್ಞಾನದ ಮೇಲೂ ಕಾರ್ಯನಿರ್ವಹಿಸುವಂತೆ ವರ್ಗಾವಣೆಗಾಗಿ ಅತಿ ಕಡಿಮೆ ಪರವಾನಗಿ ಶುಲ್ಕ ನಿಗದಿಪಡಿಸಿರುವುದು.

3. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಜಿಎಸ್‌ಎಂ ಆಪರೇಟರುಗಳು ತಾವು ಬಳಸದೇ ಹಾಗೇ ಇಟ್ಟುಕೊಂಡಿರುವ ಹೆಚ್ಚುವರಿ ಸ್ಪೆಕ್ಟ್ರಮ್ ಮೇಲೆ ಯಾವುದೇ ಮಾರುಕಟ್ಟೆ ಶುಲ್ಕ ವಿಧಿಸದೇ ಇರುವುದು.



ಮೊದಲ ಎರಡು ಮೂಲಗಳಿಂದ ರೂ.80 ಸಾವಿರ ಕೋಟಿ ನಷ್ಟವುಂಟಾಗಿದ್ದರೆ, ಕೊನೆಯ ಮೂಲದಿಂದ ರೂ.20 ಸಾವಿರ ಕೋಟಿ ನಷ್ಟ ವುಂಟಾಗಿದೆ.

ಸ್ವತಂತ್ರ ಭಾರತದ ಅತಿ ದೊಡ್ಡ ವಂಚನೆ: ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ಹೋಲಿಸಿದಲ್ಲಿ ಇದರಿಂದುಂಟಾಗಿರುವ ನಷ್ಟದ ಬಾಬತ್ತು ಸುಮಾರು ರೂ.1,50,000 ಕೋಟಿ ತಲುಪುತ್ತದೆ. 2008ನೇ ಸಾಲಿನಲ್ಲಿ ನಮ್ಮ ದೇಶದ ಬಜೆಟ್ ಆಯವ್ಯಯದಲ್ಲಿ ಒಟ್ಟು ಸಾಮಾಜಿಕ ಮೂಲಭೂತ ಸೌಕರ್ಯಗಳಾದ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಹಂಚಿಕೆ ಮಾಡಿರುವ ಮೊತ್ತಕ್ಕೆ ಈ ನಷ್ಟ ಸಮ. ನಮ್ಮ ಸ್ವತಂತ್ರ ಭಾರತದಲ್ಲೇ ಅತಿ ದೊಡ್ಡ ವಂಚನೆ ಇದಾಗಿದ್ದರೂ ಕೂಡ ಕಾಂಗ್ರೆಸ್ ಪಕ್ಷದವರು ಒತ್ತಟ್ಟಿಗಿರಲಿ, ಬಿಜೆಪಿ ಅಥವಾ ಇನ್ನಾವುದೇ ಪಕ್ಷವೂ ಇದರ ವಿರುದ್ಧ ಸೊಲ್ಲೆತ್ತದೆ ತಾವು ಆಳುವ ವರ್ಗದ ಬಾಲಂಗೋಚಿಗಳೆಂದು ಸಾಬೀತುಪಡಿಸಿಕೊಂಡವು.

ಲಾಭ ಪಡೆದ ಚೋರ ಕಂಪನಿಗಳು: ಮೊದಲ ಬಾರಿಗೆ ಸ್ಪೆಕ್ಟ್ರಮ್ ಹಂಚಿಕೆ ಮಾಡಿದ್ದು 2001ರಲ್ಲಿ. ಆಗ ಎರಡನೇ ಪೀಳಿಗೆಯ ಸ್ಪೆಕ್ಟ್ರಮ್‌ನ್ನು 'ಮೊದಲು ಬಂದ ಕಂಪನಿಗಳಿಗೆ ಮೊದಲ ಆದ್ಯತೆ' ಎಂಬ ನಿಯಮಾನುಸಾರ ವಿವಿಧ ಕಂಪನಿಗಳಿಗೆ ನಿರ್ದಿಷ್ಟ ಶುಲ್ಕ ನಿಗದಿಪಡಿಸಿ ಹಂಚಿಕೆ ಮಾಡಲಾಗಿತ್ತು. ಈಗಲೂ ಕೂಡ ಮೂರನೇ ಪೀಳಿಗೆಯ ಸ್ಪೆಕ್ಟ್ರಮ್‌ನ್ನು ಹಂಚಿಕೆ ಮಾಡಲು ತಾನು ಅದೇ ಮಾನದಂಡ ಅನುಸರಿಸಿರುವುದಾಗಿ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಹರಾಜು ಮುಖಾಂತರ ಹಂಚಿಕೆ ಮಾಡಿದ್ದಲ್ಲಿ ಸ್ಪೆಕ್ಟ್ರಮ್‌ನ ನೈಜ ಮಾರುಕಟ್ಟೆ ಬೆಲೆ ನಮಗೆ ತಿಳಿಯುತ್ತಿತ್ತು. ಅಥವಾ ಮಾರುಕಟ್ಟೆ ಬೆಲೆಗೆ ಸರಿಸಮನಾಗಿ ಶುಲ್ಕ ನಿಗದಿಪಡಿಸಿದ್ದಲ್ಲಿ ನಷ್ಟವುಂಟಾಗುತ್ತಿರಲಿಲ್ಲ. ಆದರೆ 2001 ರಲ್ಲಿ ನಿಗದಿಪಡಿಸಿದ್ದ ಬೆಲೆಗೆ ಅದೂ ಮೂರನೇ ಪೀಳಿಗೆಯ ಸ್ಪೆಕ್ಟ್ರಮ್ ಹಂಚಿಕೆ ಮಾಡಿರುವುದು ಸರ್ಕಾರ ಮೊಬೈಲ್ ಕಂಪನಿಗಳ ಹಿತಾಸಕ್ತಿಗಾಗಿ ದೇಶದ ಹಿತಾಸಕ್ತಿಯನ್ನೇ ಬಲಿ ನೀಡಿರುವುದು ಖಂಡನೀಯ. ಉದಾಹರಣೆಗೆ, ಸ್ಪೆಕ್ಟ್ರಮ್ ಪಡೆಯಲು ಕೇವಲ ರೂ.1651 ಕೋಟಿ ಪರವಾನಗಿ ಶುಲ್ಕ ನೀಡಿದ ಯೂನಿಟೆಕ್ ಕಂಪನಿಯು ಅದನ್ನು ಬಳಸಲು ನಯಾಪೈಸೆ ಖರ್ಚು ಮಾಡದೆ, ತನ್ನ ಶೇ.60 ರಷ್ಟು ಷೇರನ್ನು ಟಲೀನರ್ ಕಂಪನಿಗೆ ಮಾರುವ ಮೂಲಕ ರೂ. 6120 ಕೋಟಿ ಗಳಿಸಿತು. ಹೀಗೆ ಹಲವು ಸಾವಿರ ಕೋಟಿ ಲಾಭ ಕೊಳ್ಳೆ ಹೊಡೆದ ಕಂಪನಿಗಳೆಂದರೆ ರಿಲಾಯನ್ಸ್, ಟಾಟಾ, ಭಾರತಿ, ವೋಡಾಫೋನ್, ಐಡಿಯಾ ಸೆಲ್ಯೂಲರ್, ಸ್ವಾನ್, ಸ್ಪೈಸ್ ಇತ್ಯಾದಿ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH

ಸಂಪಾದಕರ ಫೈಲ್.